ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು–೫೭೦ ೦೦೬

KARNATAKA STATE OPEN UNIVERSITY

Muktha Gangotri, Mysore-570 006

# ಎಂ.ಎ. (ಅಂತಿಮ)

# ಸಾರ್ವಜನಿಕ ಆಡಳಿತ

# ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತ

ಕೋರ್ಸ್–10

ಬ್ಲಾಕ್: 1–7

# ಕರಾಮುವಿ

## ರಾಷ್ಟ್ರೀಯ ಅಂತಾರಾಷ್ಟ್ರೀಯ ಮಾನ್ಯತೆ

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಜೂನ್ ೧, ೧೯೯೬ ರಂದು ಸರ್ಕಾರಿ ಅದೇಶ ಸಂಖ್ಯೆ : ED1/UOV/dated 12th February 1996 (Karnataka State Open University Act - 1992) ರ ಪ್ರಕಾರ ಕರ್ನಾಟಕ ರಾಜ್ಯಪಾಲರ ಅನುಮೋದನೆಯೊಂದಿಗೆ ಪೂರ್ಣಪ್ರಮಾಣದ ವಿಶ್ವವಿದ್ಯಾನಿಲಯವಾಗಿ ಸ್ಥಾಪನೆಗೊಂಡಿತು. ರಾಜ್ಯದ ಶೈಕ್ಷಣಿಕ ಪದ್ಧತಿಯಲ್ಲಿ 'ದೂರ ಶಿಕ್ಷಣ ಪದ್ಧತಿ'ಯನ್ನು ಆರಂಭಿಸುವ ಮತ್ತು ಉತ್ತೇಜಿಸುವ ದೃಷ್ಟಿಯಿಂದ ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಅಧಿನಿಯಮದ ಮೂಲಕ ಸ್ಥಾಪಿಸಲಾಯಿತು.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ ೧೯೯೨ ರಂತೆ ಈ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ಒಳಗೆ ಸಂಸ್ಥೆಗಳನ್ನು, ಕಾಲೇಜುಗಳನ್ನು, ಪ್ರಾದೇಶಿಕ ಕೇಂದ್ರಗಳನ್ನು ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ, ನಿರ್ವಹಿಸುವ ಮತ್ತು ಮಾನ್ಯತೆ ಕೊಡುವ ಅಧಿಕಾರವನ್ನು ಹೊಂದಿದೆ. ಅಗತ್ಯವಿದ್ದ ಸಂದರ್ಭಗಳಲ್ಲಿ ಕರ್ನಾಟಕ ರಾಜ್ಯದ ಹೊರಗಿನ ಸ್ಥಳಗಳಲ್ಲೂ ಪ್ರಾದೇಶಿಕ ಕೇಂದ್ರ ಮತ್ತು ಅಧ್ಯಯನ ಕೇಂದ್ರಗಳನ್ನು ತೆರೆಯಲು ಅಧಿಕಾರವನ್ನು ಪಡೆದಿದೆ.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳು 'ದೂರ ಶಿಕ್ಷಣ ಮಂಡಳಿ' (DEC), ಮಾನವಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD), ನವದೆಹಲಿಯ ಮಾನ್ಯತೆಯನ್ನು ಪಡೆದಿವೆ.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ ನವದೆಹಲಿಯಲ್ಲಿರುವ 'ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘ'ದ (AIU) ಖಾಯಂ ಸದಸ್ಯತ್ವವನ್ನು ಹೊಂದಿದೆ.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ 'ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯಗಳ ಸಂಘ' (ACU), ಲಂಡನ್, ಯುನೈಟೆಡ್ ಕಿಂಗ್‌ಡಮ್‌ನ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ. ಸದಸ್ಯತ್ವದ ಸಂಖ್ಯೆ : ZKASOPENUINI.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ ರಿಂದ 'ಏಷಿಯಾದ ಮುಕ್ತ ವಿಶ್ವವಿದ್ಯಾನಿಲಯಗಳ ಸಂಘ' (AAOU), ಬೀಜಿಂಗ್, ಚೀನಾ – ಇದರ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' (COL) ಕೆನಡ, ಇದರ ಸಹಯೋಗವನ್ನು ೨೦೦೩ ರಿಂದ ಹೊಂದಿದೆ. 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' ಎನ್ನುವುದು ದೂರ ಶಿಕ್ಷಣದಲ್ಲಿ ಮುಕ್ತಕಲಿಕಾ ತಿಳಿವಳಿಕೆ, ಸಂಪನ್ಮೂಲಗಳು ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಹಂಚುವಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕಾಮನ್‌ವೆಲ್ತ್ ದೇಶಗಳ ಸರ್ಕಾರಗಳಿಂದ ನಿರ್ಮಾಣಗೊಂಡ ಅಂತಾರಾಷ್ಟ್ರೀಯ ಸರ್ಕಾರಿ ಸಂಸ್ಥೆಯಾಗಿದೆ.

**ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು-006.

## ಸಾರ್ವಜನಿಕ ಆಡಳಿತ
## ಎಂ.ಎ. (ಅಂತಿಮ)
## ಪತ್ರಿಕೆ – 10 : ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತ


| ಬ್ಲಾಕ್ : 1 | ಪರಿಚಯ | ಪುಟ ಸಂಖ್ಯೆ |
|---|---|---|
| ಘಟಕ – 1 : | ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತ : ಅರ್ಥ, ಸ್ವಭಾವ ಪ್ರಾಮುಖ್ಯತೆ ಮತ್ತು ಕಾರ್ಯಗಳು – ಅಧ್ಯಯನದ ದೃಷ್ಟಿಕೋನಗಳು | 01 – 08 |
| ಘಟಕ – 2 : | ಅಂತರರಾಷ್ಟ್ರೀಯ ಸಹಕಾರ ಮತ್ತು ಅಂತರರಾಷ್ಟ್ರೀಯ ಸಂಘಟನೆಯ ಪ್ರಾರಂಭ | 09 – 14 |
| ಘಟಕ – 3 : | 19ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘಟನೆ ಮತ್ತು ಪ್ರಮುಖ ಬೆಳವಣಿಗೆಗಳು | 15 – 23 |
| ಘಟಕ – 4 : | 20ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತದ ಪ್ರಮುಖ ಬೆಳವಣಿಗೆಗಳು | 24 – 31 |
| **ಬ್ಲಾಕ್ : 2** | **ರಾಷ್ಟ್ರಗಳ ಸಂಘ (ಲೀಗ್ ಆಫ್ ನೇಷನ್ಸ್)** | |
| ಘಟಕ – 5 : | ರಾಷ್ಟ್ರ ಸಂಘದ ಮೂಲ, ಬೆಳವಣಿಗೆ ಮತ್ತು ಉದ್ದೇಶಗಳು | 32 – 41 |
| ಘಟಕ – 6 : | ರಾಷ್ಟ್ರಗಳ ಸಂಘದ ಅಂಗಗಳು – ಅಸೆಂಬ್ಲಿ ಮತ್ತು ಕೌನ್ಸಿಲ್ | 42 – 47 |
| ಘಟಕ – 7 : | ಕಾರ್ಯಾಲಯ – ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯ | 48 – 53 |
| ಘಟಕ – 8 : | ರಾಷ್ಟ್ರಗಳ ಸಂಘದ ಸಾಧನೆ – ಒಂದು ಮೌಲ್ಯಮಾಪನ | 54 – 65 |
| **ಬ್ಲಾಕ್ : 3** | **ವಿಶ್ವಸಂಸ್ಥೆ** | |
| ಘಟಕ – 9 : | ವಿಶ್ವ ಸಂಸ್ಥೆಯ ಉಗಮ ಮತ್ತು ಅದರ ಉದ್ದೇಶಗಳು | 66– 77 |
| ಘಟಕ – 10 : | ವಿಶ್ವಸಂಸ್ಥೆಯ ಪ್ರಧಾನ ಅಂಗಗಳು – ಸಾಮಾನ್ಯ ಸಭೆ : ಭದ್ರತಾ ಸಮಿತಿ : ಧರ್ಮದರ್ಶಿ ಸಮಿತಿ | 78– 108 |
| ಘಟಕ – 11 : | ಆರ್ಥಿಕ ಮತ್ತು ಸಾಮಾಜಿಕ ಸಮಿತಿ, ಅಂತರರಾಷ್ಟ್ರೀಯ ನ್ಯಾಯಾಲಯ, ಕಾರ್ಯಾಲಯ | 109– 134 |
| ಘಟಕ – 12 : | ವಿಶ್ವ ಸಂಸ್ಥೆಯ ವಿಶೇಷ ಅಂಗ ಸಂಸ್ಥೆಗಳು– ವಿಶ್ವ ಆರೋಗ್ಯ ಸಂಸ್ಥೆ (WHO): ಅಂತರರಾಷ್ಟ್ರೀಯ ಕಾರ್ಮಿಕ ಸಂಘ (ILO): ಅಂತರರಾಷ್ಟ್ರೀಯ ಹಣಕಾಸು ನಿಧಿ (IMF): ಯುನೆಸ್ಕೋ ಮತ್ತು ಅಂತರರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (IBRD): ವಿಶ್ವ ಸಂಸ್ಥೆಗೆ 50 ವರ್ಷಗಳು: ಸಾಧನೆಗಳು ಮತ್ತು ವೈಪಲ್ಯಗಳು: ಇಂದು ವಿಶ್ವ ಸಂಸ್ಥೆ ಎದುರಿಸುತ್ತಿರುವ ಸವಾಲುಗಳು | 135– 163 |

## ಬ್ಲಾಕ್ : 4 ಪ್ರಾದೇಶಿಕ ಸಂಘಟನೆಗಳು


| | | |
|---|---|---|
| ಘಟಕ – 13 : | ಪ್ರಾದೇಶಿಕ ಸಂಘಟನೆಗಳ ಸ್ವರೂಪ, ಪಾತ್ರ ಮತ್ತು ವಿಧಗಳು | 164 – 173 |
| ಘಟಕ – 14 : | ಮಿಲಿಟರಿ ಸಂಘಟನೆಗಳು – ನ್ಯಾಟೋ (NATO): ಮತ್ತು ವಾರ್ಸಾ ಒಪ್ಪಂದ (WARSA PACTS): | 174 – 187 |
| ಘಟಕ – 15 : | ರಾಜಕೀಯ ಸಂಘಟನೆಗಳು – ಅಲಿಪ್ತ ಚಳುವಳಿ, ಅಮೇರಿಕ ರಾಜ್ಯಗಳ ಸಂಘ: ಐರೋಪ್ಯ ಒಕ್ಕೂಟ | 188– 220 |
| ಘಟಕ – 16 : | ಇತರ ಸಂಘಟನೆಗಳು – ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ (ಸಾರ್ಕ್) ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘ (ಏಷಿಯನ್) ಮತ್ತು ಕಾಮನ್ ವೆಲ್ತ್ | 221– 238 |


## ಬ್ಲಾಕ್ : 5 ಸಾಮೂಹಿಕ ಭದ್ರತೆ


| | | |
|---|---|---|
| ಘಟಕ – 17 : | ಅರ್ಥ ಮತ್ತು ಅದರ ಯಶಸ್ಸಿನ ಅಂಶಗಳು | 239– 246 |
| ಘಟಕ – 18 : | ರಾಷ್ಟ್ರಗಳ ಸಂಘದ ಅಡಿಯಲ್ಲಿ ಸಾಮೂಹಿಕ ಭದ್ರತೆ | 247– 253 |
| ಘಟಕ – 19 : | ವಿಶ್ವ ಸಂಸ್ಥೆಯ ಅಡಿಯಲ್ಲಿ ಸಾಮೂಹಿಕ ಭದ್ರತೆ | 254 - 263 |
| ಘಟಕ – 20 : | ಸಾಮೂಹಿಕ ಭದ್ರತೆಯ ಮೌಲ್ಯಮಾಪನ | 264– 269 |


## ಬ್ಲಾಕ್ : 6 ಘರ್ಷಣಾತ್ಮಕ ನಿರ್ಣಯಗಳು


| | | |
|---|---|---|
| ಘಟಕ – 21 : | ಘರ್ಷಣಾತ್ಮಕ ನಿರ್ಣಯಗಳಿಗೆ ಅಂತರರಾಷ್ಟ್ರೀಯ ಕಾನೂನಿನ ಅಡಿಯಲ್ಲಿರುವ ನಿಬಂಧನೆಗಳು – ಶಾಂತಿ ರೂಪಿಸುವುದು, ಶಾಂತಿ ಪಾಲನ ಪಡೆಗಳು | 270– 283 |
| ಘಟಕ – 22 : | ಅಂತರರಾಷ್ಟ್ರೀಯ ವಿವಾದಗಳ ಶಾಂತಿಯುತ ತೀರ್ಮಾನಗಳು | 284– 297 |
| ಘಟಕ – 23 : | ಅಂತರರಾಷ್ಟ್ರೀಯ ವಿವಾದಗಳ ಬಲಾತ್ಕಾರದ ಅಥವಾ ನಿರ್ಬಂಧದ ತೀರ್ಮಾನಗಳು | 298– 307 |
| ಘಟಕ – 24 : | ರಾಯಭಾರತ್ವ, ಅರ್ಥ, ಉದ್ದೇಶಗಳು ಮತ್ತು ರಾಯಭಾರಿಗಳ ಕಾರ್ಯಗಳು | 308– 318 |


## ಬ್ಲಾಕ್ : 7 ಅಂತರರಾಷ್ಟ್ರೀಯ ಆಡಳಿತ


| | | |
|---|---|---|
| ಘಟಕ – 25 : | ಅಂತರರಾಷ್ಟ್ರೀಯ ನಾಗರೀಕ ಸೇವೆ–ಲಕ್ಷಣಗಳು, ಅಂತರರಾಷ್ಟ್ರೀಯ ನಾಗರೀಕ ಸೇವೆಗೆ ಅಗತ್ಯವಾದ ಅರ್ಹತೆಗಳು | 319– 326 |
| ಘಟಕ – 26 : | ಅಂತರರಾಷ್ಟ್ರೀಯ ಸೇವಾ ಸಿಬ್ಬಂದಿಯ ನೇಮಕಾತಿ | 327– 333 |
| ಘಟಕ – 27 : | ಮನಸ್ಥೈರ್ಯ, ವೇತನ ಮತ್ತು ಅಂತರರಾಷ್ಟ್ರೀಯ ನಾಗರೀಕ ಸೇವೆಗೆ ಸಂಬಂಧಿಸಿದ ಇತರ ಸಮಸ್ಯೆಗಳು | 334– 340 |
| ಘಟಕ – 28 : | ಅಂತರರಾಷ್ಟ್ರೀಯ ನಾಗರೀಕ ಸೇವೆಯ ಮುಂದಿರುವ ಸಮಸ್ಯೆಗಳು ಮತ್ತು ಸವಾಲುಗಳು | 341 –346 |

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್.ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಟಿ.ಡಿ. ದೇವೆಗೌಡ**
ಡೀನ್(ಅಧ್ಯಯನ ಕೇಂದ್ರ) ಮತ್ತು ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು – ೬

**ಜಗದೀಶ್ ಬಾಬು ಹೆಚ್.ಕೆ**
ಅಧ್ಯಕ್ಷರು
ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು – ೬


## ಪತ್ರಿಕೆ – ೧ ಪಠ್ಯಕ್ರಮ ನಿರೂಪಕರು


***ಪ್ರೊ. ಎನ್. ಹಾಲಪ್ಪ (ನಿವೃತ್ತ)***
ರಾಜ್ಯಶಾಸ್ತ್ರ ಪ್ರಾಧ್ಯಾಪಕರು
ಮಹಾರಾಣಿಯವರ ಕಾಲೇಜು
ಮೈಸೂರು– 6


*ಬ್ಲಾಕ್ 1. ಘಟಕಗಳು 1 ರಿಂದ 4*
*ಬ್ಲಾಕ್ 2. ಘಟಕಗಳು 5 ರಿಂದ 8*
*ಬ್ಲಾಕ್ 3. ಘಟಕಗಳು 9 ರಿಂದ 12*
*ಬ್ಲಾಕ್ 4. ಘಟಕಗಳು 13 ರಿಂದ 16*
*ಬ್ಲಾಕ್ 5. ಘಟಕಗಳು 17 ರಿಂದ 20*
*ಬ್ಲಾಕ್ 6 ಘಟಕಗಳು 21 ರಿಂದ 24*
*ಬ್ಲಾಕ್ 7. ಘಟಕಗಳು 25 ರಿಂದ 28*


ಕ.ರಾ.ಮು.ವಿ., ನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2014

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸ್‌ಗಳ ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮುಕ್ತಗಂಗೋತ್ರಿ, ಮೈಸೂರು – 6 ಇಲ್ಲಿಂದ ಪಡೆಯಬಹುದು.

# ಪತ್ರಿಕೆ – 10

## ಪರಿಚಯ

## ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತ

ಪ್ರಿಯ ವಿದ್ಯಾರ್ಥಿ

ಈ ಪತ್ರಿಕೆ ಸಾರ್ವಜನಿಕ ಆಡಳಿತದ ವಿದ್ಯಾರ್ಥಿಗಳಿಗೆ ಐದನೆ ಪತ್ರಿಕೆಯಾಗಿದ್ದು ಓದುಗರಲ್ಲಿ ಆಸಕ್ತಿಯನ್ನು ಕೆರಳಿಸುವ ಪತ್ರಿಕೆಯಾಗಿದೆ. ಅಂತರರಾಷ್ಟ್ರೀಯ ಸಂಬಂಧಗಳ ಬೆಳವಣಿಗೆಯಲ್ಲಿ ಅಂತರರಾಷ್ಟ್ರೀಯ ಸಂಘ ಸಂಸ್ಥೆ ಒಂದು ಪ್ರಮುಖ ಸಂಘಟನೆಯಾಗಿದೆ. ಇದರ ಸ್ಥಾಪನೆಯ ಮೂಲ ಉದ್ದೇಶ ರಾಷ್ಟ್ರ–ರಾಷ್ಟ್ರಗಳ ನಡುವಿನ ಸಂಬಂಧವನ್ನು ಭಿನ್ನಾಭಿಪ್ರಾಯಗಳನ್ನು ಮತ್ತು ವಿವಾದಗಳನ್ನು ಬಗೆಹರಿಸಿ ಸುಮಧುರ ವಾತಾವರಣ ಹಾಗೂ ಬಾಂಧವ್ಯ ವೃದ್ಧಿಗೊಳಿಸುವುದಾಗಿದೆ. ಅಂತರರಾಷ್ಟ್ರೀಯ ಸಂಸ್ಥೆಯು ಒಪ್ಪಂದದ ಮೂಲಕ ಸ್ಥಾಪಿತವಾಗಿರುವ ರಾಷ್ಟ್ರಗಳ ಸಂಘವಾಗಿದ್ದು ತನ್ನದೇ ಆದ ಸಂವಿಧಾನ ಮತ್ತು ಪ್ರಮುಖ ಅಂಗಗಳನ್ನು ಹೊಂದಿರುತ್ತದೆ. ಅಂತರರಾಷ್ಟ್ರೀಯ ಸಂಘಟನೆಯು ವಾಸ್ತವಿಕವಾಗಿ ಸಾರ್ವಭೌಮ ರಾಷ್ಟ್ರಗಳ ಸಂಘವಾಗಿದೆ. ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ರಚನೆ ಮತ್ತು ಕಾರ್ಯಗಳಲ್ಲಿ ಭಿನ್ನತೆ ಇದ್ದರೂ ಅವು ಕೆಲವೊಂದು ಸಾಮಾನ್ಯ ಲಕ್ಷಣವನ್ನು ಹೊಂದಿವೆ. ಈ ಪತ್ರಿಕೆಯಲ್ಲಿ ಮೇಲೆ ತಿಳಿಸಿದ ವಿಷಯಗಳ ಬಗ್ಗೆ ಸಾಕಷ್ಟು ವಿವರಗಳನ್ನು ಓದುಗರಿಗೆ ಕಳುಹಿಸಲಾಗಿದೆ. ಇದರ ಜೊತೆಗೆ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಸಂಘದ ಹುಟ್ಟುವಳಿ, ಅದರ ಸಾಧನೆ ಮತ್ತು ವೈಫಲ್ಯಗಳ ಬಗ್ಗೆ ಸುದೀರ್ಘ ಚರ್ಚೆಯನ್ನು ಈ ಪತ್ರಿಕೆಯಲ್ಲಿ ಮಾಡಲಾಗಿದೆ. ಈ ರಾಷ್ಟ್ರೀಯ ಸಂಘದ ಮೂಲ ಉದ್ದೇಶ ವಿಶ್ವದಲ್ಲಿ ಶಾಂತಿ, ಸುವ್ಯವಸ್ಥೆ, ಭದ್ರತೆ, ಜನತೆಯ ಜೀವ, ಆಸ್ತಿ ರಕ್ಷಣೆ, ಸಾರಿಗೆ ಸಂಪರ್ಕಗಳ ಸೌಲಭ್ಯ ಒದಗಿಸುವುದು ಹಾಗೂ ರಾಷ್ಟ್ರಗಳ ಕಲ್ಯಾಣ ಸಾಧನೆ ಮುಂತಾದವುಗಳು ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಪ್ರಮುಖ ಕಾರ್ಯಗಳಾಗಿವೆ. ಈ ಅಂಶಗಳನ್ನೆಲ್ಲಾ ಈ ಪತ್ರಿಕೆಯಲ್ಲಿ ಚರ್ಚಿಸಲಾಗಿದೆ.

**ಜಗದೀಶ್ ಬಾಬು ಹೆಚ್. ಕೆ.**
ಅಧ್ಯಕ್ಷರು
ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ ಮೈಸೂರು – 6

## ಬ್ಲಾಕ್– 1 ರ ಪರಿಚಯ

ಈ ಬ್ಲಾಕ್‌ನಲ್ಲಿ ನಾಲ್ಕು ಘಟಕಗಳಿದ್ದು, ಘಟಕ ಒಂದರಲ್ಲಿ ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತದ ಅರ್ಥ, ಸ್ವರೂಪ ಮತ್ತು ಪ್ರಾಮುಖ್ಯತೆಯ ಬಗ್ಗೆ ಚರ್ಚಿಸಲಾಗಿದೆ. ಈ ಘಟಕದಲ್ಲಿ ಇದರ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಧ್ಯಯನದ ವಿವಿಧ ದೃಷ್ಟಿಕೋನಗಳನ್ನು ವಿವರಿಸಲಾಗಿದೆ. ಘಟಕ ಎರಡರಲ್ಲಿ ಅಂತರರಾಷ್ಟ್ರೀಯ ಸಹಕಾರ ಮತ್ತು ಅಂತರರಾಷ್ಟ್ರೀಯ ಸಂಘಟನೆಯ ಉದಯದ ಬಗ್ಗೆ ತಿಳಿಸಲಾಗಿದೆ. ಘಟಕ ಮೂರರಲ್ಲಿ ಹತ್ತೊಂಭತ್ತನೆ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತದ ಪ್ರಮುಖ ಬೆಳವಣಿಗೆಗಳ ಬಗ್ಗೆ ವಿಷದಪಡಿಸಲಾಗಿದೆ. ಅದೇ ರೀತಿ ಇಪ್ಪತ್ತನೆಯ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತದ ಅಭಿವೃದ್ಧಿ ಬಗ್ಗೆ ವಿವರಿಸಲಾಗಿದೆ.

## ಬ್ಲಾಕ್– 2 ರ ಪರಿಚಯ

ಬ್ಲಾಕ್ ಎರಡು ನಾಲ್ಕು ಘಟಕಗಳನ್ನು ಹೊಂದಿದ್ದು ಘಟಕ ಐದರಲ್ಲಿ ರಾಷ್ಟ್ರ ಸಂಘದ ಮೂಲ, ಬೆಳವಣಿಗೆ ಮತ್ತು ಉದ್ದೇಶಗಳನ್ನು ವಿವರಿಸಿದೆ. ಘಟಕ ಆರರಲ್ಲಿ ರಾಷ್ಟ್ರ ಸಂಘದ ಅಂಗಗಳು – ಅಸೆಂಬ್ಲಿ ಮತ್ತು ಕೌನ್ಸಿಲ್ ಬಗ್ಗೆ ವಿವರ ಇದೆ. ಘಟಕ ಏಳರಲ್ಲಿ ಸಚಿವಾಲಯ ಹಾಗೂ ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯದ ಬಗ್ಗೆ ತಿಳಿಸಲಾಗಿದೆ. ಘಟಕ ಎಂಟರಲ್ಲಿ ರಾಷ್ಟ್ರಗಳ ಸಂಘದ ಸಾಧನೆ – ಒಂದು ಮೌಲ್ಯಮಾಪನ ಎಂಬುದರ ಬಗ್ಗೆ ಪರಿಶೀಲಿಸಲಾಗಿದೆ.

## ಬ್ಲಾಕ್– 3 ರ ಪರಿಚಯ

ಘಟಕ ಮೂರರಲ್ಲಿ ನಾಲ್ಕು ಘಟಕಗಳಿದ್ದು ಘಟಕ ಒಂಭತ್ತರಲ್ಲಿ ವಿಶ್ವಸಂಸ್ಥೆಯ ಉಗಮ ಮತ್ತು ಅದರ ಉದ್ದೇಶಗಳ ಬಗ್ಗೆ ವಿವರ ಇದೆ. ಘಟಕ ಹತ್ತರಲ್ಲಿ ವಿಶ್ವಸಂಸ್ಥೆಯ ಪ್ರಧಾನ ಅಂಗಗಳಾದ ಸಾಮಾನ್ಯ ಸಭೆ, ಭದ್ರತಾ ಸಮಿತಿ ಹಾಗೂ ಧರ್ಮದರ್ಶಿ ಸಮಿತಿಯ ಬಗ್ಗೆ ಚರ್ಚಿಸಲಾಗಿದೆ. ಘಟಕ ಹನ್ನೊಂದರಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸಮಿತಿ, ಅಂತರರಾಷ್ಟ್ರೀಯ ನ್ಯಾಯಾಲಯ ಮತ್ತು ಸಚಿವಾಲಯದ ಬಗ್ಗೆ ದೀರ್ಘ ವಿವರ ಇದೆ. ಘಟಕ ಹನ್ನೆರಡರಲ್ಲಿ ವಿಶ್ವಸಂಸ್ಥೆಯ ವಿವಿಧ ಅಂಗಗಳಾದ ವಿಶ್ವ ಆರೋಗ್ಯ ಸಂಸ್ಥೆ, ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ಯುನೆಸ್ಕೊ, ಅಂತರರಾಷ್ಟ್ರೀಯ ಬ್ಯಾಂಕು – ವಿಶ್ವ ಸಂಸ್ಥೆಗೆ ಐವತ್ತು ವರ್ಷ ತುಂಬಿರುವುದರಿಂದ ಅದರ ಸಾಧನೆಗಳು ಮತ್ತು ವೈಫಲ್ಯಗಳು ಹಾಗೂ ವಿಶ್ವ ಸಂಸ್ಥೆ ಎದುರಿಸುತ್ತಿರುವ ಸವಾಲಿನ ಬಗ್ಗೆ ಚರ್ಚಿಸಲಾಗಿದೆ.

## ಬ್ಲಾಕ್– 4 ರ ಪರಿಚಯ

ಈ ಬ್ಲಾಕ್‌ನಲ್ಲಿ ನಾಲ್ಕು ಘಟಕಗಳನ್ನು ಹೊಂದಿದೆ. ಘಟಕ ಹದಿಮೂರರಲ್ಲಿ ಪ್ರಾದೇಶಿಕ ಸಂಘಟನೆಗಳು, ಸ್ವರೂಪ ಮತ್ತು ಪಾತ್ರ ಹಾಗೂ ವಿಧಗಳ ಬಗ್ಗೆ ವಿವರ ಇರುತ್ತದೆ. ಘಟಕ ಹದಿನಾಲ್ಕರಲ್ಲಿ ಮಿಲಿಟರಿ ಸಂಘಟನೆಗಳು ನ್ಯಾಟೊ ಮತ್ತು ವಾರ್ಸಾ ಒಪ್ಪಂದದ ಬಗ್ಗೆ ವಿವರ ಇದೆ. ಘಟಕ ಹದಿನೈದರಲ್ಲಿ, ರಾಜಕೀಯ ಸಂಘಟನೆಗಳು, ಅಲಿಪ್ತ ಚಳುವಳಿ, ಅಮೇರಿಕಾ ರಾಜ್ಯಗಳ ಸಂಘ ಹಾಗೂ ಐರೋಪ್ಯ ಒಕ್ಕೂಟದ ಬಗ್ಗೆ ವಿವರಣಾತ್ಮಕವಾಗಿ ವಿಷಯ ತಿಳಿಸಲಾಗಿದೆ. ಘಟಕ ಹದಿನಾರರಲ್ಲಿ ಇತರ ಸಂಘಟನೆಗಳಾದ ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ (ಸಾರ್ಕ್) ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘ ಮತ್ತು ಕಾಮನ್ ವೆಲ್ತ್‌ಗಳ ಬಗ್ಗೆ ವಿವರಣೆ ಇದೆ.

## ಬ್ಲಾಕ್– 5 ರ ಪರಿಚಯ

ಈ ಬ್ಲಾಕ್ ನಾಲ್ಕು ಘಟಕಗಳನ್ನು ಹೊಂದಿದ್ದು, ಘಟಕ ಹದಿನೇಳರಲ್ಲಿ ಸಾಮೂಹಿಕ ಭದ್ರತೆಯ ಅರ್ಥ ಮತ್ತು ಅದರ ಯಶಸ್ಸಿನ ಅಂಶಗಳ ಬಗ್ಗೆ ಚರ್ಚಿಸುತ್ತದೆ. ಘಟಕ ಹದಿನೆಂಟು ರಾಷ್ಟ್ರ ಸಂಘದ ಅಡಿಯಲ್ಲಿ ಸಾಮೂಹಿಕ ಭದ್ರತೆ ಬಗ್ಗೆ ಚರ್ಚಿಸುತ್ತದೆ. ಘಟಕ ಹತ್ತೊಂಭತ್ತು ವಿಶ್ವಸಂಸ್ಥೆಯ ಅಡಿಯಲ್ಲಿ ಸಾಮೂಹಿಕ ಭದ್ರತೆ ಬಗ್ಗೆ ವಿವರ ನೀಡುತ್ತದೆ. ಘಟಕ ಇಪ್ಪತ್ತು ಸಾಮೂಹಿಕ ಭದ್ರತೆಯ ಮೌಲ್ಯ ಮಾಪನದ ಬಗ್ಗೆ ಚರ್ಚಿಸುತ್ತದೆ.

## ಬ್ಲಾಕ್– 6 ರ ಪರಿಚಯ

ಬ್ಲಾಕ್ ಆರು ನಾಲ್ಕು ಘಟಕಗಳನ್ನು ಹೊಂದಿದ್ದು ಘಟಕ ಇಪ್ಪತ್ತೊಂದರಲ್ಲಿ ಘರ್ಷಣಾತ್ಮಕ ನಿರ್ಣಯಗಳಿಗೆ ಅಂತರರಾಷ್ಟ್ರೀಯ ಕಾನೂನಿನ ಅಡಿಯಲ್ಲಿರುವ ನಿಬಂಧನೆಗಳು ಶಾಂತಿ ರೂಪಿಸುವುದು ಮತ್ತು ಶಾಂತಿಪಾಲನ ಪಡೆಗಳ ಬಗ್ಗೆ ಚರ್ಚಿಸಲಾಗಿದೆ. ಘಟಕ ಎಪ್ಪತ್ತೆರಡರಲ್ಲಿ ಅಂತರ ರಾಷ್ಟ್ರೀಯ ವಿವಾದಗಳ ಶಾಂತಿಯುತ ತೀರ್ಮಾನಗಳ ಬಗ್ಗೆ ತಿಳಿಸಲಾಗಿದೆ. ಘಟಕ ಇಪ್ಪತ್ಮೂರರಲ್ಲಿ ಅಂತರ ರಾಷ್ಟ್ರೀಯ ವಿವಾದಗಳ ಬಲತ್ಕಾರದ ಅಥವಾ ನಿರ್ಬಂಧದ ತೀರ್ಮಾನಗಳ ಬಗ್ಗೆ ವಿವರಿಸಲಾಗಿದೆ. ಘಟಕ ಇಪ್ಪತ್ತನಾಲ್ಕರಲ್ಲಿ ರಾಯಭಾರತ್ವದ ಅರ್ಥ ಉದ್ದೇಶಗಳು ಮತ್ತು ರಾಯಭಾರಿ ಕಾರ್ಯಗಳ ಬಗ್ಗೆ ಚರ್ಚಿಸಲಾಗಿದೆ.

## ಬ್ಲಾಕ್– 7 ರ ಪರಿಚಯ

ಈ ಬ್ಲಾಕ್ ನಾಲ್ಕು ಘಟಕಗಳನ್ನು ಹೊಂದಿದೆ. ಘಟಕ ಇಪ್ಪತ್ತೈದರಲ್ಲಿ ಅಂತರ ರಾಷ್ಟ್ರೀಯ ನಾಗರೀಕ ಸೇವೆ–ಲಕ್ಷಣಗಳು, ಅಂತರ ರಾಷ್ಟ್ರೀಯ ನಾಗರೀಕ ಸೇವೆಗೆ ಅಗತ್ಯವಾದ ಅರ್ಹತೆಗಳ ಬಗ್ಗೆ ಚರ್ಚಿಸಲಾಗಿದೆ. ಘಟಕ ಇಪ್ಪತ್ತಾರರಲ್ಲಿ ಅಂತರ ರಾಷ್ಟ್ರೀಯ ನಾಗರೀಕ ಸೇವಾ ಸಿಬ್ಬಂದಿಯ ನೇಮಕಾತಿಯ ಬಗ್ಗೆ ವಿವರ ಇರುತ್ತದೆ. ಘಟಕ ಇಪ್ಪತ್ತೇಳರಲ್ಲಿ ಮನಸ್ಥೈರ್ಯ, ವೇತನ ಮತ್ತು ಅಂತರರಾಷ್ಟ್ರೀಯ ನಾಗರೀಕ ಸೇವೆಗೆ ಸಂಬಂಧಿಸಿದ ಇತರ ಸಮಸ್ಯೆಗಳ ಬಗ್ಗೆ ತಿಳಿಸಲಾಗಿದೆ. ಮತ್ತು ಘಟಕ ಇಪ್ಪತ್ತೆಂಟರಲ್ಲಿ ಅಂತರರಾಷ್ಟ್ರೀಯ ನಾಗರೀಕ ಸೇವೆಯ ಮುಂದಿರುವ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ಚರ್ಚಿಸಲಾಗಿದೆ.

**ಜಗದೀಶ್ ಬಾಬು ಹೆಚ್. ಕೆ.**
ಅಧ್ಯಕ್ಷರು
ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ ಮೈಸೂರು – 6

# ಘಟಕ – 1 : ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತ : ಅರ್ಥ, ಸ್ವಭಾವ, ಪ್ರಾಮುಖ್ಯತೆ ಮತ್ತು ಕಾರ್ಯಗಳು – ಅಧ್ಯಯನದ ದೃಷ್ಟಿಕೋನಗಳು

**ರಚನೆ**


1.0 ಉದ್ದೇಶಗಳು

1.1 ಪರಿಚಯ

1.2 ಅಂತರರಾಷ್ಟ್ರೀಯ ಸಂಘಟನೆಯ ಅರ್ಥ

1.3 ಅಂತರರಾಷ್ಟ್ರೀಯ ಸಂಘಟನೆಯ ಸ್ವರೂಪ

1.4 ಪ್ರಾಮುಖ್ಯತೆ

1.5 ಕಾರ್ಯಗಳು

1.6 ಅಧ್ಯಯನದ ದೃಷ್ಟಿಕೋನಗಳು

1.7 ಸಾರಾಂಶ

1.8 ಕಠಿಣ ಪದಗಳು

1.9 ಉಪಯುಕ್ತ ಪುಸ್ತಕಗಳು

1.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 1.0 ಉದ್ದೇಶಗಳು

ಅಂತರರಾಷ್ಟ್ರೀಯ ಸಂಘಟನೆಯ ಅವಶ್ಯಕತೆ, ಅರ್ಥ, ಸ್ವರೂಪ ಮಹತ್ವ, ಕಾರ್ಯಗಳು ಹಾಗೂ ಅಧ್ಯಯನದ ದೃಷ್ಟಿಕೋನಗಳನ್ನು ನಿಮಗೆ ವಿವರಿಸುವ ಉದ್ದೇಶವನ್ನು ಈ ಘಟಕ ಹೊಂದಿದೆ. ಈ ಘಟಕದ ಅಧ್ಯಯನದ ನಂತರ ನೀವು ಈ ಕೆಳಗಿನವುಗಳನ್ನು ಉತ್ತರಿಸಬಹುದು.

- ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತದ ಅರ್ಥವನ್ನು ವಿವರಿಸಿ.
- ಅಂತರರಾಷ್ಟ್ರೀಯ ಸಂಘಟನೆಯ ಮಹತ್ವ ಮತ್ತು ಕಾರ್ಯಗಳನ್ನು ವಿವರಿಸಿ.
- ಅಂತರರಾಷ್ಟ್ರೀಯ ಸಂಘಟನೆಯ ಅಧ್ಯಯನದ ದೃಷ್ಟಿಕೋನಗಳನ್ನು ಚರ್ಚಿಸಿ.

## 1.1 ಪೀಠಿಕೆ

ಅಂತರರಾಷ್ಟ್ರೀಯ ಸಂಬಂಧಗಳ ಬೆಳವಣಿಗೆಯಲ್ಲಿ ಅಂತರರಾಷ್ಟ್ರೀಯ ಸಂಘ ಸಂಸ್ಥೆಯು ಒಂದು ಪ್ರಮುಖ ಹಂತವಾಗಿದೆ. ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ರಾಷ್ಟ್ರಗಳ ನಡುವಣ ಸಂಬಂಧಗಳಿಗೆ ಒಂದು ವ್ಯವಸ್ಥಿತ ರೂಪ ಕೊಡುತ್ತವೆ. ಸ್ವತಂತ್ರ ರಾಷ್ಟ್ರಗಳ ಮಧ್ಯೆ ಭಿನ್ನಾಭಿಪ್ರಾಯಗಳು ಮತ್ತು ವಿವಾದಗಳು ಉಂಟಾಗುವುದು ಸ್ವಾಭಾವಿಕ. ಇವುಗಳನ್ನು ಬಗೆಹರಿಸಿ ರಾಷ್ಟ್ರ-ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ವ್ಯವಸ್ಥಿತಗೊಳಿಸುವ ಉದ್ದೇಶದಿಂದ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಅಸ್ತಿತ್ವಕ್ಕೆ ಬರುತ್ತವೆ. ರಾಷ್ಟ್ರಗಳ ನಡುವೆ ಜರುಗಬಹುದಾದ ಯುದ್ಧಗಳನ್ನು ತಡೆಗಟ್ಟಿ, ವಿವಾದಗಳನ್ನು ಶಾಂತಿಯುತವಾಗಿ ಇತ್ಯರ್ಥಪಡಿಸಿ, ವಿಶ್ವಶಾಂತಿ ಮತ್ತು ಭದ್ರತೆಯನ್ನುಂಟು ಮಾಡುವ ಉದ್ದೇಶಗಳಿಗಾಗಿ ಅಂತರರಾಷ್ಟ್ರೀಯ ಸಂಸ್ಥೆಗಳನ್ನು ಸ್ಥಾಪಿಸಲಾಗುತ್ತದೆ.

ಜಾಗತಿಕ ಎರಡು ಮಹಾಯುದ್ಧಗಳಿಂದಾದ ಅಪಾರ ಹಾನಿ ಹಾಗೂ ಸಾವು ನೋವುಗಳು ರಾಷ್ಟ್ರಗಳ ಭದ್ರತೆ ಹಾಗೂ ಸಹಕಾರಕ್ಕಾಗಿ ಒಂದು ಪರಿಣಾಮಕಾರಿಯಾದ ಅಂತರರಾಷ್ಟ್ರೀಯ ಸಂಘಟನೆಯನ್ನು ಹೊಂದಲು ಉತ್ತೇಜಿಸಿದವು. ಅಲ್ಲದೆ ಅಂತರರಾಷ್ಟ್ರೀಯ ವ್ಯವಹಾರಗಳನ್ನು ಹಾಗೂ ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಹೆಚ್ಚು ವ್ಯವಸ್ಥಿತವಾಗಿ ನಡೆಸಲು ಅಂತರರಾಷ್ಟ್ರೀಯ ಸಂಘಟನೆಯ ಮಹತ್ವವನ್ನು ಮನಗಾಣಲಾಯಿತು.

## 1.2 ಅಂತರರಾಷ್ಟ್ರೀಯ ಸಂಘಟನೆಯ ಅರ್ಥ

**ಕ್ವಿನ್ಸಿರೈಟರು** ಅಂತರರಾಷ್ಟ್ರೀಯ ಸಂಸ್ಥೆಯನ್ನು ಹೀಗೆ ವಿವರಿಸಿದ್ದಾರೆ, "ಸಮಾನ ಉದ್ದೇಶಗಳ ಸಾಧನೆಗಾಗಿ ಅಗತ್ಯವಿರುವ ಸಹಕಾರವನ್ನೇರ್ಪಡಿಸಲು ಒಂದುಗೂಡಿರುವ ಸ್ವತಂತ್ರ ರಜ್ಯಗಳ ಕೂಟ". ಅಂದರೆ ಅಂತರರಾಷ್ಟ್ರೀಯ ಸಂಸ್ಥೆಯು ಕೆಲವು ನಿರ್ದಿಷ್ಟ ಸಾಮಾನ್ಯ ಉದ್ದೇಶ ಸಾಧಿಸಲು ಸಂಘಟಿತವಾಗಿರುವ ಸ್ವತಂತ್ರರಾಷ್ಟ್ರಗಳ ಸಂಘವಾಗಿದೆ. ಮತ್ತೊಬ್ಬ ಲೇಖಕರ ಅಭಿಪ್ರಾಯದಲ್ಲಿ ಅಂತರರಾಷ್ಟ್ರೀಯ ಸಂಸ್ಥೆಯು ಒಪ್ಪಂದದ ಮೂಲಕ ಸ್ಥಾಪಿತವಾಗಿರುವ ರಾಷ್ಟ್ರಗಳ ಸಂಘವಾಗಿದ್ದು ತನ್ನದೇ ಆದ ಸಂವಿಧಾನ ಮತ್ತು ಪ್ರಮುಖ ಅಂಗಗಳನ್ನು ಹೊಂದಿದ್ದು ಸದಸ್ಯ ರಾಷ್ಟ್ರಗಳಿಂದ ಭಿನ್ನವಾದ ಕಾನೂನುಬದ್ಧ ವ್ಯಕ್ತಿತ್ವವನ್ನು ಪಡೆದಿರುತ್ತದೆ. ಸ್ವತಂತ್ರ ರಾಷ್ಟ್ರಗಳ ಸಂಘವಾಗಿರುವ ಅಂತರರಾಷ್ಟ್ರೀಯ ಸಂಸ್ಥೆಯು ಖಾಸಗಿ ವ್ಯಕ್ತಿಗಳ ಸಂಘ ಅಥವಾ ವೃತ್ತಿ ಸಂಘದಿಂದ ಭಿನ್ನವಾಗಿದೆ.

**ಜಾಕೋಬ್ ಮತ್ತು ಅಥರ್ಟನ್**ರವರ ಪ್ರಕಾರ "ಅಂತರರಾಷ್ಟ್ರೀಯ ಸಂಘಟನೆಯು ವಾಸ್ತವಿಕವಾಗಿ ಸಾರ್ವಭೌಮ ರಾಷ್ಟ್ರಗಳ ಸಂಘವಾಗಿದೆ. ಅದು ಸರ್ಕಾರ ನಿರ್ವಹಿಸುವ ಕಾರ್ಯಗಳನ್ನು ಹೊಂದಿದೆಯಾದರೂ ಸರ್ಕಾರ ಚಲಾಯಿಸುವ ಕಾರ್ಯಗಳನ್ನು ಅದು ಹೊಂದಿಲ್ಲ."

ಅಂತರರಾಷ್ಟ್ರೀಯ ಸಂಘಟನೆಯು, "ರಾಷ್ಟ್ರದ ಗಡಿಯಾಚೆ ರಾಷ್ಟ್ರಗಳು ತಮ್ಮೊಳಗೆ ಮಾಡಿಕೊಂಡ ಬಹುಪಕ್ಷೀಯ ಒಪ್ಪಂದದಿಂದ ಸ್ಥಾಪಿಸಲ್ಪಟ್ಟ ಒಂದು ಅನೌಪಚಾರಿಕ ರಚನೆ" ಎಂದು ಪೆಂಗ್ವಿನ್ ಅರ್ಥಕೋಶ ವ್ಯಾಖ್ಯಾನಿಸಿದೆ.

## 1.3 ಅಂತರರಾಷ್ಟ್ರೀಯ ಸಂಘಟನೆಯ ಸ್ವರೂಪ / ಲಕ್ಷಣಗಳು

ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ರಚನೆ ಮತ್ತು ಕಾರ್ಯಗಳಲ್ಲಿ ವಿಭಿನ್ನತೆ ಇದ್ದರೂ, ಅವು ಕೆಲವೊಂದು ಸಾಮಾನ್ಯ ಲಕ್ಷಣಗಳನ್ನು ಹೊಂದಿವೆ. ಅಂತರರಾಷ್ಟ್ರೀಯ ಸಂಘಗಳ ಪ್ರಧಾನ ಲಕ್ಷಣಗಳು ಈ ಕೆಳಗಿನಂತಿವೆ.

### 1. ಸಾರ್ವಭೌಮತ್ವದ ಸ್ವರೂಪ

ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಸದಸ್ಯತ್ವವು ಸಾಮಾನ್ಯವಾಗಿ ಸಾರ್ವಭೌಮ ರಾಷ್ಟ್ರಗಳಿಗೆ ಮಾತ್ರ ಮುಕ್ತವಾಗಿರುತ್ತದೆ. ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳಲ್ಲಿ ಭಾಗವಹಿಸುವ ಪ್ರತಿನಿಧಿಗಳು ತಮ್ಮ ರಾಷ್ಟ್ರಗಳ ಸರ್ಕಾರದಿಂದ ನೇಮಿಸಲ್ಪಟ್ಟವರಾಗಿದ್ದು, ತಮ್ಮ ತಾಯ್ನಾಡಿನ ಸರ್ಕಾರದ ನಿರ್ದೇಶನದಂತೆ ನಡೆಯುತ್ತಾರೆ. ಆದರೆ ಕೆಲವೊಮ್ಮೆ ಸಾರ್ವಭೌಮೇತರ ರಾಜ್ಯಗಳಿಗೂ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳಿಗೆ ಸದಸ್ಯತ್ವವನ್ನು ನೀಡಲಾಗುವುದು. ಉದಾ.: ಹಿಂದಿನ ಸೋವಿಯತ್ ಒಕ್ಕೂಟದಲ್ಲಿದ್ದ ಬೈಲೋ ರಷ್ಯಾ ಮತ್ತು ಉಕ್ರೇನಿ ಎಂಬ ಎರಡು ಒಕ್ಕೂಟ ಗಣರಾಜ್ಯಗಳಿಗೆ ಸಾರ್ವಭೌಮತ್ವದ ಲಕ್ಷಣಗಳಲ್ಲಿದಿದ್ದರೂ ಅವುಗಳಿಗೆ ವಿಶ್ವಸಂಸ್ಥೆಯ ಸದಸ್ಯತ್ವವನ್ನು ನೀಡಲಾಯಿತು.

### 2. ಸದಸ್ಯರ ಸಮಾನತೆಯ ತತ್ವ

ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳನ್ನು ಎಲ್ಲ ಸದಸ್ಯ ರಾಷ್ಟ್ರಗಳ ಸಮಾನತೆಯ ತತ್ವದ ಮೇಲೆ ರಚನೆಯಾಗಿರುತ್ತವೆ. ಅಂದರೆ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳಲ್ಲಿ ಎಲ್ಲಾ ಸದಸ್ಯ ರಾಜ್ಯಗಳನ್ನು ಸಮಾನತೆಯ ತತ್ವದ ಮೇಲೆ ರಚನೆಯಾಗಿರುತ್ತವೆ. ಅಂದರೆ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳಲ್ಲಿ ಎಲ್ಲಾ ಸದಸ್ಯ ರಾಜ್ಯಗಳನ್ನು ಸಮಾನತೆಯಿಂದ ಕಾಣಲಾಗುತ್ತದೆ. ಅವುಗಳ ಗಾತ್ರ ಜನಸಂಖ್ಯೆ, ಸಂಪತ್ತು ಅಥವಾ ಅಧಿಕಾರ ಮುಂತಾದವುಗಳನ್ನು ಪರಿಗಣಿಸದೆ ಎಲ್ಲಾ ರಾಷ್ಟ್ರಗಳಿಗೆ ಸಮಾನ ಪ್ರಾತಿನಿಧ್ಯ ಮತ್ತು ಓಟಿನ ಸಮಾನತೆಯನ್ನು ಕೊಡಲಾಗಿರುತ್ತದೆ. ಎಲ್ಲಾ ಸದಸ್ಯ ರಾಷ್ಟ್ರಗಳು ಸಮನಾದ ಹಕ್ಕು ಬಾಧ್ಯತೆಗಳನ್ನು ಹೊಂದಿರುತ್ತವೆ. ವಿಶ್ವ ಸಂಸ್ಥೆಯು ಎಲ್ಲಾ ಸದಸ್ಯ ರಾಷ್ಟ್ರಗಳ ಪರಮಾಧಿಕಾರದ ಸಮಾನತೆಯ ತತ್ವದ ಮೇಲೆ ನಿಂತಿದೆ. ಆದರೆ ಈ ತತ್ವವನ್ನು ಭದ್ರತಾ ಸಮಿತಿಯ ರಚನೆಯಲ್ಲಿ ಉಲ್ಲಂಘಿಸಲಾಗಿದೆ. ಭದ್ರತಾ ಸಮಿತಿಯ 5 ಖಾಯಂ ಸದಸ್ಯ ರಾಷ್ಟ್ರಗಳಿಗೆ ಕೊಡಲಾಗಿರುವ 'ವಿಟೋ' ಅಧಿಕಾರದಿಂದ ಉಳಿದ ಸದಸ್ಯ ರಾಷ್ಟ್ರಗಳಿಗಿಂತಲೂ ಹೆಚ್ಚಿನ ಸ್ಥಾನಮಾನಗಳಿವೆ. ಭದ್ರತಾ ಮಂಡಲಿಯಲ್ಲಿ ಮಹತ್ವದ ನಿರ್ಣಯ ತೆಗೆದುಕೊಳ್ಳಬೇಕಾದರೆ ಈ 5 ಖಾಯಂ ಸದಸ್ಯ ರಾಷ್ಟ್ರಗಳ ಸಮ್ಮತಿ ಅಗತ್ಯವಾಗಿದೆ. ಅದೇ ರೀತಿ ಅಂತರರಾಷ್ಟ್ರೀಯ ಹಣಕಾಸಿನ ನಿಧಿ ಮತ್ತು ವಿಶ್ವ ಬ್ಯಾಂಕಿನಲ್ಲಿಯೂ ಸಹ ಸದಸ್ಯ ರಾಷ್ಟ್ರಗಳು ತಮ್ಮ ತಮ್ಮ ಪಾಲಿನ ಬಂಡವಾಳದ ಪ್ರಮಾಣಾನುಸಾರ ಮತಗಳನ್ನು ಕೊಡಲಾಗಿದೆ. ಇದರಿಂದಾಗಿ ಶ್ರೀಮಂತ ಹಾಗೂ ಶಕ್ತಿಶಾಲಿ ರಾಷ್ಟ್ರಗಳು ವಿಶ್ವಸಂಸ್ಥೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರಭಾವ ಬೀರುತ್ತವೆ.

### 3. ಬಂಧನಕಾರಿ ರಹಿತ / ಕಡ್ಡಾಯರಹಿತ

ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ನಿರ್ಣಯಗಳು ಕಡ್ಡಾಯವಾದವುಗಳಲ್ಲ. ಆ ಸಂಘ ಸಂಸ್ಥೆಗಳು ಸದಸ್ಯ ರಾಷ್ಟ್ರಗಳನ್ನು ತಮ್ಮ ನಿರ್ಣಯಗಳನ್ನು ಒಪ್ಪುವಂತೆ ಬಲಾತ್ಕರಿಸುವಂತಿಲ್ಲ. ತಮ್ಮ ಸದಸ್ಯ ರಾಷ್ಟ್ರಗಳಿಗೆ ಕೇವಲ ಶಿಫಾರಸ್ಸು ಅಥವಾ ಸಲಹೆಗಳನ್ನು ಕೊಡಬಹುದೇ ವಿನಹ ಅವುಗಳನ್ನು ಒಪ್ಪುವಂತೆ ಒತ್ತಾಯಿಸುವಂತಿಲ್ಲ. ಅವುಗಳ ಶಿಫಾರಸ್ಸು, ಸಲಹೆಗಳನ್ನು ಸದಸ್ಯ ರಾಷ್ಟ್ರಗಳು ಒಪ್ಪಬಹುದು ಇಲ್ಲವೆ ತಿರಸ್ಕರಿಸಬಹುದು. ಅಲ್ಲದೆ, ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಸದಸ್ಯ ರಾಷ್ಟ್ರಗಳ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಒಟ್ಟಾರೆ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳಿಗೆ ಅವು ಕೈಗೊಂಡ ತೀರ್ಮಾನಗಳನ್ನು ಒಪ್ಪುವಂತೆ ಸದಸ್ಯ ರಾಷ್ಟ್ರಗಳನ್ನು ಒತ್ತಾಯಿಸುವ ಅಧಿಕಾರ ಹೊಂದಿರುವುದಿಲ್ಲ.

ಆದರೆ, ತಮ್ಮ ತೀರ್ಮಾನಗಳನ್ನು ಜಾರಿಗೊಳಿಸಲು ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಯಾವ ಕ್ರಮವನ್ನೂ ಕೈಗೊಳ್ಳುವಂತಿಲ್ಲವೆಂದು ಅರ್ಥವಲ್ಲ. ಉದಾ.: ವಿಶ್ವಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸಿನ ನಿಧಿ ತಮ್ಮ ನಿರ್ಣಯಗಳನ್ನು ಒಪ್ಪದ ಸದಸ್ಯ ರಾಷ್ಟಗಳ ವಿರುದ್ಧ ಕೆಲವು ದಂಡ ಶಕ್ತಿ / ಒತ್ತಾಯಗಳನ್ನು (sanction) ಹೇರಬಹುದು. ಅದೇ ರೀತಿ, ವಿಶ್ವಶಾಂತಿ ಮತ್ತು ಭದ್ರತಾ ವಿಷಯಗಳಿಗೆ ಸಂಬಂಧಿಸಿದಂತೆ ತನ್ನ ನಿರ್ಣಯಗಳನ್ನು ಕಡ್ಡಾಯಗೊಳಿಸುವ ಅಧಿಕಾರವನ್ನು ವಿಶ್ವಸಂಸ್ಥೆಯ ಭದ್ರತಾ ಸಮಿತಿ (security council) ಹೊಂದಿದೆ. ಆದರೆ, ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ರಾಷ್ಟಗಳ ಸದಸ್ಯತ್ವವು ಐಚ್ಛಿಕವಾದುದೆಂಬುದನ್ನು ಮರೆಯಬಾರದು.

**4. ಅಂತರ-ಸರ್ಕಾರಿಯ ಸಹಯೋಗ**

ಅಂತರರಾಷ್ಟ್ರೀಯ ಸಂಘ-ಸಂಸ್ಥೆಗಳು ಅಂತರ-ಸರ್ಕಾರಿಯ ಸಹಯೋಗದ ಬೆಳವಣಿಗೆಗೆ ಶ್ರಮಿಸುತ್ತವೆ. 'ಸಾರ್ವಭೌಮತ್ವ'ವು ಇಂದಿಗೂ ರಾಜ್ಯ ವ್ಯವಸ್ಥೆಯ ಪ್ರಧಾನ ಲಕ್ಷಣವಾಗಿರುವುದರಿಂದ ಅಂತರರಾಷ್ಟ್ರೀಯ ಸಂಘಗಳು ಸದಸ್ಯ ರಾಷ್ಟಗಳ ವಿಭಿನ್ನ ದೃಷ್ಟಿಗಳನ್ನು ಹೊಂದಾಣಿಸಿ ಅವುಗಳಲ್ಲಿ ಸ್ವಯಂ-ಪ್ರೇರಿತ ಸಹಕಾರವನ್ನು ಸಾಧಿಸಲು ಪ್ರಯತ್ನಿಸುತ್ತವೆ.

**ನಿಮ್ಮ ಪ್ರಗತಿ ಪರಿಶೀಲನೆ – 1**

**ಸೂಚನೆ :** 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ಅಂತರರಾಷ್ಟ್ರೀಯ 'ಸಂಘಟನೆ'ಯನ್ನು ಕುರಿತು ವ್ಯಾಖ್ಯಾನಿಸಿ.**

- - - - - - - - - - - - - - - - - - - - - - - - - - - - - - - - - - - - - - - -

- - - - - - - - - - - - - - - - - - - - - - - - - - - - - - - - - - - - - - - -

- - - - - - - - - - - - - - - - - - - - - - - - - - - - - - - - - - - - - - - -

- - - - - - - - - - - - - - - - - - - - - - - - - - - - - - - - - - - - - - - -

**2. ಅಂತರರಾಷ್ಟ್ರೀಯ ಸಂಘಟನೆಗಳ ಲಕ್ಷಣಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.**

- - - - - - - - - - - - - - - - - - - - - - - - - - - - - - - - - - - - - - - -

- - - - - - - - - - - - - - - - - - - - - - - - - - - - - - - - - - - - - - - -

- - - - - - - - - - - - - - - - - - - - - - - - - - - - - - - - - - - - - - - -

- - - - - - - - - - - - - - - - - - - - - - - - - - - - - - - - - - - - - - - -

## 1.4 ಅಂತರರಾಷ್ಟ್ರೀಯ ಸಂಘಟನೆಗಳ ಪ್ರಾಮುಖ್ಯತೆ

ಶಾಂತಿ ಮತ್ತು ಸ್ವರಕ್ಷಣೆಯ ಉತ್ಕಟೇಚ್ಛೆಯು (ಹಂಬಲ) ಮಾನವನನ್ನು ಅಂತರರಾಷ್ಟ್ರೀಯ ಸಹಕಾರಕ್ಕಾಗಿ ಅಂತರರಾಷ್ಟ್ರೀಯ ಸಂಘಟನೆಗಳ ಸ್ಥಾಪನೆಗೆ ಪ್ರೇರೇಪಿಸಿದೆ. ಇತರ ರಾಷ್ಟಗಳ ಜನರನ್ನು ಅರ್ಥ ಮಾಡಿಕೊಂಡು ಅವರೊಡನೆ ಸಹಕಾರದಿಂದ ಬಾಳುವ ಅಗತ್ಯತೆ ಇಂದಿನ ದಿನಗಳಲ್ಲಿ ಹೆಚ್ಚಾಗಿದೆ. ಇದು ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಸ್ಥಾಪನೆಯಿಂದ ಸಾಧ್ಯ.

ಅಂತರರಾಷ್ಟ್ರೀಯ ಸಂಘಟನೆಗಳು ಯುದ್ಧ, ಆರ್ಥಿಕ ಅವ್ಯವಸ್ಥೆ ಮತ್ತು ಸಾಮಾಜಿಕ ವಿಪ್ಲವಗಳನ್ನು ತಡೆಗಟ್ಟಿ ಸ್ಥಿರವಾದ ಜಾಗತಿಕ ಸುವ್ಯವಸ್ಥೆಗೆ ಭದ್ರವಾದ ನಿಲೆಗಟ್ಟನ್ನು ಒದಗಿಸುತ್ತವೆ. ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಜಾಗತಿಕ ಶಾಂತಿ ಹಾಗೂ ಭದ್ರತೆಯನ್ನು ಕಾಪಾಡುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ಉತ್ತಮ ಆರ್ಥಿಕ, ಸಾಮಾಜಿಕ ಸ್ಥಿತಿಗಳ ಹಾಗೂ ಮಾನವನ ಕ್ಷೇಮಾಭ್ಯುದಯದ ಬೆಳವಣಿಗೆಯಲ್ಲಿ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುವುದಲ್ಲದೆ, ಸಂದಾನಗಳ ಮೂಲಕ ರಾಷ್ಟ್ರಗಳ ನಡುವಿನ ಅಡತಡೆಗಳನ್ನು ನಿವಾರಿಸಿ, ಆರ್ಥಿಕ ಹಾಗೂ ಹಣಕಾಸಿನ ಕ್ಷೇತ್ರಗಳಲ್ಲಿ ಅಂತರರಾಷ್ಟ್ರೀಯ ಸಹಕಾರವನ್ನು ಪ್ರೋತ್ಸಾಹಿಸುತ್ತವೆ.

19ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ ಸಹಾಯ ಮೊದಲು, ಸಾರಿಗೆ ಸಂಪರ್ಕ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಸಹಕಾರವನ್ನು ವೃದ್ಧಿಸಲು ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳನ್ನು ರಚಿಸಲಾಯಿತು.

ಆಧುನಿಕ ಕಾಲದಲ್ಲಿ ಅಂತರರಾಷ್ಟ್ರೀಯ ಸಂಘಟನೆಗಳು ಹಲವು ರೀತಿಯಲ್ಲಿ ಅತ್ಯಂತ ಉಪಯುಕ್ತವಾಗಿವೆ. ಸದಸ್ಯ ರಾಷ್ಟ್ರಗಳ ನಡುವೆ ಸಾಮಾಜಿಕ ಹಾಗೂ ಆರ್ಥಿಕ ಸಹಕಾರವನ್ನು ಸಾಧಿಸುವಲ್ಲಿ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತಿದ್ದು, ಸಂಕುಚಿತ ರಾಷ್ಟ್ರೀಯ ಭಾವನೆಯಿಂದ ಹೊರಬರಲು ಸದಸ್ಯ ರಾಷ್ಟ್ರಗಳನ್ನು ಉತ್ತೇಜಿಸುತ್ತವೆ. ಈ ದೃಷ್ಟಿಯಿಂದ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು 'ಸರ್ವ ಮೋಕ್ಷ ವಾದ'ದೆಡೆಗೆ (Universalism) ಒಂದು ಪ್ರಮುಖ ಹೆಜ್ಜೆಯಾಗಿ ಪರಿಣಮಿಸಿವೆ. ಹೀಗೆ ಅವು ವಿಶ್ವಭ್ರಾತೃತ್ವದ ಬೆಳೆವಣಿಗೆಗೆ ಹಾಗೂ ರಾಷ್ಟ್ರಗಳ ನಡುವೆ ಪರಸ್ಪರ ಅರಿವಿಗೆ ಅತ್ಯಂತ ಉಪಯುಕ್ತವಾಗಿವೆ.

## 1.5 ಕಾರ್ಯಗಳು

ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಪ್ರಥಮ ಕಾರ್ಯವೆಂದರೆ ಜಾಗತಿಕ ಶಾಂತಿ ಮತ್ತು ಭದ್ರತೆಯನ್ನು ಸಂರಕ್ಷಿಸುವುದೇ ಆಗಿದೆ. ರಾಷ್ಟ್ರಗಳ ಕಲ್ಯಾಣವನ್ನು ವೃದ್ಧಿಸುವುದು ಅವುಗಳ ಸಾಮಾನ್ಯ ಧ್ಯೇಯವಾಗಿರುತ್ತದೆ. ಈ ಗುರಿಯನ್ನು ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ರಾಷ್ಟ್ರಗಳ ಮಧ್ಯೆ ನಡೆಯಬಹುದಾದ ಪರಸ್ಪರ ಆಕ್ರಮಣವನ್ನು ತಡೆಗಟ್ಟಿ, ಅವುಗಳಿಗೆ ಭದ್ರತೆಯನ್ನು ಒದಗಿಸಿ, ಅವುಗಳ ನಡುವಿನ ವಿವಾದಗಳನ್ನು ಶಾಂತಿಯುತ ಬಗೆಹರಿಸುವುದರ ಮೂಲಕ ಸಾಧಿಸಲೆತ್ನಿಸುತ್ತವೆ.

ವಿಶ್ವದಲ್ಲಿ ಶಾಂತಿ ಸುವ್ಯವಸ್ಥೆ, ಭದ್ರತೆ, ಜನತೆಯ ಜೀವ, ಆಸ್ತಿ ರಕ್ಷಣೆ, ಸಾರಿಗೆ ಸಂಪರ್ಕಗಳ ಸೌಲಭ್ಯಗಳನ್ನು ಒದಗಿಸುವುದು, ರಾಷ್ಟ್ರಗಳ ಕಲ್ಯಾಣ ಸಾಧನೆ ಮುಂತಾದವುಗಳು ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಪ್ರಮುಖ ಕಾರ್ಯಗಳಾಗಿವೆ.

ಮೇಲಿನ ಕಾರ್ಯಗಳಲ್ಲದೆ, ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಆಡಳಿತಾತ್ಮಕ, ನ್ಯಾಯಾಂಗೀಯ ಕಾರ್ಯಗಳನ್ನು ನಿರ್ವಹಿಸುತ್ತವೆ. ವಿಶ್ವಸಂಸ್ಥೆಯ ವಿಶ್ವಸ್ಥ ಅಥವಾ ಉಸ್ತುವಾರಿಕೆ ಮಂಡಲಿ (Trusteeship Council) ಮತ್ತು ಸಚಿವಾಲಯ (Secretariat) ಆಡಳಿತಾತ್ಮಕ ಸಂಘಟನೆಗಳಾಗಿ ಆಡಳಿತ ಕಾರ್ಯಗಳನ್ನು ನಿರ್ವಹಿಸುತ್ತವೆ. ಅಂತರರಾಷ್ಟ್ರೀಯ ನ್ಯಾಯಿಕ ಸಂಸ್ಥೆಗಳು ಸದಸ್ಯ ರಾಷ್ಟ್ರಗಳಲ್ಲಿ ಉದ್ಭವಿಸುವ ವಿವಾದಗಳನ್ನು ಬಗೆಹರಿಸುವುದರ ಮೂಲಕ ಕೆಲವೊಂದು ನ್ಯಾಯಾಂಗೀಯ ಕಾರ್ಯಗಳನ್ನು ನಿರ್ವಹಿಸುತ್ತವೆ. ಉದಾಹರಣೆಗೆ, ಅಂತರರಾಷ್ಟ್ರೀಯ ಖಾಯಂ ನ್ಯಾಯಾಲಯ ಮತ್ತು ಅಂತರರಾಷ್ಟ್ರೀಯ ನ್ಯಾಯಾಲಯಗಳು ನ್ಯಾಯಿಕ ಕಾರ್ಯಗಳನ್ನು ನಿರ್ವಹಿಸುತ್ತವೆ.

ಇಂದಿನ ಅಣುಯುಗದಲ್ಲಿ ಮಾನವನಿಗೆ ಶಾಂತಿಯನ್ನು ತಂದು ಕೊಡುವುದು, ಅಂತರರಾಷ್ಟ್ರೀಯ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು, ರಾಷ್ಟ್ರಗಳು ತಮ್ಮ ಸಾಮಾನ್ಯ ಸಮಸ್ಯೆಗಳನ್ನು ಚರ್ಚಿಸಿ ಅವುಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳಲು ಸಹಾಯ ಮಾಡುವುದು, ಅಂತರರಾಷ್ಟ್ರೀಯ ಆರ್ಥಿಕ ಮತ್ತು ಸಾಂಸ್ಕೃತಿಕ ಸಂಬಂಧಗಳ

ಹಾಗೂ ಅಂತರರಾಷ್ಟ್ರೀಯ ರಾಜಕೀಯದಲ್ಲಿ ಹೊಂದಾಣಿಕ ಮತ್ತು ಅಭಿವೃದ್ಧಿಯನ್ನು ಸಾಧಿಸುವುದು, ಸಾಮಾಜಿಕ ಪ್ರಗತಿ ಹಾಗೂ ಮಾನವನ ಜೀವನ ಮಟ್ಟವನ್ನು ಉತ್ತಮಪಡಿಸುವುದು, ರಾಷ್ಟ್ರಗಳಲ್ಲಿ ಮೈತ್ರಿಯುತ ಸಂಬಂಧಗಳನ್ನು ಬೆಳೆಸುವುದು ಇವೇ ಮುಂತಾದ ಕಾರ್ಯಗಳನ್ನು ಅಂತರರಾಷ್ಟ್ರೀಯ ಸಂಘಟನೆಗಳು ನಿರ್ವಹಿಸುತ್ತವೆ.

## 1.6 ಅಂತರರಾಷ್ಟ್ರೀಯ ಸಂಘಟನೆಯ ಅಧ್ಯಯನದ ದೃಷ್ಟಿಕೋನಗಳು

ಅಂತರರಾಷ್ಟ್ರೀಯ ಸಂಘಟನೆಗಳ ಬಗೆಗಿನ ಶೈಕ್ಷಣಿಕ ಅಧ್ಯಯನ ಕೇವಲ ಇತ್ತೀಚಿನದು. ಅದು ಇಂದು ಒಂದು ಸ್ವತಂತ್ರ ಅಧ್ಯಯನವಾಗಿ ವಿಷಯವಾಗಿ ಬೆಳೆವಣಿಗೆಯಾಗುತ್ತಿದೆ. ಅಂತರರಾಷ್ಟ್ರೀಯ ಸಂಘಟನೆಗಳ ಅಧ್ಯಯನದ ದೃಷ್ಟಿಕೋನಗಳು ಹಲವಾರು ಇವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

ಐತಿಹಾಸಿಕ ದೃಷ್ಟಿಕೋನದ ಮೂಲಕ ಅಂತರರಾಷ್ಟ್ರೀಯ ಸಂಘಟನೆಗಳನ್ನು ಅಧ್ಯಯನ ಮಾಡಬಹುದು. ಗತಕಾಲದ ಒಳನೋಟವು ವರ್ತಮಾನಕಾಲ ಹಾಗೂ ಭವಿಷ್ಯತ್ತಿನ ಘಟನೆಗಳ ಮೌಲ್ಯಮಾಪನಕ್ಕೆ ಸಹಕಾರಿಯಾಗಿರುವುದರಿಂದ ಐತಿಹಾಸಿಕ ವಿಧಾನವು ಅಂತರರಾಷ್ಟ್ರೀಯ ಸಂಘಟನೆಗಳ ಅಧ್ಯಯನಕ್ಕೆ ಹೆಚ್ಚು ಸಮಂಜಸವಾಗಿದೆ. ಐತಿಹಾಸಿಕ ವಿಧಾನದಿಂದ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಹೇಗೆ ಅಸ್ತಿತ್ವಕ್ಕೆ ಬಂದವು, ಅವುಗಳ ಕಾರ್ಯಾಚರಣೆ ಹೇಗಿತ್ತು, ಅವುಗಳ ಸಫಲತೆ ಹಾಗೂ ವಿಫಲತೆಗೆ ಕಾರಣಗಳನ್ನು ವಿಶ್ಲೇಶಿಸಲು ಹೆಚ್ಚು ಅನುಕೂಲವಾಗುವುದು. ಹಿಂದಿನ ಕಾಲದ ಅನುಭವದಿಂದ ಪಾಠ ಕಲಿತು ಪ್ರಸಕ್ತ ಜಾಗತಿಕ ಸಂಘಟನೆಗಳಲ್ಲಿ ಸುಧಾರಣೆಯನ್ನು ಮಾಡಬಹುದು. ಉದಾ. : ಹಿಂದೆ ಸ್ಥಾಪಿಸಲ್ಪಟ್ಟ ಲೀಗ್ ಆಫ್ ನೇಷನ್ಸ್ ಎಂಬ ಜಾಗತಿಕ ಸಂಸ್ಥೆಯ ವಿಫಲತೆಗೆ ಕಾರಣಗಳನ್ನು ಅರಿತು ಇಂದಿನ ವಿಶ್ವಸಂಸ್ಥೆಯನ್ನು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವ ರೀತಿ ಸುಧಾರಿತವಾದ ಅಂತರರಾಷ್ಟ್ರೀಯ ಸಂಸ್ಥೆಯನ್ನು ರಚಿಸಲಾಗಿದೆ. ಅಲ್ಲದೆ ಆಧುನಿಕ ಕಾಲದ ಅಂತರರಾಷ್ಟ್ರೀಯ ಸಂಸ್ಥೆಯನ್ನು ರಚಿಸಲಾಗಿದೆ. ಅಲ್ಲದೆ ಆಧುನಿಕ ಕಾಲದ ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಜಾಗತಿಕ ಸಂಘ ಸಂಸ್ಥೆಗಳ ಮಹತ್ವ ಮತ್ತು ಅವುಗಳ ಪಾತ್ರ ಮುಂತಾದವುಗಳನ್ನು ವಿವರಿಸಲು ಐತಿಹಾಸಿಕ ದೃಷ್ಟಿಕೋನವು ಸಹಾಯಕಾರಿಯಾಗಿದೆ.

ಅಂತರರಾಷ್ಟ್ರೀಯ ಸಂಘಟನೆಗಳ ಅಧ್ಯಯನಕ್ಕೆ ಐತಿಹಾಸಿಕ ವಿಧಾನವನ್ನು ಬಳಸುವ ಬಗ್ಗೆ ತಜ್ಞರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಐತಿಹಾಸಿಕ ವಿಧಾನದ ಉಪಯುಕ್ತತೆಯನ್ನು ಸಮರ್ಥಿಸಿದರೆ, ಇನ್ನು ಕೆಲವು ಆ ವಿಧಾನ ಪ್ರಯೋಜನಕಾರಿಯಾಗಲಾರದು ಎಂದು ಅಭಿಪ್ರಾಯಪಟ್ಟಿದ್ದಾರೆ. ಐತಿಹಾಸಿಕ ವಿಧಾನ ಅಂತರರಾಷ್ಟ್ರೀಯ ಸಂಘಟನೆಗಳ ಅಧ್ಯಯನಕ್ಕೆ ಬಹಳ ಉಪಯುಕ್ತವಾಗಿದೆ.

ಅಂತರರಾಷ್ಟ್ರೀಯ ಸಂಘಟನೆಯ ಅಧ್ಯಯನದಲ್ಲಿ ಸೈದ್ಧಾಂತಿಕ ದೃಷ್ಟಿಕೋನವು ಹೆಚ್ಚು ಉಪಯುಕ್ತವಾದುದು. ಸರ್ಕಾರ ಮತ್ತು ರಾಜಕಾರಣದ ಅಧ್ಯಯನದಲ್ಲಿ ಬಳಸಲಾಗುವ ಸೈದ್ಧಾಂತಿಕ ವಿಧಾನವನ್ನು ಅಂತರರಾಷ್ಟ್ರೀಯ ಸಂಘಟನೆಗಳ ಅಧ್ಯಯನದಲ್ಲಿ ಬಳಸಲಾಗುವುದಿಲ್ಲ. ಈ ದೃಷ್ಟಿಕೋನದ ಒಂದು ಅನುಕೂಲವೆಂದರೆ ಅಂತರರಾಷ್ಟ್ರೀಯ ಸಂಘಟನೆ ಮತ್ತು ಸಾಮಾಜಿಕ-ಆರ್ಥಿಕ ಹಾಗೂ ರಾಜಕೀಯ ಬೆಳವಣಿಗೆಯ ನಡುವಿನ ಸಂಬಂಧವನ್ನು ಅರಿಯಲು ಇದು ತುಂಬಾ ಸಹಾಯಕಾರಿಯಾಗಿದೆ. ಆದರೆ ಇದರ ಒಂದು ನ್ಯೂನತೆಯೆಂದರೆ ವಾಸ್ತವಿಕತೆಯಿಂದ ದೂರ ಉಳಿದ ಒಂದು ಕಾಲ್ಪನಿಕ ದ.ಷಿಕೋನವಾಗಿದೆ.

ಕಾನೂನಿನ ದೃಷ್ಟಿಕೋನವು ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಔಪಚಾರಿಕ ರಚನಾತ್ಮಕ ವ್ಯವಸ್ಥೆಗೆ ಒತ್ತು ನೀಡುತ್ತದೆ. ಆದರೆ ಈ ದೃಷ್ಟಿಕೋನವು ವಾಸ್ತವಿಕ ಕಾರ್ಯಾಚರಣೆಯ ಬಗ್ಗೆ ಸರಿಯಾದ ಮಾಹಿತಿ ನೀಡುವುದಿಲ್ಲ. ಜಾಗತಿಕ

ರಾಜಕಾರಣದ ಮೇಲೆ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಪರಿಣಾಮಬೀರುವ ಸನ್ನಿವೇಶಗಳನ್ನು ಅಧ್ಯಯನ ಮಾಡಬಹುದಾಗಿದೆ.

ಮಾನವನ ಅಧ್ಯಯನವನ್ನು ಒಳಗೊಂಡಿರುವ ಸಾಮಾಜಿಕ ದೃಷ್ಟಿಕೋನವು ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಅಧ್ಯಯನಕ್ಕೆ ಹೆಚ್ಚು ಸಮಂಜಸವಾಗಿದೆ. ಅಂತರರಾಷ್ಟ್ರೀಯ ಸಂಘಟನೆಗಳು ವಿಶ್ವ ಸಮುದಾಯ ಸ್ಥಾಪನೆಯ ಗುರಿ ಹೊಂದಿರುವುದರಿಂದ ಮಾನವನ ಹಾಗೂ ಪರಿಸರದ ಆಗುಹೋಗುಗಳ ಅಧ್ಯಯನ ಅಗತ್ಯವಾಗಿದೆ. ಸಾಮಾಜಿಕ ಜೀವನದ ಯಾವುದೇ ಅಧ್ಯಯನವು ಸಹಜವಾಗಿ ಸಮಾಜಶಾಸ್ತ್ರದ ಅಧ್ಯಯನದೆಡೆಗೆ ನಮ್ಮನ್ನು ಕೊಂಡೊಯ್ಯುತ್ತದೆ. ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಪ್ರಸ್ತುತ ಕಾರ್ಯ ವಿಧಾನ, ಅವುಗಳ ಇತಿಮಿತಿಗಳನ್ನು ವಿವರಿಸಬೇಕಾದರೆ ಮಾನವನ ಸ್ವಭಾವ ಹಾಗೂ ಸಮಾಜದಲ್ಲಿ ಮಾನವನ ಪಾತ್ರವನ್ನು ವಿಶ್ಲೇಷಿಸಬೇಕು. ಇದಕ್ಕಾಗಿ ಸಾಮಾಜಿಕ ದೃಷ್ಟಿಕೋನವನ್ನು ಬಳಸಬೇಕು.

**ನಿಮ್ಮ ಪ್ರಗತಿ ಪರಿಶೀಲನೆ – 2**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ಅಂತರರಾಷ್ಟ್ರೀಯ ಸಂಘಟನೆಗಳ ಮಹತ್ವವನ್ನು ತಿಳಿಸಿ.**

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

**2. ಅಂತರರಾಷ್ಟ್ರೀಯ ಸಂಘಟನೆಗಳ ಕಾರ್ಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ.**

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

**3. ಅಂತರರಾಷ್ಟ್ರೀಯ ಸಂಘಟನೆಗಳ ಅಧ್ಯಯನದ ದೃಷ್ಟಿಕೋನಗಳನ್ನು ವಿವರಿಸಿ.**

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

## 1.7 ಸಾರಾಂಶ

ರಾಷ್ಟ್ರಗಳ ನಡುವೆ ಕ್ರಮಬದ್ಧವಾದ ಸಂಬಂಧಗಳನ್ನು ನಿಶ್ಚಿತಗೊಳಿಸಲು ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಈ ಸಂಘ ಸಂಸ್ಥೆಗಳ ಸದಸ್ಯ ರಾಷ್ಟ್ರಗಳು ಸಾರ್ವಭೌಮತ್ವ, ಸಮಾನ ಅಂತಸ್ತು, ಬಂಧನಕಾರಿ

ತೀರ್ಮಾನಗಳಿಂದ ಮುಕ್ತವಾಗಿರುವುದು ಹಾಗೂ ಅಂತರ ಸರ್ಕಾರದ ಸಹಯೋಗದ ಗುರಿ ಮುಂತಾದ ಲಕ್ಷಣಗಳನ್ನು ಹೊಂದಿರುತ್ತವೆ. ಯುದ್ಧದ ಭಯ, ಉದ್ವಿಗ್ನತೆ, ಕ್ಷೋಭೆ ಪ್ರಕ್ಷುಬ್ಧತೆಯಿಂದ ಕೂಡಿದ ಇಂದಿನ ಜಗತ್ತಿನಲ್ಲಿ ರಾಷ್ಟ್ರಗಳಲ್ಲಿ ಪರಸ್ಪರ ಸಹಕಾರವನ್ನುಂಟು ಮಾಡುವ ಗುರಿ ಹೊಂದಿರುವ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಅತ್ಯಾವಶ್ಯಕವಾಗಿವೆ. ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ರಾಷ್ಟ್ರ-ರಾಷ್ಟ್ರಗಳಲ್ಲಿ ಸಹಕಾರ, ಮೈತ್ರಿಯುತ ಸಂಬಂಧಗಳನ್ನೇರ್ಪಡಿಸುವುದು, ವಿಶ್ವಶಾಂತಿ-ಹಾಗೂ ಭದ್ರತೆಯನ್ನು ಕಾಪಾಡುವುದು - ಇವೇ ಮುಂತಾದ ಉತ್ತಮ ಕಾರ್ಯಗಳನ್ನು ನೆರವೇರಿಸುತ್ತವೆ.

ಅಂತರರಾಷ್ಟ್ರೀಯ ಸಂಘಟನೆಗಳ ಅಧ್ಯಯನದಲ್ಲಿ ಐತಿಹಾಸಿಕ, ಸೈದ್ಧಾಂತಿಕ, ಕಾನೂನಾತ್ಮಕ, ಸಾಮಾಜಿಕ ಮುಂತಾದ ಹಲವು ವಿಧಾನಗಳನ್ನು (ದೃಷ್ಟಿಕೋನಗಳನ್ನು) ಅನುಸರಿಸಲಾಗುತ್ತದೆ. ಈ ವಿವಿಧ ದೃಷ್ಟಿಕೋನಗಳನ್ನು ಅಳವಡಿಸಿ ಅಂತರರಾಷ್ಟ್ರೀಯ ಸಂಘಟನೆಗಳ ಒಂದು ಕ್ರಮಬದ್ಧವಾದ ಅಧ್ಯಯನವನ್ನು ಮಾಡಬಹುದು.

## 1.8 ಕಠಿಣ ಪದಗಳು

| | | |
|---|---|---|
| ಕ್ಷೋಭೆ | – | ಪ್ರಕ್ಷುಬ್ಧ ಸ್ಥಿತಿ |
| ಪ್ರತ್ಯೇಕತೆ | – | ಒಂಟಿಯಾಗಿರುವುದು |
| ಪರಸ್ಪರಾವಲಂಬನೆ | – | ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರವನ್ನೂ ಅವಲಂಬಿಸಿರುವುದು |

## 1.9 ಕೆಲವು ಉಪಯುಕ್ತ ಪುಸ್ತಕಗಳು

| | | |
|---|---|---|
| **ಪ್ರೊ. ಎನ್. ಹಾಲಪ್ಪ** | : | *ಅಂತರರಾಷ್ಟ್ರೀಯ ಸಂಬಂಧಗಳು* |
| **ಡಾ. ಟಿ.ಡಿ. ದೇವೇಗೌಡ** | : | *ಅಂತರರಾಷ್ಟ್ರೀಯ ಸಂಬಂಧಗಳು* |
| **ಪಾಮರ್ ಮತ್ತು ಪರ್ಕಿನ್ಸ್** | : | *ಇಂಟರ್‌ನ್ಯಾಷನಲ್ ರಿಲೇಷನ್ಸ್* |
| **ಹ್ಯಾನ್ಸ್ ಮಾಗಳಂಥ್ಯೂ** | : | *ಪಾಲಿಟಿಕ್ಸ್ ಅಮಾಂಗ್ ನೇಷನ್ಸ್* |
| **ಪಿ. ಚಂದ್ರ** | : | *ಇಂಟರ್‌ನ್ಯಾಷನಲ್ ಪಾಲಿಟಿಕ್ಸ್* |
| **ಪ್ರೇಮ ಅರೋರ** | : | *ಇಂಟರ್‌ನ್ಯಾಷನಲ್ ಪಾಲಿಟಿಕ್ಸ್* |

## 1.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

### ನಿಮ್ಮ ಪ್ರಗತಿ ಪರಿಶೀಲನೆ - 1

1. ನೋಡಿ ವಿಭಾಗ 1.2
2. ನೋಡಿ ವಿಭಾಗ 1.3

### ನಿಮ್ಮ ಪ್ರಗತಿ ಪರಿಶೀಲನೆ - 2

1. ನೋಡಿ ವಿಭಾಗ 1.4
2. ನೋಡಿ ವಿಭಾಗ 1.5
3. ನೋಡಿ ವಿಭಾಗ 1.6

# ಘಟಕ – 2 : ಅಂತರರಾಷ್ಟ್ರೀಯ ಸಹಕಾರ ಮತ್ತು ಅಂತರರಾಷ್ಟ್ರೀಯ ಸಂಘಟನೆಯ ಪ್ರಾರಂಭ

**ರಚನೆ**


2.0 ಉದ್ದೇಶಗಳು

2.1 ಪರಿಚಯ

2.2 ಅಂತರರಾಷ್ಟ್ರೀಯ ಸಂಘಟನೆಯ ಬೆಳವಣಿಗೆ

- 2.2.1 ಗ್ರೀಕರ ಕಾಲದ ಬೆಳವಣಿಗೆ
- 2.2.2 ರೋಮನರ ಕಾಲದ ಬೆಳವಣಿಗೆ
- 2.2.3 ಕ್ರೈಸ್ತ ಸಂಸ್ಥೆಗಳ / ಪ್ರಭುತ್ವ ಮೈತ್ರಿಕೂಟ
- 2.2.4 ಮಹಾ ಸಂಘಟನೆ / ಯೋಜನೆ
- 2.2.5 ವೆಸ್ಟ್ ಫೇಲಿಯಾ ಒಪ್ಪಂದ
- 2.2.6 ಯುಟ್ರೆಚ್ ಶಾಂತಿ ಒಪ್ಪಂದ

2.3 ಸಾರಾಂಶ

2.4 ಕಠಿಣ ಪದಗಳು

2.5 ಕೆಲವು ಉಪಯುಕ್ತ ಪುಸ್ತಕಗಳು

2.6 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 2.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನಿಮಗೆ ತಿಳಿಯಬರುವುದೇನೆಂದರೆ :

- ಅಂತರರಾಷ್ಟ್ರೀಯ ವಿಕಾಸದ ಬಗ್ಗೆ ತಿಳಿಯಲು
- ಇದುವರೆಗಿನ ಇದರ ಸಾಧನೆ ಅರಿಯಲು
- ರಾಷ್ಟ್ರ-ರಾಷ್ಟ್ರಗಳ ಸಂಬಂಧ ತಿಳಿದುಕೊಳ್ಳಲು.

## 2.1 ಪರಿಚಯ

ಈ ಪತ್ರಿಕೆ ಅಂತರರಾಷ್ಟ್ರೀಯ ಸಂಘಟನೆ ಹಾಗೂ ವಿಕಾಸದ ವಿವಿಧ ಹಂತಗಳ ಬಗ್ಗೆ ಚರ್ಚಿಸುತ್ತದೆ. ಇದರ ವಿಕಾಸ ಹೊಸದೇನು ಅಲ್ಲ. ಗ್ರೀಕರ ಕಾಲದಲ್ಲಿ ನಡೆಯುತ್ತಿದ್ದ ಸಣ್ಣಪುಟ್ಟ ಯುದ್ಧಗಳನ್ನು ತಡೆಗಟ್ಟಲು ಅನೇಕ ಪ್ರಯತ್ನ ಮಾಡಿ ಒಂದು "ಲೀಗ್" ಹುಟ್ಟು ಹಾಕಿದ್ದರು. ತದನಂತರ ರೋಮನ್ನರು, ಕ್ರೈಸ್ತರು ಮತ್ತು ನಾಲ್ಕನೆಯ ಹೆನ್ರಿ ಕಾಲದಲ್ಲಿ ಮಹಾಯೋಜನೆಯನ್ನು ಉದಾಹರಣೆಯಾಗಿ ಇಟ್ಟುಕೊಳ್ಳಬಹುದಾಗಿದೆ. 1648 ರಲ್ಲಿ ವೆಸ್ಟ್ ಫೇಲಿಯ ಒಪ್ಪಂದ ಅಂತರರಾಷ್ಟ್ರೀಯ ಬೆಳವಣಿಗೆಯಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಿದೆ. ಇಲ್ಲಿಂದ ಪ್ರಾರಂಭವಾದ ರಾಷ್ಟ್ರ-ರಾಜ್ಯ ಪದ್ಧತಿಯ ಬೆಳವಣಿಗೆ ಅಂತರರಾಷ್ಟ್ರೀಯ ಸಂಸ್ಥೆಗಳ ಬೆಳವಣಿಗೆಗೆ ಬಹುಮಟ್ಟಿಗೆ ಕಾರಣವಾಯಿತೆಂದು ಹೇಳಬಹುದು.

## 2.2 ಅಂತರರಾಷ್ಟ್ರೀಯ ಸಂಘಟನೆಯ ಬೆಳವಣಿಗೆ

ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ವಿವಿಧ ಹಂತಗಳಲ್ಲಿ ಬೆಳವಣಿಗೆಯಾಗಿವೆ. ಅವುಗಳ ವಿಕಾಸದ ವಿವಿಧ ಹಂತಗಳನ್ನು ಈ ಕೆಳಗಿನಂತೆ ಚರ್ಚಿಸಬಹುದಾಗಿದೆ.

### 2.2.1 ಗ್ರೀಕರ ಕಾಲದ ಬೆಳವಣಿಗೆ

ಪ್ರಾಚೀನ ಗ್ರೀಕ್ ನಗರ ರಾಜ್ಯಗಳ ನಡುವೆ ಯುದ್ಧಗಳು ಸರ್ವೇಸಾಮಾನ್ಯವಾಗಿದ್ದ ಕಾರಣ ಅವುಗಳನ್ನು ತಡೆಗಟ್ಟಲು ಅನೇಕ ಪ್ರಯತ್ನಗಳನ್ನು ಮಾಡಲಾಯಿತು. ಅವುಗಳಲ್ಲಿ 'ಆಂಫಿಟಿಯೋನಿಕ್ ಲೀಗ್' (Ampheityonic League) ಎಂಬ ಗ್ರೀಕ್ ಧಾರ್ಮಿಕ ಕ್ಷೇತ್ರದಲ್ಲಿ ಸಂಘಗಳು ಮುಖ್ಯವಾದವು. ಇವು ಕ್ರಿ.ಪೂ. ಆರನೇ ಶತಮಾನದಲ್ಲಿ ಅಂತರ ರಾಜ್ಯಗಳ ನಡುವಿನ ಸಂಬಂಧಗಳನ್ನು ನಿಯಂತ್ರಿಸುವುದಕ್ಕಾಗಿ ಅಸ್ತಿತ್ವದ್ದವು.

ಶಾಂತಿ ಸ್ಥಾಪನೆಯ ಉದ್ದೇಶಕ್ಕಾಗಿ ಹುಟ್ಟಿದ ಇನ್ನೊಂದು ಸಂಸ್ಥೆಯೆಂದರೆ 'ಕಾನ್‌ಫೆಡರ ಆಫ್ ಡೆಲ್ಲಸ್' (Confederacy of Delos) ಎಂಬ ಗ್ರೀಕ್ ನಗರ ರಾಜ್ಯಗಳ ಸಂಘ. ಪರ್ಷಿಯನ್ನರ ಆಕ್ರಮಣವನ್ನು ಎದುರಿಸಲು ಇದು ಹುಟ್ಟಿಕೊಂಡಿತು. ಸ್ವಲ್ಪ ಕಾಲದ ನಂತರ, ಸಂಪೂರ್ಣ ಸ್ವಾಯತ್ತತೆ ಹೊಂದಿದ 70 ರಾಜ್ಯಗಳನ್ನೊಳಗೊಂಡ "ಹೆಲ್ಲೆನೀಸ್‌ನ ಅಚಾಯಿನ್ ಲೀಗ್" (Achaean League of Hellenese) ಎಂಬ ಸಂಘವನ್ನು ಗ್ರೀಕರು ರಚಿಸಿಕೊಂಡರು. ಆದರೆ ಈ ಎಲ್ಲಾ ಸಂಘ ಸಂಸ್ಥೆಗಳು ಕೇವಲ ಗ್ರೀಕ್ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದವು. ಇವು ಬಾಹ್ಯ ರಾಜ್ಯಗಳನ್ನು ಒಳಗೊಂಡಿರಲಿಲ್ಲ. ಗ್ರೀಕರು ಇಂತಹ ಸಂಘ ಸಂಸ್ಥೆಗಳನ್ನು ಸಂಯುಕ್ತ ರಾಜ್ಯಾಂಗದ ತತ್ವದ ತಳಹದಿಯ ಮೇಲೆ ನಿರ್ಮಿಸಿದ್ದರು. ಈ ತತ್ವಗಳು ಇಂದಿನ ವಿಶ್ವ ವ್ಯವಸ್ಥೆಗೆ ತಳಹದಿಯಾಗುವಂತಹವು.

### 2.2.2 ರೋಮನ್ನರ ಕಾಲದ ಬೆಳವಣಿಗೆ

ಅಂತರರಾಷ್ಟ್ರೀಯ ಸಂಘ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಕಾನೂನಿನ ಬೆಳವಣಿಗೆಯಲ್ಲಿ ಪ್ರಾಚೀನ ರೋಮನ್ನರೂ ಕೂಡ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಆದರೆ ಅವರ ಕೊಡುಗೆ ಪರೋಕ್ಷವಾದುದು. ವಿಶಾಲವಾದ ರೋಮನ್ ಚಕ್ರಾಧಿಪತ್ಯದಲ್ಲಿ 5 ಶತಮಾನಗಳ ಕಾಲ ಅವಿಚ್ಛಿನ್ನವಾದ ಶಾಂತಿ ನೆಲೆಸಿತ್ತು. ಅಲ್ಲದೆ ಇದರಲ್ಲಿ ಹಲವಾರು ಸಂಸ್ಕೃತಿಯ ಜನಾಂಗದವರು ಅನ್ಯೋನವಾಗಿರುವುದನ್ನು ಕಲಿತರು. ಇವರಲ್ಲಿ ವಿಶ್ವ ಭ್ರಾತೃತ್ವ ಭಾವನೆ ಮೂಡಲು ಕಾರಣವಾಯಿತು. ರೋಮನ್ ಸಾಮ್ರಾಜ್ಯದಲ್ಲಿ ಅನೇಕ ಬಗೆಯ ನ್ಯಾಯ ಶಾಸ್ತ್ರೀಯ, ಸೈನಿಕ ಹಾಗೂ ಆಡಳಿತಾತ್ಮಕ ಪದ್ಧತಿಗಳನ್ನು ಬೆಳೆಸಲಾಗಿತ್ತು. ಆ ಪದ್ಧತಿಗಳು ಅಂತರರಾಷ್ಟ್ರೀಯ ಸಂಘಟನೆಗಳ ರಚನೆಗೆ ಹಾಗೂ ಕಾರ್ಯದಲ್ಲಿಯೂ ಉಪಯುಕ್ತವಾದವು. 'ಪವಿತ್ರ ರೋಮನ್ ಸಾಮ್ರಾಜ್ಯವು' (Holy Roman Empire) ಒಂದು ಧಾರ್ಮಿಕ ಹಾಗೂ ಜಾಗತಿಕ ಸ್ವರೂಪವಾದ ಸಾಮ್ರಾಜ್ಯವಾಗಿದ್ದರಿಂದ ಅಂತರರಾಷ್ಟ್ರೀಯ ವ್ಯವಹಾರಗಳನ್ನು ಹೆಚ್ಚು ವ್ಯವಸ್ಥಿತವಾಗಿ ನಡೆಸಲು ಅನುಕೂಲವಾಯಿತು. ಪವಿತ್ರ ರೋಮನ್ ಸಾಮ್ರಾಜ್ಯವು ಒಂದು ಬಗೆಯ "ಧಾರ್ಮಿಕ ವಿಶ್ವ ವಾದ" (Spiritual Universalism) ವನ್ನು ಆಧರಿಸಿತ್ತು ಎಂದು ಹೇಳಬಹುದು.

### 2.2.3 ಕ್ರೈಸ್ತ ಸಂಸ್ಥೆಗಳ/ ಪ್ರಭುತ್ವ ಮೈತ್ರಿಕೂಟ (Alliance of Christian Powers)

ರೋಮನ್ ಸಾಮ್ರಾಜ್ಯದ ಅವನ ಆಯ ನಂತರ ತಲೆದೋರಿದ ಅರಾಜತ ಸ್ಥಿತಿಯು ಶಾಂತಿ ಸುವ್ಯವಸ್ಥೆಗಾಗಿ ನೂತನ ಸಂಘಟನೆಗಳ ಸ್ಥಾಪನೆಗೆ ಹೊಸ ಪ್ರಯತ್ನಗಳಿಗೆ ಉತ್ತೇಜನ ನೀಡಿತು. 1305ರಲ್ಲಿ ಪೈಯರೆ ಡುಬೋರಿಸ್ ಎಂಬ ಫ್ರೆಂಚ್ ನ್ಯಾಯವಾದಿಯೊಬ್ಬರು ಕ್ರೈಸ್ತ ಪ್ರಭುತ್ವದ / ಸಂಸ್ಥೆಗಳ ಮೈತ್ರಿಕೂಟ ಸ್ಥಾಪನೆಗೆ ಸೂಚಿಸಿದರು. ಕ್ರೈಸ್ತ ಮತವು, ಕ್ರೈಸ್ತರು ಯಾವ ದೇಶದಲ್ಲಿರಲಿ, ಯಾವ ಜನಾಂಗಕ್ಕೆ ಸೇರಿರಲಿ ಎಲ್ಲರೂ ಒಂದೇ ಸೋದರ ವರ್ಗಕ್ಕೆ ಸೇರಿದವರು, ಇವರೆಲ್ಲರನ್ನೂ ಒಳಗೊಂಡ ಒಂದು ಸಮಾನ ಸಂಪರ್ಕವಿರಬೇಕು ಎಂಬ ಭಾವನೆಯನ್ನು ಸಾರಿತು. ಪೈಯೆರೆ ಡುಬೋರಿಸ್ ಅವರು ರಾಷ್ಟ್ರಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಒಂದು ಶಾಶ್ವತ ನ್ಯಾಯ ಪಂಚಾಯಿತಿಯ ಸ್ಥಾಪನೆಗೂ ಸಲಹೆ ಮಾಡಿದರು.

ಜರ್ಮನ್ ದೇಶದ ಹಲವಾರು ನಗರ ರಾಜ್ಯಗಳು ಒಂದುಗೂಡಿ 'ಹಾನಸಿಯಾಟಿಕ್ ಲೀಗ್' (Hanseatic League)ನ್ನು ಮತ್ತು ಸ್ವಿಜರ್ಲೆಂಡಿನ ಕೆಲವು ಕ್ಯಾಂಟಿನ್‌ಗಳು ಒಂದುಗೂಡಿ ಅನ್‌ಕ್ಲಿಯಸ್ ಎಂಬ ಲೀಗ್‌ನ್ನು ಸ್ಥಾಪಿಸಿಕೊಂಡಿದ್ದವು. ಈ ಕಾಲದಲ್ಲಿದ್ದ ಸುಪ್ರಸಿದ್ಧ ಡಂಟೆ ಕವಿಯು ತನ್ನ "ಡಿ ಮಾನಾರ್ಕಿಯಾ" (The Monarchia) ಎಂಬ ಗ್ರಂಥದಲ್ಲಿ ವಿಶ್ವಶಾಂತಿಗಾಗಿ ವಿಶ್ವಪ್ರಭುತ್ವ ವೇಪಘಡಬೇಕು ಎಂಬ ತತ್ವವನ್ನು ಪ್ರತಿಪಾದಿಸಿದರು. ಹೀಗೆ ಹಲವಾರು ಮೈತ್ರಿಕೂಟಗಳು ಮತ್ತು ಸಂಘ-ಸಂಸ್ಥೆಗಳು ಸ್ಥಾಪಿತವಾದವು. ಆದರೆ, ಅಂತರರಾಜ್ಯಗಳ ನಡುವೆ ಸಹಕಾರವನ್ನೇರ್ಪಡಿಸಲು ಅವುಗಳಿಗೆ ಕಾರ್ಯತಂತ್ರದ ಕೊರತೆ ಇತ್ತು.

### 2.2.4 ಮಹಾಯೋಜನೆ / ಸಂಘಟನೆ

ಅಂತರರಾಷ್ಟ್ರೀಯ ಬೆಳವಣಿಗೆಯಲ್ಲಿ ಮತ್ತೊಂದು ಮೈಲುಗಲ್ಲು ಎಂದರೆ 1603ರಲ್ಲಿ ಸಲ್ಲಿಯ ಡ್ಯೂಕ್‌ನು ಪ್ರಸ್ತಾಪಿಸಿದ ಒಂದು ಯೋಜನೆ. ಈ ಯೋಜನೆಯು ನಾಲ್ಕನೆಯ ಹೆನ್ರಿಯ "ಮಹಾಯೋಜನೆ" (Grand Design) ಎಂದು ಪ್ರಸಿದ್ಧಿಯಾಗಿದೆ. ಇದು 15 ಕ್ರೈಸ್ತ ಗಣರಾಜ್ಯಗಳಿಂದ ಕೂಡಿದ ಒಂದು ಸಂಘಟನೆ. ಯುದ್ಧಗಳನ್ನು ನಿವಾರಿಸಿ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಲು ಈ ಸಂಘಟನೆಯನ್ನು ರಚಿಸಲಾಯಿತು, ಆದರೆ ಈ ಯೋಜನೆಯು ವಿಫಲವಾಯಿತು. ಇದರ ವಿಫಲತೆಗೆ ಕಾರಣಗಳು ಹೀಗಿವೆ.

1. ಮೊದಲನೆಯದಾಗಿ, ಇದೊಂದು ತೀವ್ರಗಾಮಿ ಸಂಘಟನೆಯಾಗಿತ್ತು.

2. ಎರಡನೆಯದಾಗಿ, ಇದು ಯುರೋಪಿನ ಸಂಘಟನೆಯಾಗಿದ್ದು, ಯುರೋಪ್ ಖಂಡದ ದೇಶಗಳಿಗೆ ಮಾತ್ರ ಸೀಮಿತವಾಗಿದ್ದಿತು.

3. ಮೂರನೆಯದಾಗಿ, ಇದರ ಸದಸ್ಯರು ಕೇವಲ ಯುರೋಪ್ ರಾಷ್ಟ್ರಗಳಾಗಿದ್ದವು.

4. ನಾಲ್ಕನೆಯದಾಗಿ, ಇದು ಸಾರ್ವತ್ರಿಕ ಸ್ವರೂಪದ ಸಂಘಟನೆಯಾಗಿರಲಿಲ್ಲ.

### 2.2.5 ವೆಸ್ಟ್ ಫೇಲಿಯಾ ಒಪ್ಪಂದ

1648 ರ ವೆಸ್ಟ್ ಫೇಲಿಯಾ ಒಪ್ಪಂದವು ಅಂತರರಾಷ್ಟ್ರೀಯ ಬೆಳವಣಿಗೆಯಲ್ಲಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಈ ಒಪ್ಪಂದವು ಯಾವುದೇ ಅಂತರರಾಷ್ಟ್ರೀಯ ಸಂಘಟನೆಯನ್ನು ಸೃಷ್ಟಿಸಿಲ್ಲದಿದ್ದರೂ, ಬೃಹತ್ ಪ್ರಮಾಣದ ರಾಜತಾಂತ್ರಿಕ ಸಮ್ಮೇಳನದಲ್ಲಿ ವಿವಿಧ ಯುರೋಪಿನ ರಾಷ್ಟ್ರಗಳನ್ನು ಒಂದುಗೂಡಿಸುವುದರ ಮೂಲಕ ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಒಂದು ಹೊಸ ಯುಗಕ್ಕೆ ನಾಂದಿ ಹಾಡಿತು. ವೆಷ್ಟ್‌ಫೇಲಿಯಾ ಒಪ್ಪಂದದೊಡನೆ ಪ್ರಾರಂಭಗೊಂಡ ರಾಷ್ಟ್ರ–ರಾಜ್ಯ ಪದ್ಧತಿ (Nation-state system) ಯ ಬೆಳವಣಿಗೆಯು ಅಂತರರಾಷ್ಟ್ರೀಯ ಸಂಸ್ಥೆಗಳ ಬೆಳವಣಿಗೆಗೆ ಬಹುಮಟ್ಟಿಗೆ ಕಾರಣವಾಯಿತೆಂದು ಹೇಳಬಹುದು. ರಾಷ್ಟ್ರಗಳ ಸಂಬಂಧಗಳು ಹೆಚ್ಚುತ್ತಿದ್ದ ಕಾರಣ ಅಂತರರಾಷ್ಟ್ರೀಯ ಸಂಸ್ಥೆಗಳ ಅವಶ್ಯಕತೆಯೂ ಹೆಚ್ಚಾಯಿತು. ಕಾಲಕ್ರಮೇಣ ಅಂತರರಾಷ್ಟ್ರೀಯ ಸಂಸ್ಥೆಗಳ ಉದ್ದೇಶಗಳನ್ನು ಈಡೇರಿಸಬಲ್ಲಂತಹ ಹಲವಾರು ಸಂಸ್ಥೆಗಳ ಬೆಳವಣಿಗೆ ಪ್ರಾರಂಭವಾಯಿತು.

### 2.2.6 ಯುಟ್ರೆಚ್ ಶಾಂತಿ ಒಪ್ಪಂದ

ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಸ್ಥಾಪನೆಯ ದಿಕ್ಕಿನಲ್ಲಿ ಮತ್ತೊಂದು ಪ್ರಮುಖ ಹೆಜ್ಜೆಯೆಂದರೆ 1713ರಲ್ಲಿ ಆದ ಯುಟ್ರೆಚ್ ಶಾಂತಿ ಒಪ್ಪಂದವಾಗಿದೆ. ಈ ಒಪ್ಪಂದವು ಹೊಸ ರಾಜವಂಶಗಳಿಗೆ ಅಂತರರಾಷ್ಟ್ರೀಯ ಮಾನ್ಯತೆ ನೀಡಿ ಸಾಮ್ರಾಜ್ಯ ವಿಸ್ತರಣಾ ಆಕಾಂಕ್ಷೆಗಳಿಗೆ ಹಿನ್ನೆಡಿಯನ್ನುಂಟು ಮಾಡಿತು. ಕಾಲಕ್ರಮೇಣ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಉದ್ದೇಶಗಳನ್ನು ಈಡೇರಿಸಬಲ್ಲ ಅನೇಕ ಸಂಸ್ಥೆಗಳ ಹಾಗೂ ವಿಧಾನಗಳ ಬೆಳವಣಿಗೆ ಪ್ರಾರಂಭವಾಯಿತು.

ಇವುಗಳಲ್ಲದೆ, ಅನೇಕ ವಿದ್ವಾಂಸರು, ದಾರ್ಶನಿಕರು, ರಾಜ ತಂತ್ರಜ್ಞರು ತಮ್ಮ ವಿಚಾರಗಳ ಮೂಲಕ 17 ಮತ್ತು 18ನೇ ಶತಮಾನಗಳಲ್ಲಿ ಅಂತರರಾಷ್ಟ್ರೀಯ ಸಂಸ್ಥೆಗಳ ಬೆಳವಣಿಗೆಗೆ ಹೊಸ ಚಾಲನೆ ಕೊಟ್ಟರು. ಇವರಲ್ಲಿ ಒಬ್ಬೊಬ್ಬರು ಒಂದೊಂದು ದೃಷ್ಟಿಯಿಂದ ಅಂತರರಾಷ್ಟ್ರೀಯ ಶಾಂತಿಯ ಅವಶ್ಯಕತೆಯನ್ನು ಒತ್ತಿ ಹೇಳಿ, ಅದಕ್ಕೆ ಬೇಕಾದ ಅಂತರರಾಷ್ಟ್ರೀಯ ಸಂಸ್ಥೆ ಅಥವಾ ವ್ಯವಸ್ಥೆಯ ರೂಪರೇಷೆಗಳನ್ನು ಮಂಡಿಸಿದರು. ವಿಲಿಯಮ್ ಪೆನ್ನನು 'ಯುರೋಪಿಯನ್ ಪಾರ್ಲಿಮೆಂಟ್' (1693); ಎಂಬ ಗ್ರಂಥದಲ್ಲಿಯೂ, ಆಬಿಡಿ ಸೇಂಟ್ ಪೀರಿಯು "ಯುರೋಪಿನಲ್ಲಿ ಶಾಶ್ವತ ಶಾಂತಿ ಯೋಜನೆ" (1712) ಎಂಬ ಗ್ರಂಥದಲ್ಲಿಯೂ, ಜೆರಮಿ ಬೆಂಡಾಮ್‌ನು "ಜಾಗತಿಕ ಹಾಗೂ ಶಾಶ್ವತ ಶಾಂತಿ" (1793) ಎಂಬ ಪ್ರಬಂಧದಲ್ಲಿಯೂ ಮತ್ತು ಇಮ್ಯಾನುಯಲ್ ಕ್ಯಾಂಟ್‌ನು "ಶಾಶ್ವತ ಶಾಂತಿ" ಎಂಬುದರಲ್ಲಿಯೂ ಅಂತರರಾಷ್ಟ್ರೀಯ ವಾದದ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ.

ಮಧ್ಯಯುಗದ ವಿಘಟನೆಯಿಂದಾಗಿ ನೂತನ ಬೆಳವಣಿಗೆಗಳಾದ ಪುನರುತ್ಥಾನ ಮತ್ತು ಸುಧಾರಣೆ, ವ್ಯಾಪಾರ ಮತ್ತು ವಾಣಿಜ್ಯದ ವಿಸ್ತರಣೆಯ ಪರಿಣಾಮವಾಗಿ ಶಕ್ತಿ ರಾಜಕಾರಣದಲ್ಲಿ ಬದಲಾವಣೆ ಕಂಡು ಬಂದಿತು. ಇಂದು ನಾವು

ಕರೆಯುತ್ತಿರುವ ಪಾಶ್ಚಿಮಾತ್ಯ ರಾಜ್ಯ ವ್ಯವಸ್ಥೆಯು 15, 16 ಮತ್ತು 17 ನೇ ಶತಮಾನಗಳಲ್ಲಿ ಬೆಳವಣಿಗೆಯಾಯಿತು. ಇದರಿಂದಾಗಿ ಅಂತರರಾಷ್ಟ್ರೀಯ ಸಂಬಂಧಗಳೂ ಒಂದು ಹೊಸ ಅರ್ಥ ಹಾಗೂ ಪ್ರಾಮುಖ್ಯತೆ ಪಡೆಯಿತು. ಮೆಕೆವೆಲ್ಲಿಯು ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನಕ್ಕೆ ಒಂದು ವಾಸ್ತವಿಕ ದೃಷ್ಟಿಕೋನ ನೀಡಿದನು. 16ನೇ ಶತಮಾನದಲ್ಲಿ ಬೋಡಿನ್ ಅವರು ಶಾಸನೀಯ ಪರಮಾಧಿಕಾರದ ಪರಿಕಲ್ಪನೆಯನ್ನು ರೂಪಿಸಿದನು. ಹ್ಯೂಗೋ ಗ್ರೋಷಿಯಸ್‌ನು ಅಂತರರಾಷ್ಟ್ರೀಯ ಕಾನೂನಿನ ಬೆಳವಣಿಗೆಗೆ ತನ್ನ ಕೊಡುಗೆ ನೀಡಿದನು.

ಹೀಗೆ ಪ್ರಾಚೀನ ಗ್ರೀಕರ ಕಾಲದಿಂದ ಅಂತರರಾಷ್ಟ್ರೀಯ ಬೆಳವಣಿಗೆಯು ಪ್ರಾರಂಭವಾಗಿ ಹಂತ ಹಂತವಾಗಿ ಬೆಳೆದು ಬಂದಿದೆ.

**ನಿಮ್ಮ ಪ್ರಗತಿ ಪರಿಶೀಲನೆ – 1**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ಅಂತರರಾಷ್ಟ್ರೀಯ ಬೆಳವಣಿಗೆಯ ಐತಿಹಾಸಿಕ ಹಿನ್ನೆಲೆಯನ್ನು ವಿವರಿಸಿ.**

--------------------------------------------------------------------------------

--------------------------------------------------------------------------------

--------------------------------------------------------------------------------

--------------------------------------------------------------------------------

## 2.3 ಸಾರಾಂಶ

ಈ ಘಟಕದಲ್ಲಿ ಅಂತರರಾಷ್ಟ್ರೀಯ ಸಹಕಾರ ಮತ್ತು ಅಂತರರಾಷ್ಟ್ರೀಯ ಸಂಘಟನೆ ಪ್ರಾರಂಭ ಹೇಗಾಯಿತು ಎಂಬುದನ್ನು ಚರ್ಚಿಸಲಾಗಿದೆ. ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಬೆಳವಣಿಗೆಯಲ್ಲಿ ಕಂಡುಬರುವ ಪ್ರಮುಖ ಹೆಜ್ಜೆಗಳೆಂದರೆ ಪ್ರಾಚೀನ ಗ್ರೀಕ್ ಕಾಲದ ಆಂಫಿಟಿಯೋನಿಕ್ ಲೀಗ್ ಕಾನ್‌ಫೆಡರಸಿ ಆಫ್‌ಡೆಲೂಸ್, ಅಚಾಯಿನ್ ಲೀಗ್, ಕ್ರೈಸ್ತ ಸಂಸ್ಥೆಗಳ ಮೈತ್ರಿಕೂಟ (1305 A.D), ಹಾನ್ಸಿಯಾಟಿಕ್ ಲೀಗ್, ನಾಲ್ಕನೆ ಹೆನ್ರಿಯ 'ಮಹಾಯೋಜನೆ' (1603), ವೆಸ್ಟ್ ಫೇಲಿಯಾ ಒಪ್ಪಂದ (1648) ಮತ್ತು 1713ರ ಯು ಟ್ರಿಚ್ ಶಾಂತಿ ಒಪ್ಪಂದ ಇವುಗಳಲ್ಲಿ ಅನೇಕ ವಿದ್ವಾಂಸ ಹಾಗೂ ದಾರ್ಶನಿಕರು ಅಂತರರಾಷ್ಟ್ರೀಯ ಸಂಸ್ಥೆಗಳ ಬೆಳವಣಿಗೆಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ.

## 2.4 ಕಠಿಣ ಪದಗಳು

**ಒಪ್ಪಂದ** – ಎರಡು ರಾಷ್ಟ್ರಗಳು ಮಾಡಿಕೊಂಡ ಲಿಖಿತಕರಾರು. ಈತರಾರಿಗೆ ಎರಡೂ ಪಕ್ಷಗಳು ಬದ್ಧರಾಗಿರುತ್ತದೆ.

**ಸಾರ್ವಭೌಮತ್ವ** – ಒಂದು ನಿರ್ದಿಷ್ಟ ಪ್ರದೇಶದಲ್ಲಿ ಒಂದು ರಾಜ್ಯವು ಹೊಂದಿರುವ ಅಂತಿಮ ಅಧಿಕಾರ.

**ಅಂತರರಾಷ್ಟ್ರೀಯ ಕಾನೂನು** – ಈ ಪದವನ್ನು 1780 ರಲ್ಲಿ ಜೆರಮಿ ಬೆಂಟಾಮ್‌ರವರು ಬಳಸಿದರು. ರಾಷ್ಟ್ರಗಳ ನಡವಳಿಕೆಯನ್ನು ನಿಯಂತ್ರಿಸುವ ನಿಯಮಾವಳಿಯಾಗಿದೆ.

## 2.5 ಕೆಲವು ಉಪಯುಕ್ತ ಪುಸ್ತಕಗಳು

| | | |
|---|---|---|
| ಪ್ರೊ. ಎನ್. ಹಾಲಪ್ಪ | : | *ಅಂತರರಾಷ್ಟ್ರೀಯ ಸಂಬಂಧಗಳು* |
| ಡಾ. ಟಿ.ಡಿ. ದೇವೇಗೌಡ | : | *ಅಂತರರಾಷ್ಟ್ರೀಯ ಸಂಬಂಧಗಳು* |
| ಪಾಮರ್ ಮತ್ತು ಪರ್ಕಿನ್ಸ್ | : | *ಇಂಟರ್‌ನ್ಯಾಷನಲ್ ರಿಲೇಷನ್ಸ್* |
| ಜೆ.ಜೆ. ಮಾಂಗಾನ್ | : | *ಎ ಹಿಸ್ಟರಿ ಆಫ್ ಇಂಟರ್‌ನ್ಯಾಷನಲ್ ಆರ್ಗನೈಜೇಷನ್* |
| ಪ್ರಕಾಶ ಚಂದ್ರ | : | *ಇಂಟರ್‌ನ್ಯಾಷನಲ್ ರಿಲೇಷನ್ಸ್* |
| ಎಸ್.ಕೆ. ವರ್ಮ | : | *ಆ್ಯನ್ ಇಂಟ್ರಡಕ್ಷನ್ ಟು ಪಬ್ಲಿಕ್ ಇಂಟರ್‌ನ್ಯಾಷನಲ್* |

## 2.6 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರ

**ನಿಮ್ಮ ಪ್ರಗತಿ ಪರಿಶೀಲನೆ – 1**

1. ನೋಡಿ ವಿಭಾಗ 2.2 ಮತ್ತು ಉಪವಿಭಾಗಗಳು 2.2.1 ರಿಂದ 2.2.6 ರವರೆಗೆ

# ಘಟಕ – 3 : 19ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತದ ಪ್ರಮುಖ ಬೆಳವಣಿಗೆಗಳು

ರಚನೆ


3.0 ಉದ್ದೇಶಗಳು

3.1 ಪೀಠಿಕೆ

3.2 19ನೇ ಶತವಾನದಲ್ಲಿ ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತದ ಮುಖ್ಯ ಬೆಳವಣಿಗೆಗಳು.

3.2.1 ವಿಯೆನ್ನಾ ಕಾಂಗ್ರೆಸ್ (1815)

3.2.2 ಯುರೋಪಿನ ಪ್ರಮುಖ ರಾಷ್ಟ್ರಗಳ ಒಕ್ಕೂಟ

3.2.3 ಹೇಗ್ ಸಮ್ಮೇಳನಗಳು

3.2.4 ಸಾರ್ವಜನಿಕ ಅಂತರರಾಷ್ಟ್ರೀಯ ಸಂಘಗಳು

3.3 ಸಾರಾಂಶ

3.4 ಕಠಿಣ ಪದಗಳು

3.5 ಕೆಲವು ಉಪಯುಕ್ತ ಪುಸ್ತಕಗಳು

3.6 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 3.0 ಉದ್ದೇಶಗಳು

ಈ ಘಟಕದ ಉದ್ದೇಶವೆಂದರೆ 19ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಬೆಳವಣಿಗೆಯ ಪ್ರಮುಖ ಘಟ್ಟಗಳನ್ನು ನಿಮಗೆ ವಿವರಿಸುವುದಾಗಿದೆ. ಈ ಘಟಕದ ಅಧ್ಯಯನದ ನಂತರ ನೀವು ಈ ಕೆಳಗಿನವುಗಳನ್ನು ಉತ್ತರಿಸಬಹುದು :

- 19ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಸ್ಥೆಗಳ ವಿಕಾಸದಲ್ಲಿ ಮುಖ್ಯ ಘಟನೆಗಳನ್ನು ವಿವರಿಸಿ.
- ವಿಯೆನ್ನಾ ಕಾಂಗ್ರೆಸ್ಸಿನ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದ ಅಂತರರಾಷ್ಟ್ರೀಯ ಸಂಸ್ಥೆಗಳನ್ನು ಕುರಿತು ಪರಿಶೀಲಿಸಿ.
- ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಬೆಳವಣಿಗೆಯಲ್ಲಿ ಯುರೋಪಿನ ಪ್ರಮುಖ ರಾಷ್ಟ್ರಗಳ ಒಕ್ಕೂಟದ ಮಹತ್ವವನ್ನು ಚರ್ಚಿಸಿ.
- ಅಂತರರಾಷ್ಟ್ರೀಯ ಸಂಘಟನೆಗಳ ಬೆಳವಣಿಗೆಯಲ್ಲಿ ಹೇಗ್ ಸಮ್ಮೇಳನಗಳ ಪಾತ್ರವನ್ನು ಕುರಿತು ಪರಿಶೀಲಿಸಿ.

## 3.1 ಪರಿಚಯ

19ನೇ ಶತಮಾನದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಉಂಟಾದ ತೀವ್ರತರವಾದ ಬದಲಾವಣೆಗಳಿಂದಾಗಿ ರಾಷ್ಟ್ರೀಯ ಸಂಘ ಸಂಸ್ಥೆಗಳ ಬೆಳವಣಿಗೆಗೆ ವಿಶೇಷವಾದ ಪ್ರೋತ್ಸಾಹ ದೊರೆಯಿತು. 18ನೇ ಶತಮಾನದ ಉತ್ತರಾರ್ಧದಲ್ಲಿ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಉಂಟಾದ ಸಂಕೀರ್ಣವಾದ ವಿಶ್ವವ್ಯಾಪಿ ಆರ್ಥಿಕ ಜಾಲವು ವಿಭಿನ್ನ ರೀತಿಯಲ್ಲಿ ಅಂತರರಾಷ್ಟ್ರೀಯ ಸಂಸ್ಥೆಗಳ ಬೆಳವಣಿಗೆಯ ಮೇಲೆ ಗಾಢವಾದ ಪ್ರಭಾವ ಬೀರಿತು.

ಮೊದಲನೆಯದಾಗಿ ಅಂತರರಾಷ್ಟ್ರೀಯ ವ್ಯವಹಾರಗಳ ಹೆಚ್ಚಳದಿಂದಾಗಿ ಕೆಲವೊಮ್ಮೆ ರಾಜ್ಯಗಳ ನಡುವೆ ಘರ್ಷಣೆ ಹಾಗೂ ಯುದ್ಧಗಳಿಗೆ ಎಡೆ ಮಾಡಿಕೊಡುತ್ತವೆ. ಯುದ್ಧಗಳನ್ನು ತಪ್ಪಿಸಲು ರಾಷ್ಟ್ರಗಳು ಅಂತರರಾಷ್ಟ್ರೀಯ ನ್ಯಾಯ ಪಂಚಾಯಿತಿಯ ವಿಧಾನಗಳನ್ನು ರೂಪಿಸುತ್ತವೆ.

ಎರಡನೆಯದಾಗಿ, ರಾಜ್ಯಗಳ ವಿವಿಧ ರೀತಿಯ ಚಟುವಟಿಕೆಗಳನ್ನು ನಿಯಂತ್ರಿಸುವುದಕ್ಕಾಗಿ ಕೆಲವು ಸಾಮಾನ್ಯ ನಿಯಮಗಳನ್ನು ನಿಯಂತ್ರಿಸುವುದಕ್ಕಾಗಿ ಕೆಲವು ಸಾಮಾನ್ಯ ನಿಯಮಗಳನ್ನು ರೂಪಿಸಲು ಹಲವಾರು ಅಂತರರಾಷ್ಟ್ರೀಯ ಸಂಘಗಳು ಅಸ್ತಿತ್ವಕ್ಕೆ ಬರುತ್ತವೆ.

ಮೂರನೆಯದಾಗಿ, ಅಂತರರಾಷ್ಟ್ರೀಯ ವ್ಯವಹಾರಗಳ ಸೂಕ್ತ ಹಾಗೂ ದಕ್ಷ ನಿರ್ವಹಣೆಗೆ ರಾಜ್ಯಗಳ ಸಾರ್ವಭೌಮತ್ವದ ಹಕ್ಕು ಅಡಚಣೆಯಾಗುವುದನ್ನು ನಿವಾರಿಸಲು ಸಾಮಾನ್ಯ ಅಂಚೆ (postal) ಸಂಘದ ಸ್ಥಾಪನೆಗೆ ದಾರಿ ಮಾಡಿದೆ.

ನಾಲ್ಕನೆಯದಾಗಿ, ವಿಶ್ವದ ರಾಷ್ಟ್ರಗಳ ಆರ್ಥಿಕ ಪರಾವಲಂಬನೆಯು, ಅವುಗಳ ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸಲು ಅಂತರರಾಷ್ಟ್ರೀಯ ಆಯೋಗಗಳ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟಿದೆ.

ಈ ಪೀಠಿಕೆಯೊಂದಿಗೆ ಮುಂದಿನ ಭಾಗಗಳಲ್ಲಿ ಅಂತರರಾಷ್ಟ್ರೀಯ ಸಂಘಟನೆಗಳ ಬೆಳವಣಿಗೆಯ ವಿವಿಧ ಹೆಜ್ಜೆಗಳನ್ನು ಚರ್ಚಿಸೋಣ.

## 3.2 19ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತದ ಮುಖ್ಯ ಬೆಳವಣಿಗೆಗಳು

19ನೇ ಶತಮಾನದಲ್ಲಿ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ರಾಷ್ಟ್ರಗಳ ಪರಸ್ಪರ ಅವಲಂಬನೆ ಬೆಳೆದು ಆರ್ಥಿಕ ರಂಗದಲ್ಲಿ ಅಂತರರಾಷ್ಟ್ರೀಯ ಸಂಘಟನೆ ಪ್ರಾರಂಭವಾಯಿತು. ಅಲ್ಲಿಂದ ಮುಂದೆ 20ನೇ ಶತಮಾನದ ಪ್ರಾರಂಭದವರೆಗೆ

ಅನೇಕ ಅಂತರರಾಷ್ಟ್ರೀಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಅಂತರರಾಷ್ಟ್ರೀಯ ಸಂಘಟನೆಯ ಬೆಳವಣಿಗೆಯಲ್ಲಿ ಕಂಡುಬರುವ ಪ್ರಮುಖ ಹೆಜ್ಜೆಗಳೆಂದರೆ 1815ರ ವಿಯನ್ನಾ ಕಾಂಗ್ರೆಸ್; ಯುರೋಪಿನ ಪ್ರಮುಖ ರಾಷ್ಟ್ರಗಳ ಒಕ್ಕೂಟ (Concert of Europe); ದಿಹೇಗ್ ಸಮ್ಮೇಳನಗಳು; ಮತ್ತು ಸಾರ್ವಜನಿಕ ಅಂತರರಾಷ್ಟ್ರೀಯ ಸಂಘಗಳು. ಈ ಪ್ರತಿಯೊಂದು ಘಟನೆಯನ್ನು ವಿವರವಾಗಿ ಚರ್ಚಿಸೋಣ.

### 3.2.1 ವಿಯೆನ್ನಾ ಕಾಂಗ್ರೆಸ್ (1815)

19ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಸ್ಥಾಪನೆಯಲ್ಲಿ ಪ್ರಥಮ ಹೆಜ್ಜೆಯೆಂದರೆ 1815ರ ವಿಯೆನ್ನಾ ಕಾಂಗ್ರೆಸ್ / ಸಮ್ಮೇಳನ. ಈ ಸಮ್ಮೇಳನ ರಾಜಕೀಯ ವಿವಾದಗಳನ್ನು ಬಗೆಹರಿಸಿದ್ದಲ್ಲದೆ ವಿವಿಧ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಸಹ ಪರಿಹರಿಸಿತು. ಇದಲ್ಲದೆ ಕಾರ್ಯ ವಿಧಾನದ ನಿರೂಪಣೆ, ಮೂರು ಬಗೆಯ ರಾಯಭಾರಿಗಳ ವರ್ಗೀಕರಣ ಮುಂತಾದ ವಿಷಯುಗಳಿಗೂ ಗಮನ ಹರಿಸಿತು. ಈ ಸಮ್ಮೇಳನದಲ್ಲಿ ಯುರೋಪಿನ ಎಲ್ಲಾ ರಾಷ್ಟ್ರಗಳಿಗೆ ಸಮಾನತೆಯ ತತ್ವದ ಆಧಾರದ ಮೇಲೆ ಭಾಗವಹಿಸುವ ಅವಕಾಶ ನೀಡಿತು. ಸಮ್ಮೇಳನದ ಕಾರ್ಯಕಲಾಪಗಳ ನಿರ್ವಹಣೆಗೆ ಓರ್ವ ಅಧ್ಯಕ್ಷ ಹಾಗೂ ಸಮಿತಿಗಳನ್ನು ಹೊಂದುವ ಅವಕಾಶ ಮಾಡಿಕೊಟ್ಟಿತು. ಪಾಮರ್ ಮತ್ತು ಪರ್ಕಿನ್ಸ್ ಅವರು ಹೇಳಿರುವಂತೆ "ವಿಯೆನ್ನಾ ಕಾಂಗ್ರೆಸ್ ತನಗೆ ಅರಿವಿಲ್ಲದೆ ಮುಂದಿನ ಒಂದು ಶತಮಾನದವರೆಗೂ ಯುರೋಪಿನ ಹಾಗೂ ಜಾಗತಿಕ ವ್ಯವಹಾರಗಳನ್ನು ರೂಪಿಸುವಂತಹ ಒಂದು ರಾಜಕೀಯ ಮತ್ತು ಅಂತರರಾಷ್ಟ್ರೀಯ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿತು."

ವಿಯೆನ್ನಾ ಸಮ್ಮೇಳನದಲ್ಲಿ ಕೈಗೊಳ್ಳಲಾದ ನಿರ್ಣಯಗಳನ್ನು ಕಾರ್ಯಗತಗೊಳಿಸುವ ಕಾರ್ಯತಂತ್ರವನ್ನೂ ಸಹ ಈ ಸಮ್ಮೇಳನ ರೂಪಿಸಿತು. 1815ರ ವಿಯೆನ್ನಾ ಸಮ್ಮೇಳನದಿಂದ ಹಲವಾರು ಅಂತರಾಷ್ಟ್ರೀಯ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ಮೊದಲನೆಯದೆಂದರೆ 'ಪವಿತ್ರ ಮೈತ್ರಿ' (Holy Alliance) ಅಥವಾ 'ಚತುಷ್ಟ ಮೈತ್ರಿ' (Quadruple Alliance). ಇದನ್ನು ಯುರೋಪಿನ ಪ್ರಬಲ ರಾಷ್ಟ್ರಗಳಾದ ಆಸ್ಟ್ರಿಯಾ, ಬ್ರಿಟನ್, ಪ್ರಷ್ಯ ಮತ್ತು ರಷ್ಯ ವಿಯೆನ್ನಾ ಕಾಂಗ್ರೆಸ್ಸಿನ ಫಲಗಳನ್ನು ಅನುಭವಿಸಲು ಸ್ಥಾಪಿಸಿಕೊಂಡಿದ್ದವು. ಈ ಚತುಃಪಕ್ಷ ಮೈತ್ರಿಕೂಟಕ್ಕೆ ಫ್ರಾನ್ಸಿನ ಸೇರ್ಪಡೆಯಿಂದಾಗಿ "ಐವಡಿ ಮೈತ್ರಿಕೂಟ"ವಾಗಿ (Quintuple Alliance) ಪರಿವರ್ತನೆಯಾಯಿತು.

ಅಂತರರಾಷ್ಟ್ರೀಯ ಸಂಘಟನೆಯ ವಿಕಾಸಕ್ಕೆ ವಿಯೆನ್ನಾ ಕಾಂಗ್ರೆಸ್ ಮೂರು ರೀತಿಯಲ್ಲಿ ತನ್ನ ಕೊಡುಗೆಯನ್ನು ನೀಡಿದೆ.

1. ಮೊದಲನೆಯದಾಗಿ, ಯುದ್ಧದ ನಂತರ ಶಾಂತಿಯನ್ನು ಸ್ಥಾಪಿಸಲು ಮೈತ್ರಿಕೂಟವನ್ನು ಸಮ್ಮೇಳನ ಒತ್ತಾಯಿಸಿತು.
2. ಎರಡನೆಯದಾಗಿ, ಶಾಂತಿ ರಕ್ಷಣೆಗಾಗಿ ಪ್ರಬಲ ರಾಷ್ಟ್ರಗಳು ಮಧ್ಯಂತರ ಅವಧಿಗಳಲ್ಲಿ (ಆಗಾಗ್ಗೆ) ಸಮ್ಮೇಳನ ನಡೆಸುವ ಪರಿಪಾಠವನ್ನು ವಿಯೆನ್ನಾ ಸಮ್ಮೇಳನ ಪ್ರಾರಂಭಿಸಿತು.
3. ಮೂರನೆಯದಾಗಿ, ಶಾಂತಿ ರಕ್ಷಣೆಯು ಬೃಹತ್ ರಾಷ್ಟ್ರಗಳ ಸಹಕಾರವ್ನನು ಅವಲಂಬಿಸಿದೆ ಎಂಬ ತತ್ವಕ್ಕೆ ವಿಯೆನ್ನಾ ಕಾಂಗ್ರೆಸ್ ಒತ್ತು ನೀಡಿತು.

### 3.2.2 ಯುರೋಪಿನ ಪ್ರಮುಖ ರಾಷ್ಟ್ರಗಳ ಒಕ್ಕೂಟ (Concert of Europe)

ಅಂತರರಾಷ್ಟ್ರೀಯ ರಂಗದಲ್ಲಿ ಸಮಾಲೋಚನೆಗಳ ಯುಗವು ವಿಯೆನ್ನಾ ಕಾಂಗ್ರೆಸ್ಸಿನಿಂದ ಪ್ರಾರಂಭವಾಯಿತೆಂದು ಹೇಳಬಹುದು. ಕ್ರಿಶ್ಚಿಯನ್ ನೈತಿಕ ತತ್ವಗಳಿಗನುಗುಣವಾಗಿ ಆಂತರಿಕ ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ನಿರ್ವಹಣೆಗಾಗಿ 1815ರಲ್ಲಿ ರಷ್ಯಾದ ಜಾರ್ ಅಲೆಕ್ಸಾಂಡರ್‌ನು ಪ್ರಷ್ಯಾ ಮತ್ತು ಆಸ್ಟ್ರೀಯಾದೊಂದಿಗೆ ಪವಿತ್ರ ಮೈಲಿಯನ್ನು (Holty Alliance)

ಮಾಡಿಕೊಂಡನು. 1818ರಲ್ಲಿ ಜಾರ್ ಚಕ್ರವರ್ತಿಯು ಎಕ್ಸ್-ಲಾ-ಚಾಪೆಲ್ಲೆ (Aix-La-Chappelle) ಕಾಂಗ್ರೆಸ್ಸಿನಲ್ಲಿ (ಸಮ್ಮೇಳನದಲ್ಲಿ) ಯುರೋಪಿನ ಒಕ್ಕೂಟ (Concert of Europe) ಎಂದು ಕರೆಯಲ್ಪಡುವ ರಾಷ್ಟ್ರ ಸಂಘ (League of Nations) ದ ಸ್ಥಾಪನೆಯ ವಿಚಾರವನ್ನು ಮಂಡಿಸಿದನು. ಈ ರಾಷ್ಟ್ರ ಸಂಘವು ತನ್ನ ಒಗ್ಗಟ್ಟಿನಿಂದ ಯುರೋಪಿನ ಭದ್ರತೆಗೆ, ಆಂತರಿಕ ಕ್ರಾಂತಿಯನ್ನೊಳಗೊಂಡಂತೆ ಯಾವುದೇ ಅಪಾಯ ಅಥವಾ ಬೆದರಿಕೆಯನ್ನು ಹಿಮ್ಮೆಟ್ಟಿಸುವ ಉದ್ದೇಶ ಹೊಂದಿದ್ದಿತು. ಎಕ್ಸ್-ಲಾ-ಛಾಪೆಲ್ ಸಮ್ಮೇಳನವು ಯುರೋಪಿಗೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳನ್ನು / ಸಮಸ್ಯೆಗಳನ್ನು ಪರಿಶೀಲಿಸಿತು. ಅವುಗಳಲ್ಲಿ ಪ್ರಮುಖ ವಿಷಯಗಳೆಂದರೆ ಅಂತರರಾಷ್ಟ್ರೀಯ ಗುಲಾಮ ವ್ಯಾಪಾರ, ಯಹೂದಿಗಳ ವಿಮೋಚನೆ, ಕಡಲುಗಳ್ಳರು ಲೂಟಿ ಮಾಡುವುದು, ಸ್ಪೇನ್-ಅಮೆರಿಕನ್ ವಸಾಹತುಗಳ ದಂಗೆಯ ಸಮಸ್ಯೆ; ಸ್ಪೇನ್ ಮತ್ತು ಪೋರ್ಚುಗಲ್, ಡೆನ್ಮಾರ್ಕ್ ಮತ್ತು ಸ್ವೀಡನ್, ದೇಶಗಳ ನಡುವಿನ ಜಗಳ ಹಾಗೂ ಬವೇರಿಯಾ ಮತ್ತು ಬದೇನ್ ದೇಶಗಳ ನಡುವಿನ ಘರ್ಷಣೆ ಮುಂತಾದ ಸಮಸ್ಯೆಗಳನ್ನು ಬಗೆಹರಿಸುವುದರ ಮೂಲಕ ಯುರೋಪಿನ ಒಕ್ಕೂಟವು, ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಸ್ಪರ ಸಮಾಲೋಚನೆಗಳ ಮೂಲಕ ಭಿನ್ನಾಭಿಪ್ರಾಯಗಳು ಹಾಗೂ ಸಮಸ್ಯೆಗಳನ್ನು ಇತ್ಯರ್ಥಪಡಿಸುವುದರ ಉಪಯುಕ್ತತೆಯ ಮಹತ್ವವನ್ನು ಎತ್ತಿ ತೋರಿಸಿತು. ಎಕ್ಸ್-ಲಾ-ಛಾಪೆಲ್ ಸಮ್ಮೇಳನದ ನಂತರ ಯುರೋಪಿನ ರಾಷ್ಟ್ರಗಳು 1820ರಲ್ಲಿ ಟ್ರಪ್ಪೌವಿನಲ್ಲಿಯೂ, 1821ರಲ್ಲಿ ಲೈಬ್ಯಾಕ್‌ನಲ್ಲಿಯೂ, 1822ರಲ್ಲಿ ವೆರೋನದಲ್ಲಿಯೂ ಅನೇಕ ಸಮ್ಮೇಳನಗಳನ್ನು ನಡೆಸಿದವು. ಆದರೆ ಈ ಸಮ್ಮೇಳನಗಳು ಎಕ್ಸ್-ಲಾ-ಛಾಪೆಲ್ ಸಮ್ಮೇಳನದಷ್ಟು ಯಶಸ್ವಿಯಾಗದಿದ್ದರೂ, ಶಾಂತಿ ಕಾಲದಲ್ಲೂ ತಮ್ಮ ವಿಚಾರ ಹಾಗೂ ಹಿತಾಸಕ್ತಿಗಳಿಗೆ ಸಂಬಂಧಿಸಿದಂತೆ ವಿಚಾರ ವಿನಿಮಯಕ್ಕಾಗಿ ಯುರೋಪಿನ ರಾಷ್ಟ್ರಗಳು ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ಏರ್ಪಡಿಸುವ ಪರಿಪಾಠವನ್ನು ಪ್ರತಿಷ್ಠಾಪಿಸಲ್ಪಟ್ಟಿತು.

ಯುರೋಪಿನ ಒಕ್ಕೂಟವು (Concert of Europe) ಹಲವಾರು ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಉದಾಹರಣೆಗೆ ಬೆಲ್ಜಿಯಮ್ ಸ್ವಾತಂತ್ರ್ಯ (1830); ಗ್ರೀಸ್ ದೇಶದ ಸ್ವಾತಂತ್ರ್ಯ (1837); ಟರ್ಕಿ ಸಾಮ್ರಾಜ್ಯದ ಒಂದು ಭಾಗವಾಗಿ ಈಜಿಪ್ಟಿನ ಸ್ಥಾನಮಾನದ ರಕ್ಷಣೆ (1841); ಒಟ್ಟೋಮನ್ ಸಾಮ್ರಾಜ್ಯದ ಭೂಸಮಗ್ರತೆಗೆ ಮಾನ್ಯತೆ (1853); ಡ್ಯಾನೂಬ್‌ನ ನಿಯಂತ್ರಣ ಮತ್ತು ಸಮುದ್ರಯಾನ ಮುಂತಾದ ಹಲವಾರು ಸಮಸ್ಯೆಗಳನ್ನು ಇತ್ಯರ್ಥಪಡಿಸಿದೆ. ಯುರೋಪಿನ ಒಕ್ಕೂಟವು, ಪ್ರಾರಂಭದಲ್ಲಿ, ಯುರೋಪಿನ ವ್ಯವಹಾರ ಹಾಗೂ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿದ್ದಿತು. ಆನಂತರ ಅದು ವಿಶ್ವ ಒಕ್ಕೂಟವಾಗಿ (World Concert) ಬೆಳೆಯಲು ಪ್ರಾರಂಭವಾಗಿ, ಅಮೆರಿಕವನ್ನು ಹೊರತುಪಡಿಸಿ, ಪ್ರಪಂಚದ ಎಲ್ಲಾ ರಾಷ್ಟ್ರಗಳ ವ್ಯವಹಾರಗಳಲ್ಲಿ ಮಧ್ಯ ಪ್ರವೇಶಿಸತೊಡಗಿತು. ಯುರೋಪಿನ ಒಕ್ಕೂಟವು ತನ್ನ ಅಸ್ತಿತ್ವದಲ್ಲಿ ಬಹುತೇಕ ಅಂತರರಾಷ್ಟ್ರೀಯ ಸಂಘಟನೆಯ ಪ್ರತಿರೂಪವನ್ನು ಸೃಷ್ಟಿಸಿತೆಂದು ಹೇಳಬಹುದು.

ಜೀವರ್ ಅವರು ಯುರೋಪಿನ ಒಕ್ಕೂಟದ ಸ್ಥಾಪನೆಯು ಅಂತರರಾಷ್ಟ್ರೀಯ ಸಂಘಟನೆಯ ಇತಿಹಾಸದಲ್ಲಿ ಒಂದು ಮೈಲುಗಲ್ಲು ಎಂದು ಬಣ್ಣಿಸಿದ್ದಾರೆ. ಯುರೋಪಿನ ಒಕ್ಕೂಟವು ಅಂತರರಾಷ್ಟ್ರೀಯ ಸಂಘಟನೆಯ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಮೂರು ರೀತಿಯಲ್ಲಿ ತನ್ನ ಕೊಡುಗೆಯನ್ನು ನೀಡಿದೆ;

1. ಮೊದಲನೆಯದಾಗಿ, ಯುರೋಪಿನ ಒಕ್ಕೂಟವು ಯುದ್ಧ ಕಾಲದಲ್ಲಿ ಸ್ಥಾಪನೆಯಾದರೂ, ಯುದ್ಧ ಮುಗಿದ ನಂತರವೂ ಅದು ಶಾಂತಿ ಸ್ಥಾಪನೆಯ ಕಾರ್ಯವನ್ನು ಮುಂದುವರಿಸಿತು.
2. ಎರಡನೆಯದಾಗಿ, ಮಧ್ಯಂತರದಲ್ಲಿ ಪ್ರಮುಖ ರಾಷ್ಟ್ರಗಳು ಇಚ್ಛಿಸಿದಾಗ ನಿಗದಿತ ಕಾಲದಲ್ಲಿ ಸಮ್ಮೇಳನಗಳನ್ನು ಏರ್ಪಡಿಸುತ್ತಿತ್ತು.
3. ಮೂರನೆಯದಾಗಿ, ಶಾಂತಿ ರಕ್ಷಣೆಯು ಪ್ರಬಲ ರಾಷ್ಟ್ರಗಳ ಸಹಕಾರವನ್ನು ಅವಲಂಬಿಸಿದೆ ಎಂದು ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿತು.

ಯುರೋಪಿನ ಒಕ್ಕೂಟವು ಅಸ್ತಿತ್ವದಲ್ಲಿದ್ದ 90 ವರ್ಷಗಳ ಅವಧಿಯಲ್ಲಿ ಯುರೋಪಿನ ರಾಜಕೀಯದ ಮೇಲೆ ತನ್ನ ಮಹತ್ವಪೂರ್ಣ ಪ್ರಭಾವ ಬೀರಿತು. ಇದು ಅನೌಪಚಾರಿಕ ಸಮ್ಮೇಳನ ಹಾಗೂ ಸಮಾಲೋಚನೆಗಳ ಮೂಲಕ ತನ್ನ ಕಾರ್ಯವನ್ನು ನಿರ್ವಹಿಸುತ್ತಿತ್ತು. ಯುರೋಪಿನ ಒಕ್ಕೂಟದ ಮಹತ್ವದ ಬಗ್ಗೆ ಪ್ರೊ. ಪ್ಯಾಂಗೋನ್ ಹೀಗೆ ಹೇಳಿದ್ದಾರೆ. "ಒಕ್ಕೂಟವು ಸಮಸ್ಯೆಗಳನ್ನು ಬಗೆಹರಿಸುವ ಅಧಿಕಾರವನ್ನಾಗಲಿ ಅಥವಾ ಇಚ್ಛೆಯನ್ನು ಹೊಂದಿಲ್ಲದಿದ್ದರೂ, ಪ್ರಬಲ ರಾಷ್ಟ್ರಗಳ ನಡುವೆ ಸಮಸ್ಯೆಗಳನ್ನು ಸ್ನೇಹಪೂರ್ವಕವಾಗಿ ಚರ್ಚಿಸಿ ವಿಶದೀಕರಿಸುವಲ್ಲಿ ಅದರ ಉಪಯುಕ್ತತೆಯನ್ನು ನಾವು ಕಾಣಬಹುದು". ಒಟ್ಟಾರೆ ಪವಿತ್ರ ರೋಮನ್ ಸಾಮ್ರಾಜ್ಯ ಅವನತಿ ಹೊಂದಾಗಿನಿಂದ ರಾಷ್ಟ್ರ ಸಂಘ (League of Nations) ಅಸ್ತಿತ್ವಕ್ಕೆ ಬರುವವರೆಗೂ ಐರೋಪ್ಯ ಒಕ್ಕೂಟ (Concert of Europe) ಯುರೋಪಿನ ಶಾಂತಿಯನ್ನು ಕಾಪಾಡಿತು.

**ನಿಮ್ಮ ಪ್ರಗತಿ ಪರಿಶೀಲನೆ – 1**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ವಿಯೆನ್ನಾ ಕಾಂಗ್ರೆಸ್‌ನ ನಂತರ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಬೆಳವಣಿಗೆಯನ್ನು ಚರ್ಚಿಸಿ.**

------------------------------------------------------------

------------------------------------------------------------

------------------------------------------------------------

------------------------------------------------------------

**2. "ಯುರೋಪಿನ ಒಕ್ಕೂಟವು ಕರ್ತವ್ಯರಹಿತ ಹಕ್ಕುಗಳ ಒಂದು ವ್ಯವಸ್ಥೆ ಮತ್ತು ಸಂಘಟನೆಯಿಲ್ಲದ ಹೊಣೆಗಾರಿಕೆ"– ಚರ್ಚಿಸಿ.**

------------------------------------------------------------

------------------------------------------------------------

------------------------------------------------------------

------------------------------------------------------------

### 3.2.3 ಹೇಗ್ ಸಮ್ಮೇಳನಗಳು

ಅಂತರರಾಷ್ಟ್ರೀಯ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರುವ ದಿಕ್ಕಿನಲ್ಲಿ ಕೆಲವು ಸಮ್ಮೇಳನಗಳನ್ನು ನಡೆಸಲಾಯಿತು. ಅವುಗಳಲ್ಲಿ ಮುಖ್ಯವಾದವುಗಳೆಂದರೆ 1899ರ, ಹಾಗೂ 1907ರ ಹೇಗ್ ಸಮ್ಮೇಳನಗಳು. ಇವುಗಳು ಅಂತರರಾಷ್ಟ್ರೀಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದವು. 1899ರಲ್ಲಿ ನಡೆದ ಪ್ರಥಮ ಹೇಗ್ ಸಮ್ಮೇಳನದಲ್ಲಿ 26 ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿದ್ದು ವಿವಾದಗಳನ್ನು ಇತ್ಯರ್ಥಪಡಿಸಲು ಶಾಶ್ವತವಾದ ಅಂತರರಾಷ್ಟ್ರೀಯ ನ್ಯಾಯಾಲಯವನ್ನು ಸ್ಥಾಪಿಸುವ ನಿರ್ಣಯವನ್ನು ಅನುಮೋದಿಸಿದವು. 1899 ರಿಂದ 1912ರವರೆಗಿನ ಅವಧಿಯಲ್ಲಿ 11 ರಾಷ್ಟ್ರಗಳು ತಮ್ಮ ವಿವಾದಗಳನ್ನು ಈ ನ್ಯಾಯಾಲಯದ ಮೂಲಕ ಬಗೆಹರಿಸಿಕೊಂಡವು.

1907ರಲ್ಲಿ ಎರಡನೆಯ ಹೇಗ್ ಸಮ್ಮೇಳನವು ಸಮಾವೇಶಗೊಂಡಿತು. ಇದರಲ್ಲಿ 44 ರಾಷ್ಟಗಳೂ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ಯುದ್ಧ ವಿಧಾನವನ್ನು ಕ್ರಮಪಡಿಸುವ ಸಮಸ್ಯೆಯನ್ನು ಪರಿಶೀಲಿಸಲಾಯಿತು. ಈ ಸಮ್ಮೇಳನವನ್ನು ರಾಜ್ಯಗಳ "ಪ್ರಥಮ ಸಾಮಾನ್ಯ ಸಭೆ" (First General Assembly) ಎಂದು ಪರಿಗಣಿಸಲಾಗಿದೆ. 1899 ಮತ್ತು 1907ರ ಹೇಗ್ ಸಮ್ಮೇಳನಗಳು ಮೂರು ವಿಧದಲ್ಲಿ ಪ್ರಾಮುಖ್ಯತೆ ಹೊಂದಿದೆ.

1. ಮೊದಲನೆಯದಾಗಿ, ಈ ಸಮ್ಮೇಳನಗಳು ಸಣ್ಣ ರಾಷ್ಟ್ರಗಳನ್ನು ಪ್ರಥಮವಾಗಿ ಸ್ವತಂತ್ರ ಹಾಗೂ ಸಮಾನ ಸಹಭಾಗಿಗಳೆಂದು ಪರಿಗಣಿಸಿದವು.

2. ಈ ಸಮ್ಮೇಳನಗಳು ಯುದ್ಧಗಳ ಬರ್ಬರತೆಯ ಹಾಗೂ ದುಷ್ಪರಿಣಾಮಗಳನ್ನು ಎತ್ತಿ ತೋರಿಸಿ ಯುದ್ಧಗಳನ್ನು ತಡೆಗಟ್ಟುವ ಅಗತ್ಯತೆಯ ಬಗ್ಗೆ ಹೆಚ್ಚು ಒತ್ತು ನೀಡಿದವು.

3. ಮೂರನೆಯದಾಗಿ, ರಾಷ್ಟ್ರಗಳ ನಡುವಿನ ವಿವಾದಗಳನ್ನು ಇತ್ಯರ್ಥಪಡಿಸಲು ಶಾಶ್ವತ ಸಂಸ್ಥೆಗಳ ಹಾಗೂ ವಿಧಾನಗಳನ್ನು ಈ ಸಮ್ಮೇಳನಗಳು ಒದಗಿಸಿದವು.

ಪಾಮರ್ ಮತ್ತು ಪರ್ಕಿನ್ಸ್‌ರು 1899 ಮತ್ತು 1907ರ ಹೇಗ್ ಸಮ್ಮೇಳನಗಳ ಪ್ರಾಮುಖ್ಯತೆಯ ಬಗ್ಗೆ ಈ ರೀತಿ ಹೇಳಿದ್ದಾರೆ : "ಹೇಗ್ ಸಮ್ಮೇಳನಗಳು ತಾತ್ಕಾಲಿಕ ಸಮ್ಮೇಳನಗಳಿಂದ ರಾಷ್ಟ್ರ ಸಂಘ (League of Nations) ದ ಸ್ಥಾಪನೆಯೆಡೆಗೆ ಪರಿವರ್ತನಾ ಹೆಜ್ಜೆಯನ್ನು ಬಿಂಬಿಸುತ್ತವೆ" ಎಂದು ಹೇಳಿದ್ದಾರೆ.

### 3.2.4 ಸಾರ್ವಜನಿಕ ಅಂತರರಾಷ್ಟ್ರೀಯ ಸಂಘಗಳು

19ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘಟನೆಯ ವಿಕಾಸದ ಇತಿಹಾಸದಲ್ಲಿ ಮತ್ತೊಂದು ಪ್ರಮುಖ ಬೆಳವಣಿಗೆಯೆಂದರೆ ಹಲವಾರು ಅಂತರರಾಷ್ಟ್ರೀಯ ಆಡಳಿತಾತ್ಮಕ ಸ್ವರೂಪದ ಸಂಸ್ಥೆಗಳ ಉದಯ. ಈ ಸಂಘ ಸಂಸ್ಥೆಗಳು ವಿಶೇಷವಾಗಿ 19ನೇ ಶತಮಾನದ ಉತ್ತರಾರ್ಧದಲ್ಲಿ ಮತ್ತು 20ನೇ ಶತಮಾನದ ಪ್ರಾರಂಭದಲ್ಲಿ ಬೆಳವಣಿಗೆಯಾದವು. ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ರಾಷ್ಟ್ರಗಳ ಸ್ವಾವಲಂಬನೆಯು ಅಂತ್ಯವಾಯಿತು. ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ರಾಷ್ಟ್ರಗಳ ಪರಸ್ಪರ ಅವಲಂಬನೆ ಬೆಳೆದು ಆರ್ಥಿಕ ರಂಗದಲ್ಲಿ ವಿಶ್ವ ಸಂಘಟನೆ ಪ್ರಾರಂಭವಾಯಿತು. ಅಲ್ಲಿಂದ ಮುಂದೆ 20ನೇ ಶತಮಾನದ ಪ್ರಾರಂಭದಲ್ಲಿ ಬೆಳವಣಿಗೆಯಾದವು. ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ರಾಷ್ಟ್ರಗಳ ಸ್ವಾವಲಂಬನೆಯು ಅಂತ್ಯವಾಯಿತು. ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ರಾಷ್ಟ್ರಗಳ ಪರಸ್ಪರ ಅವಲಂಬನೆ ಬೆಳೆದು ಆರ್ಥಿಕ ರಂಗದಲ್ಲಿ ವಿಶ್ವ ಸಂಘಟನೆ ಪ್ರಾರಂಭವಾಯಿತು. ಅಲ್ಲಿಂದ ಮುಂದೆ 20ನೇ ಶತಮಾನದ ಪ್ರಾರಂಭದವರೆಗೆ ಅನೇಕ ಅಂತರರಾಷ್ಟ್ರೀಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ಬಹುತೇಕವಾಗಿ ವಾಣಿಜ್ಯ ಮತ್ತು ಆಡಳಿತಾತ್ಮಕ ಸ್ವರೂಪದ ಸಂಸ್ಥೆಗಳಾಗಿದ್ದವು. ಇವುಗಳಲ್ಲಿ ಮುಖ್ಯ ವಾದವುಗಳೆಂದರೆ – ತಂತಿ ಸಂಪರ್ಕ ಆಡಳಿತ ಅಂತರರಾಷ್ಟ್ರೀಯ ಕಛೇರಿ (International Bureau of Telegraphic Administration - 1868): 'ಜಾಗತಿಕ (ವಿಶ್ವದ) ಅಂಚೆ ಸಂಘ' (Universal Postal Union - 1875): 'ಅಂತರರಾಷ್ಟ್ರೀಯ ಗ್ರಂಥ ಸ್ವಾಮ್ಯ ಸಂಘ' (International Copyright Union -1886) : 'ಅಂತರರಾಷ್ಟ್ರೀಯ ಆರೋಗ್ಯ ಕಾರ್ಯಾಲಯ' (International Office Health - 1903): 'ಅಂತರರಾಷ್ಟ್ರೀಯ ಕೃಷಿ ಸಂಸ್ಥೆ' (International Institute of Agriculture - 1905): ತೂಕ ಮತ್ತು ಅಳತೆಯ ಅಂತರರಾಷ್ಟ್ರೀಯ ಕಛೇರಿ (International Bureau of Weights and Measures) ಇತ್ಯಾದಿ. ಇವುಗಳಲ್ಲಿ ಕೆಲವು ಇನ್ನೂ ಅಸ್ತಿತ್ವದಲ್ಲಿವೆ. ಉಳಿದ ಕೆಲವು ಸಂಸ್ಥೆಗಳ ಕಾರ್ಯಗಳನ್ನು ವಿಶ್ವ ಸಂಸ್ಥೆಯ ವಿಶೇಷ ಅಂಗ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ. ಈ ಸಂಸ್ಥೆಗಳಿಂದ ವಿಶ್ವಭಾತೃತ್ವ ಬೆಳೆಯಲು ಅವಕಾಶವಾಯಿತು.

ಅಂತರರಾಷ್ಟ್ರೀಯ ಸಾರ್ವಜನಿಕ ಆಡಳಿತಾತ್ಮಕ ಸಂಘಗಳು ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಅವುಗಳು ಮಾಹಿತಿ ಹಾಗೂ ಸಾಮಾನ್ಯ ಸಮಸ್ಯೆಗಳ ಚರ್ಚಾ ಕೇಂದ್ರಗಳಂತೆ ಕಾರ್ಯ ನಿರ್ವಹಿಸುತ್ತಿದ್ದು, ವಿವಿಧ ರಾಷ್ಟ್ರಗಳ ನಡುವೆ

ಸಮನ್ವಯತೆಯನ್ನುಂಟು ಮಾಡಲು ಪ್ರಯತ್ನಿಸುತ್ತಿದ್ದವು. ಈ ಸಂಘಗಳು ಈ ಕೆಳಗಿನ ಕೆಲವು ಸಾಮಾನ್ಯ ಲಕ್ಷಣಗಳನ್ನು ಹೊಂದಿದ್ದವು.

1. ಅಂತರರಾಷ್ಟ್ರೀಯ ಸಂಘಗಳು ಬಹುಪಕ್ಷೀಯ ಒಪ್ಪಂದಗಳ ಮೂಲಕ ಅಸ್ತಿತ್ವಕ್ಕೆ ಬಂದಿದ್ದು, ಅವುಗಳ ಸದಸ್ಯರ ಹಕ್ಕು ಬಾಧ್ಯತೆಗಳನ್ನು ಸ್ಪಷ್ಟವಾಗಿ ಗೊತ್ತುಪಡಿಸಲಾಗಿತ್ತು. ಆ ಸಂಘಗಳ ಧ್ಯೇಯ ಸಾಧನೆಗಾಗಿ ಸಾಂಸ್ಥಿಕ ಚೌಕಟ್ಟನ್ನು ಹೊಂದಿದ್ದವು.

2. ಆ ಸಂಘಗಳು ಸ್ವಯಂಪ್ರೇರಿತ ಸ್ವರೂಪದ ಸಂಘಗಳಾಗಿದ್ದು, ಅವುಗಳ ಸದಸ್ಯರ ಸಮಾನತೆಯ ತತ್ವದಲ್ಲಿ ನಂಬಿಕೆ ಹೊಂದಿದ್ದವು.

3. ಬಹುತೇಕ ಸಂಘಗಳು ಮೂರು ಅಂಗಗಳನ್ನು ಹೊಂದಿದ್ದವು. ಅವುಗಳೆಂದರೆ (a) ಎಲ್ಲ ಸದಸ್ಯರನ್ನೊಳಗೊಂಡ ಸಭೆ (Assembly) (b) ಒಂದು ಪರಿಷತ್ – ಮುಖ್ಯ ಕಾರ್ಯಾಂಗ ಮತ್ತು (c) ಅಂತರರಾಷ್ಟ್ರೀಯ ನಾಗರಿಕ ಸೇವಾ ವರ್ಗವನ್ನೊಳಗೊಂಡ ಒಂದು ಸಚಿವಾಲಯ. ಈ ಸಚಿವಾಲಯವು ಸಂಘದ ನಿಯತ ಕಾರ್ಯಗಳನ್ನು ನೋಡಿಕೊಳ್ಳುತ್ತಿತ್ತು.

4. ಕೆಲವು ಸಂಘಗಳು ವಿಶೇಷ ಶಾಸನೀಯ ಸ್ಥಾನಮಾನ ಹೊಂದಿದ್ದರೆ ಮತ್ತೆ ಕೆಲವು ರಾಜ ತಾಂತ್ರಿಕ ವಿನಾಯಿತಿಗಳನ್ನು ಹೊಂದಿದ್ದವು.

5. ಎಲ್ಲಾ ತೀರ್ಮಾನಗಳನ್ನು ಬಹು ಮತದಿಂದ ಕೈಗೊಳ್ಳಲಾಗುತ್ತಿತ್ತು.

6. ಆ ಸಂಘಗಳಿಗೆ ಹಣಕಾಸನ್ನು ಅವುಗಳ ಸದಸ್ಯ ರಾಷ್ಟ್ರಗಳು ಒದಗಿಸುತ್ತಿದ್ದವು.

ಸಾರ್ವಜನಿಕ ಅಂತರರಾಷ್ಟ್ರೀಯ ಸಂಘಗಳು ಸರ್ಕಾರದ ಆಡಳಿತಾತ್ಮಕ ಕಾರ್ಯಗಳಿಗೆ ಪೂರಕವಾಗಿದ್ದು, ಸರ್ಕಾರಕ್ಕೆ ಕೆಲವು ನಿರ್ದಿಷ್ಟ ಸೇವೆಗಳನ್ನು ಒದಗಿಸುತ್ತಿದ್ದವು. ಆ ಸಂಘಗಳು ನಿಯಮಗಳನ್ನು ರೂಪಿಸುವ ಹಾಗೂ ತೆರಿಗೆಗಳನ್ನು ವಿಧಿಸುವ ಅಧಿಕಾರವನ್ನು ಹೊಂದಿಲ್ಲದಿದ್ದರೂ, ಭವಿಷ್ಯತ್ತಿನ ಅಂತರರಾಷ್ಟ್ರೀಯ ಸಂಘಟನೆಗಳ ಮೇಲೆ ಗಾಢವಾದ ಪ್ರಭಾವ ಬೀರುವಂತಹ ಹಲವಾರು ಸಂಘಟನಾತ್ಮಕ ಪರಿಕಲ್ಪನೆಗಳನ್ನು ಜಾರಿಗೆ ತಂದವು. ಎಲ್ಲಕ್ಕಿಂತ ಮುಖ್ಯವಾಗಿ ಸಾರ್ವಜನಿಕ ಅಂತರರಾಷ್ಟ್ರೀಯ ಸಂಘಟನೆಗಳು ಸಾರ್ವಭೌಮ ರಾಷ್ಟ್ರಗಳಲ್ಲಿ ಸಹಕಾರ ಹಾಗು ಮೈತ್ರಿ ಭಾವನೆಗಳನ್ನು ಮೂಡಿಸಲು ತುಂಬಾ ಸಹಕಾರಿಯಾದವು.

**ನಿಮ್ಮ ಪ್ರಗತಿ ಪರಿಶೀಲನೆ – 2**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ಹೇಗ್ ಸಮ್ಮೇಳನಗಳನ್ನು ಕುರಿತು ಒಂದು ಟಿಪ್ಪಣಿ ಬರೆಯಿರಿ.**

-----------------------------------------------------------------

-----------------------------------------------------------------

-----------------------------------------------------------------

-----------------------------------------------------------------

**2. 19ನೇ ಶತಮಾನದ ಉತ್ತರಾರ್ಧದಲ್ಲಿತ್ತು 20ನೇ ಶತಮಾನದ ಪ್ರಾರಂಭದ ಅವಧಿಯಲ್ಲಿ ಬೆಳವಣಿಗೆಯಾದ ವಿವಿಧ ಅಂತರರಾಷ್ಟ್ರೀಯ ಸಂಘ-ಸಂಸ್ಥೆಗಳನ್ನು ವಿವರಿಸಿ.**

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

## 3.3 ಸಾರಾಂಶ

ಈ ಘಟಕದಲ್ಲಿ 19ನೇ ಶತಮಾನದಲ್ಲಿ ಬೆಳವಣಿಗೆಯಾದ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳನ್ನು ಚರ್ಚಿಸಿದ್ದೇವೆ. ಅಂತರರಾಷ್ಟ್ರೀಯ ಸಂಘಟನೆಗಳ ವಿಕಾಸದಲ್ಲಿ ಪ್ರಮುಖ ಹೆಜ್ಜೆಗಳೆಂದರೆ, 1815ರ ವಿಯೆನ್ನಾ ಕಾಂಗ್ರೆಸ್ ಯುರೋಪಿನ ಪ್ರಮುಖ ರಾಷ್ಟ್ರಗಳು ರಚಿಸಿಕೊಂಡ ಒಕ್ಕೂಟ (Concert of Europe) 1899 ಮತ್ತು 1907 ರ ಹೇಗ್ ಸಮ್ಮೇಳನಗಳು ಮತ್ತು 19ನೇ ಶತಮಾನದ ಕೊನೆಯಲ್ಲಿ ಹಾಗೂ 20ನೇ ಶತಮಾನದ ಪ್ರಾರಂಭದಲ್ಲಿ ಅಸ್ತಿತ್ವಕ್ಕೆ ಬಂದ ಅನೇಕ ಸಾರ್ವಜನಿಕ ಅಂತರರಾಷ್ಟ್ರೀಯ ಆಡಳಿತದ ಸಂಘ-ಸಂಸ್ಥೆಗಳು.

## 3.4 ಕಠಿಣ ಪದಗಳು

| | | |
|---|---|---|
| ಚತುಷ್ಪ ಮೈತ್ರಿ | – | ಯುರೋಪಿನ ನಾಲ್ಕು ರಾಷ್ಟ್ರಗಳು (ಆಸ್ಟ್ರೀಯಾ, ಬ್ರಿಟನ್, ಪ್ರಷ್ಯಯ ಮತ್ತು ರಷ್ಯ) ಮಾಡಿಕೊಂಡ ಒಂದು ಮೈತ್ರಿ ಕೂಟ. |
| ಐವಡಿ ಮೈತ್ರಿ | – | ಐದು ರಾಷ್ಟ್ರಗಳ ಒಂದು ಮೈತ್ರಿ (ಆಸ್ಟ್ರೀಯಾ, ಬ್ರಿಟನ್, ಪ್ರಷ್ಯಾ, ರಷ್ಯ ಮತ್ತು ಫ್ರಾನ್ಸ್) |
| ಕೂಟ | – | ಸಂಘ |

## 3.5 ಕೆಲವು ಉಪಯುಕ್ತ ಪುಸ್ತಕಗಳು


| | | |
|---|---|---|
| **ಪ್ರೊ. ಎನ್. ಹಾಲಪ್ಪ** | : | *ಅಂತರರಾಷ್ಟ್ರೀಯ ಸಂಬಂಧಗಳು* |
| **ಡಾ. ಟಿ.ಡಿ. ದೇವೇಗೌಡ** | : | *ಅಂತರರಾಷ್ಟ್ರೀಯ ರಾಜಕಾರಣ* |
| **ಪಾಮರ್ ಮತ್ತು ಪರ್ಕಿನ್ಸ್** | : | *ಇಂಟರ್‌ನ್ಯಾಷನಲ್ ರಿಲೇಷನ್ಸ್* |
| **ಪ್ರೇಮ್ ಅರೋರ** | : | *ದಿ ಯುನೈಟೆಡ್ ನೇಷನ್ಸ್* |
| **ಜೆ.ಕೆ. ಛೋಪ್ರ** | : | *ಇಂಟರ್‌ನ್ಯಾಷನಲ್ ಅಫೇರ್ಸ್ ಅಂಡ್ ಇನ್‌ಸ್ಟಿಟ್ಯೂಷನ್ಸ್* |
| **ಮ್ಯಾಗೋನ್** | : | *ಎ ಸಾರ್ಟ್ ಹಿಸ್ಟರಿ ಆಫ್ ಇಂಟರ್‌ನ್ಯಾಷನಲ್ ರಿಲೇಷನ್ಸ್* |
| **ಡಿ.ಎಸ್. ಚೀವರ್** | : | *ಆರ್ಗನೈಜಿಂಗ್ ಫಾರ್ ಪೀಶ* |

## 3.6 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

### ನಿಮ್ಮ ಪ್ರಗತಿ ಪರಿಶೀಲನೆ – 1

1. ನೋಡಿ ವಿಭಾಗ 3.2.1
2. ನೋಡಿ ವಿಭಾಗ 3.2.2

### ನಿಮ್ಮ ಪ್ರಗತಿ ಪರಿಶೀಲನೆ – 2

1. ನೋಡಿ ವಿಭಾಗ 3.2.3
2. ನೋಡಿ ವಿಭಾಗ 3.2.4

# ಘಟಕ – 4 : 20ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತದ ಪ್ರಮುಖ ಬೆಳವಣಿಗೆಗಳು

ರಚನೆ


4.0 ಉದ್ದೇಶಗಳು

4.1 ಪೀಠಿಕೆ

4.2 20ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತದ ಪ್ರಮುಖ ಬೆಳವಣಿಗೆಗಳು

- 4.2.1 ನ್ಯಾಯ ನಿರ್ಣಯಿಸುವ ಅಂತರರಾಷ್ಟ್ರೀಯ ಅಂಗಗಳು
- 4.2.2 ಸಾಮಾನ್ಯ ಅಂತರರಾಷ್ಟ್ರೀಯ ಸಂಘಟನೆಗಳು
- 4.2.3 ರಾಷ್ಟ್ರ ಸಂಘ (ಲೀಗ್ ಆಫ್ ನೇಷನ್ಸ್)
- 4.2.4 ಸಂಯುಕ್ತ ರಾಷ್ಟ್ರ ಸಂಘ (ವಿಶ್ವ ಸಂಸ್ಥೆ)
- 4.2.5 ವಿಶ್ವ ಸಂಸ್ಥೆಯ ನಂತರದ ಬೆಳವಣಿಗೆ

4.3 ಸಾರಾಂಶ

4.4 ಕಠಿಣ ಪದಗಳು

4.5 ಕೆಲವು ಉಪಯುಕ್ತ ಪುಸ್ತಕಗಳು

4.6 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 4.0 ಉದ್ದೇಶಗಳು

ಈ ಘಟಕದಲ್ಲಿ ಅಂತರರಾಷ್ಟ್ರೀಯ ವಿವಾದಗಳನ್ನು ತೀರ್ಮಾನಿಸುವ ನ್ಯಾಯ ನಿರ್ಣಯಿಸುವ ಅಂತರರಾಷ್ಟ್ರೀಯ ಅಂಗ ಸಂಸ್ಥೆಗಳು, ಸಾಮಾನ್ಯ ಅಂತರರಾಷ್ಟ್ರೀಯ ಸಂಘಟನೆಗಳು, ಲೀಗ್ ಆಫ್ ನೇಷನ್ಸ್, ವಿಶ್ವ ಸಂಸ್ಥೆಯ ನಂತರ ಬೆಳವಣಿಗೆಯಾದ ಅಂತರರಾಷ್ಟ್ರೀಯ ಅಂಗ ಸಂಸ್ಥೆಗಳು ಮುಂತಾದವುಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಈ ಘಟಕದ ಅಧ್ಯಯನದ ನಂತರ ನೀವು ಈ ಕೆಳಗಿನವುಗಳನ್ನು ಉತ್ತರಿಸಬಹುದು :

- 20ನೇ ಶತಮಾನದಲ್ಲಿ ಬೆಳವಣಿಗೆಯಾದ ನ್ಯಾಯ ನಿರ್ಣಯಿಸುವ ಅಂತರರಾಷ್ಟ್ರೀಯ ಸಂಘಟನೆಗಳನ್ನು ಚರ್ಚಿಸಿ.
- ಸಾಮಾನ್ಯ ಅಂತರರಾಷ್ಟ್ರೀಯ ಸಂಘಟನೆಗಳನ್ನು ವಿವರಿಸಿ.
- ಲೀಗ್ ಆಫ್ ನೇಷನ್ಸ್‌ನ ಬೆಳವಣಿಗೆ ಮತ್ತು ಉದ್ದೇಶಗಳನ್ನೂ ಪರಿಶೀಲಿಸಿ.
- ವಿಶ್ವ ಸಂಸ್ಥೆ ಮತ್ತು ವಿಶ್ವ ಸಂಸ್ಥೆಯ ನಂತರ ಆದ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಬೆಳವಣಿಗೆಯನ್ನು ತಿಳಿಸಿ.

## 4.1 ಪೀಠಿಕೆ

19ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಸ್ಥಾಪನೆಯಲ್ಲಿ ಮಾಡಿದ ಪ್ರಯತ್ನಗಳು (ಕನ್‌ಸರ್ಟ್ ಆಫ್ ಯುರೋಪ್, ಹೇಗ್ ಸಮ್ಮೇಳನಗಳು ಮತ್ತು ಸಾರ್ವಜನಿಕ ಅಂತರರಾಷ್ಟ್ರೀಯ ಸಂಘಗಳು) 20ನೇ ಶತಮಾನದಲ್ಲಿ ಲೀಗ್ ಆಫ್ ನೇಷನ್ಸ್, ವಿಶ್ವ ಸಂಸ್ಥೆ ಮುಂತಾದ ಸಂಘ ಸಂಸ್ಥೆಗಳನ್ನು ಸ್ಥಾಪಿಸಲು ಪೂರ್ವಭಾವಿ ತಯಾರಿಯನ್ನು ಮಾಡಿಕೊಟ್ಟವು. 20ನೇ ಶತಮಾನದ ಅಂತರರಾಷ್ಟ್ರೀಯ ಸಮ್ಮೇಳನಗಳು, ವಿಶೇಷ ಅಂಗ ಸಂಸ್ಥೆಗಳು ಮತ್ತು ಶಾಶ್ವತ ಸಿಬ್ಬಂದಿಯನ್ನು ಒಳಗೊಂಡ ಸಾಮಾನ್ಯ ಅಂತರರಾಷ್ಟ್ರೀಯ ವ್ಯವಸ್ಥೆಗೆ 19ನೇ ಶತಮಾನವು ಒಂದು ಸ್ಥೂಲ ರೂಪರೇಷೆಗಳನ್ನು ಒದಗಿಸಿದೆ. ಲೀಗ್ ಆಫ್ ನೇಷನ್ಸ್ ಮತ್ತು ವಿಶ್ವ ಸಂಸ್ಥೆಗಳನ್ನು 19ನೇ ಶತಮಾನದ ಅಂತರರಾಷ್ಟ್ರೀಯ ಸಮಾಲೋಚನೆ ಹಾಗೂ ಸಮ್ಮೇಳನಗಳ ಕಾರ್ಯವಿಧಾನ ಹಾಗೂ ಆಚರಣೆಗಳ ಅನುಭವದ ಆಧಾರದ ಮೇಲೆ ರಚಿಸಲಾಗಿದೆ. ಈ ಒಂದು ಪೀಠಿಕೆಯೊಂದಿಗೆ ಮುಂದಿನ ಭಾಗಗಳಲ್ಲಿ 20ನೇ ಶತಮಾನದ ಅಂತರರಾಷ್ಟ್ರೀಯ ಸಂಘಟನೆಗಳ ಬೆಳವಣಿಗೆಯನ್ನು ಪರಿಶೀಲಿಸೋಣ.

## 4.2 20ನೇ ಶತಮಾನದಲ್ಲಿ ಅಂತರರಾಷ್ಟ್ರೀಯ ಸಂಘಟನೆ ಮತ್ತು ಆಡಳಿತದ ಪ್ರಮುಖ ಬೆಳವಣಿಗೆಗಳು

ಸುಮಾರು 100 ವರ್ಷಗಳಲ್ಲಿ ಮೂರು ವಿಧದ ಅಂತರರಾಷ್ಟ್ರೀಯ ಸಂಘಟನೆಗಳು ಬೆಳವಣಿಗೆಯಾಗಿವೆ. ಮೊದಲನೆಯದಾಗಿ, ಅಂತರರಾಷ್ಟ್ರೀಯ ಸಾರಿಗೆ ಸಂಪರ್ಕ ಮುಂತಾದ ವಿಶೇಷ ತಾಂತ್ರಿಕ ಕಾರ್ಯಗಳ ನಿರ್ವಹಣೆಗೆ ಆಡಳಿತಾತ್ಮಕ ಅಂಗ ಸಂಸ್ಥೆಗಳ ಸ್ಥಾಪನೆ. ಎರಡನೆಯದಾಗಿ ಅಂತರರಾಷ್ಟ್ರೀಯ ವಿವಾದಗಳನ್ನು ತೀರ್ಮಾನಿಸಲು ಬೇಕಾದ ಸಾಧನೋಪಾಯಗಳ ಏರ್ಪಾಡು. ಮೂರನೆಯದಾಗಿ, ಪ್ರಾದೇಶಿಕ ಅಥವಾ ಜಾಗತಿಕ ಆಧಾರಿತ ಸಾಮೂಹಿಕ ಭದ್ರತೆ ಒದಗಿಸಲು ಅಥವಾ ಸಹಕಾರಯುತ ಕಾರ್ಯಗಳ ಬಲವರ್ಧನೆಗೆ ಸಾಮಾನ್ಯ ಅಂತರರಾಷ್ಟ್ರೀಯ ಸಂಘಟನೆಗಳ ಸ್ಥಾಪನೆ.

### 4.2.1 ನ್ಯಾಯ ನಿರ್ಣಯಿಸುವ ಅಂತರರಾಷ್ಟ್ರೀಯ ಅಂಗ ಸಂಸ್ಥೆಗಳು

ನ್ಯಾಯ ತೀರ್ಮಾನ ಹಾಗೂ ರಾಜಿ ಒಪ್ಪಂದದ ಕ್ಷೇತ್ರಗಳಲ್ಲಿ 1899 ಮತ್ತು 1907ರ ಹೇಗ್ ಸಮ್ಮೇಳನಗಳೂ, ರಾಷ್ಟ್ರಗಳ ನಡುವಿನ ವಿವಾದಗಳ ಇತ್ಯರ್ಥಕ್ಕೆ ಒಂದು ನಿರ್ದಿಷ್ಟ ಕಾರ್ಯವಿಧಾನದ ಸ್ಥಾಪನೆಗೆ ಮೇಲ್ಪಂಕ್ತಿ ಹಾಕಿಕೊಟ್ಟವು. ನ್ಯಾಯ ಪಂಚಾಯಿತಿಗಾಗಿ ಒಂದು ಶಾಶ್ವತ ನ್ಯಾಯಾಲಯವನ್ನು ಸಹ ಸ್ಥಾಪಿಸಲಾಯಿತು. ಅಮೇರಿಕಾದ ರಾಜ್ಯಗಳು ತಮ್ಮ ಎಲ್ಲಾ ವಿವಾದಗಳ ಇತ್ಯರ್ಥಕ್ಕಾಗಿ ಒಪ್ಪಿಸಲು ಒಂದು ಶಾಶ್ವತ ವಿಚಾರಣಾ ಆಯೋಗವೊಂದನ್ನು 1913ರ ಬ್ರೈಯಾನ್ ಒಪ್ಪಂದ ಮೂಲಕ ಸ್ಥಾಪಿಸಲಾಯಿತು.

ಮೊದಲನೆಯ ಮಹಾಯುದ್ಧದ ನಂತರ ಸ್ಥಾಪಿಸಲ್ಪಟ್ಟ ಲೀಗ್ ಆಫ್ ನೇಷನ್ಸ್‌ನ ಒಂದು ಅಂಗವಾಗಿ ಶಾಶ್ವತ ಅಂತರರಾಷ್ಟ್ರೀಯ ನ್ಯಾಯಾಲಯವನ್ನು ಸ್ಥಾಪಿಸಲಾಯಿತು. 1922 ರಿಂದ 1945ರವರೆಗೆ ಈ ಜಾಗತಿಕ ನ್ಯಾಯಾಲಯವು ಲೀಗಿನ ಅಂಗ ಸಂಸ್ಥೆಯಾಗಿ ಸಾಮಾನ್ಯವಾಗಿ ಬೇರೆ ಬೇರೆ ದೇಶಗಳಿಂದ ಆಯ್ಕೆ ಮಾಡಲಾಗುತ್ತಿತ್ತು. ಹೀಗಾಗಿ, ಈ ಜಾಗತಿಕ ನ್ಯಾಯಾಲಯವು ನಿಜವಾಗಿಯೂ ಅಂತರರಾಷ್ಟ್ರೀಯ ನ್ಯಾಯಾಲಯವಾಗಿತ್ತು. ಲೀಗಿನ ಸದಸ್ಯರಾಷ್ಟ್ರಗಳು ತಮ್ಮ ವಿವಾದಗಳನ್ನು ಈ ಜಾಗತಿಕ ನ್ಯಾಯಾಲಯಕ್ಕೆ ತೀರ್ಮಾನಕ್ಕಾಗಿ ಒಪ್ಪಿಸಬಹುದಾಗಿತ್ತು. ಅಂತಹ ವಿವಾದಗಳನ್ನು ಜಾಗತಿಕ ನ್ಯಾಯಾಲಯ ವಿಚಾರಣೆ ನಡೆಸಿ ತೀರ್ಪು ಕೊಡುತ್ತಿತ್ತು. ಅಂತರರಾಷ್ಟ್ರೀಯ ಒಪ್ಪಂದಗಳಲ್ಲಿದ್ದ ನ್ಯಾಯ ಸಂಬಂಧವಾದ ವಿಷಯಗಳೂ ಸಹ ಜಾಗತಿಕ ನ್ಯಾಯಾಲಯದ ಕಾರ್ಯ ಕ್ಷೇತ್ರದಲ್ಲಿ ಬರುತ್ತಿದ್ದವು. ಈ ನ್ಯಾಯಾಲಯವು ಸದಸ್ಯ ರಾಷ್ಟ್ರಗಳು ಸಲ್ಲಿಸುವ ವಿವಾದಗಳನ್ನು ಇತ್ಯರ್ಥಪಡಿಸುವುದ ಜೊತೆಗೆ ಲೀಗಿನ ಅಸೆಂಬ್ಲಿಗೆ ಸಲಹೆ ನೀಡುವ ಅಧಿಕಾರವನ್ನು ಹೊಂದಿತ್ತು. ಲೀಗ್ ಆಫ್ ನೇಷನ್ಸ್ ತನ್ನ ಜೀವಿತಾವಧಿಯಲ್ಲಿ ಒಟ್ಟು 65 ವಿವಾದಗಳನ್ನು ಪರಿಶೀಲಿಸಿದೆ. ಅವುಗಳಲ್ಲಿ 32 ವಿವಾದಗಳಲ್ಲಿ ತನ್ನ ತೀರ್ಪನ್ನು ನೀಡಿದೆ ಮತ್ತು 27 ಸಲಹೆಗಳನ್ನು ನೀಡಿದೆ; ಹಾಗೂ ನೂರಾರು ಆದೇಶಗಳನ್ನು ಹೊರಡಿಸಿದೆ. ಹೀಗೆ ಜಾಗತಿಕ ನ್ಯಾಯಾಲಯವು ರಾಷ್ಟ್ರಗಳ ಮಧ್ಯೆ ವಿವಾದಗಳನ್ನೂ ತೀರ್ಮಾನಿಸಲು ಬಹು ಮುಖ್ಯವಾದ ನ್ಯಾಯಾಲಯವಾಗಿದ್ದಿತು.

1946ರಲ್ಲಿ ವಿಶ್ವ ಸಂಸ್ಥೆಯ ಒಂದು ಪ್ರಧಾನ ಅಂಗವಾದ ಅಂತರರಾಷ್ಟ್ರೀಯ ನ್ಯಾಯಾಲಯವು ಲೀಗಿನ ಶಾಶ್ವತ ಅಂತರರಾಷ್ಟ್ರೀಯ ನ್ಯಾಯಾಲಯದ ಉತ್ತರಾಧಿಕಾರಿಯಾಗಿ ಅಸ್ತಿತ್ವಕ್ಕೆ ಬಂದಿದೆ. ರಾಷ್ಟ್ರಗಳ ನಡುವಿನ ವಿವಾದಗಳನ್ನು ಅಂತರರಾಷ್ಟ್ರೀಯ ಕಾನೂನಿನ ತಳಹದಿಯ ಮೇಲೆ ಬಗೆಹರಿಸುವುದೇ ಈ ನ್ಯಾಯಾಲಯದ ಉದ್ದೇಶವಾಗಿದೆ.

### 4.2.2 ಸಾಮಾನ್ಯ ಅಂತರರಾಷ್ಟ್ರೀಯ ಸಂಘಟನೆಗಳು

ಪ್ರಪಂಚದ ಮೊದಲನೆಯ ಮಹಾಯುದ್ಧದ ಮೊದಲು ಜಗತ್ತಿನಲ್ಲಿ ಕೆಲವು ಸಣ್ಣ ಪುಟ್ಟ ಪ್ರಾದೇಶಿಕ ಮೈತ್ರಿಕೂಟಗಳು ಅಸ್ತಿತ್ವದಲ್ಲಿದ್ದವು. ಅವುಗಳಲ್ಲಿ ಝೋಲ್‌ವೇರೀನ್ (Zollverein) ಎಂಬ ಜರ್ಮನ್ ಮೈತ್ರಿಕೂಟವೂ ಒಂದಾಗಿತ್ತು. ಝೋಲ್‌ವೇರೀನ್ ಎಂಬ ಜರ್ಮನ್ ಪ್ರಾದೇಶಿಕ ಮಿತ್ರತ್ವವು ಅಂತಿಮವಾಗಿ ಜರ್ಮನ್ ಏಕೀಕರಣವನ್ನು ಸಾಧಿಸಿತು. ಸ್ವಿಜರ್ಲೆಂಡ್, ಆಸ್ಟ್ರಿಯಾ-ಹಂಗರಿ ಮತ್ತು ಇಟಲಿಗಳಲ್ಲಿ ಆರ್ಥಿಕ ಸಹಕಾರಕ್ಕಾಗಿ ಪ್ರಾದೇಶಿಕ ಸಂಘಟನೆಗಳೂ ಸಹ ಆ ಕಾಲದಲ್ಲಿದ್ದವು.

ಎರಡು ಜಾಗತಿಕ ಯುದ್ಧಗಳ ಮಧ್ಯಂತರದಲ್ಲಿ ಅನೇಕ ಪ್ರಾದೇಶಿಕ ಮೈತ್ರಿಕೂಟಗಳು ಗಣನೀಯ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬಂದಿದ್ದವು. ಈ ಅವಧಿಯಲ್ಲಿ 'ಲಿಟಲ್ ಎಂಟೆಂಟೆ' (Little Entente) ಎಂಬ ಪ್ರಾದೇಶಿಕ ಸಂಘದಲ್ಲಿ ಝೆಕೋಸ್ಲಾವಾಕಿಯಾ, ಯುಗೋಸ್ಲಾವಿಯಾ ಮತ್ತು ರುಮೇನಿಯಾಗಳು ಸೇರಿಕೊಂಡವು. 1934ರಲ್ಲಿ ಬಾಲ್ಕನ್ ಎಂಟೆಂಟೆ ಎಂಬ ಬಾಲ್ಕನ್ ರಾಷ್ಟ್ರಗಳನ್ನೊಳಗೊಂಡ ಪ್ರಾದೇಶಿಕ ಮೈತ್ರಿತ್ವವು ಜಾರಿಯಲ್ಲಿದ್ದಿತು. ಇದೇ ರೀತಿಯ ಇನ್ನೂ ಕೆಲವು ಸಣ್ಣ ಪುಟ್ಟ ಪ್ರಾದೇಶಿಕ ಸಂಘಟನೆಗಳು ಜಾರಿಯಲ್ಲಿದ್ದವು. 1936ರಲ್ಲಿ ಶಾಂತಿ ಸ್ಥಾಪನೆಗಾಗಿ ಬ್ಯೂನೋಸ್ ಏರ್ಸ್ ಸಮ್ಮೇಳನವು (Buenos Aires Conference) ಅಸ್ತಿತ್ವಕ್ಕೆ ಬಂದಿತು.

ದ್ವಿತೀಯ ಮಹಾಯುದ್ಧದ ನಂತರ ಹಲವಾರು ಅಂತರರಾಷ್ಟ್ರೀಯ ಪ್ರಾದೇಶಿಕ ಸಂಘಟನೆಗಳು ಸ್ಥಾಪನೆಯಾದವು. ಅವುಗಳಲ್ಲಿ ಪ್ರಮುಖವಾದವುಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ರೈಯೋ ಒಪ್ಪಂದ (1946) – ಈ ಒಪ್ಪಂದವನ್ನು 1946ರಲ್ಲಿ ಬ್ರೆಜಿಲ್‌ನ ರೈಯೋ ಡಿ ಜನಿರೋ ಎಂಬಲ್ಲಿ ಮಾಡಿಕೊಳ್ಳಲಾಯಿತು. ಈ ಒಪ್ಪಂದವನ್ನು ಉತ್ತರ ಮತ್ತು ದಕ್ಷಿಣ ಅಮೆರಿಕದಲ್ಲಿರುವ ರಾಷ್ಟ್ರಗಳು ತಮ್ಮ ಸಾಮೂಹಿಕ ಭದ್ರತೆಗಾಗಿ ಒಪ್ಪಂದವಾಗಿದೆ. ಈ ಒಪ್ಪಂದವನ್ನು "ಅಂತರ-ಅಮೆರಿಕನ್ ಪರಸ್ಪರ ಸಹಾಯಕ ಒಪ್ಪಂದ" ಎಂದು (Inter-American Treaty of Reciprocal Assistance) ಕರೆಯುವರು. ಈ ಒಪ್ಪಂದದಲ್ಲಿ ಕೆನಡಾ, ಇಕ್ವೆಡಾರ್ ಮತ್ತು ನೈಕರ್ಗ ದೇಶಗಳನ್ನು ಹೊರತುಪಡಿಸಿ ಪಶ್ಚಿಮ ಗೋಲಾರ್ಧದಲ್ಲಿನ ಎಲ್ಲಾ ರಾಷ್ಟ್ರಗಳು ಸೇರಿವೆ. ಈ ಒಪ್ಪಂದದ ಪ್ರಕಾರ ಯಾವುದೇ ರಾಷ್ಟ್ರವು ರೈಯೋ ಒಪ್ಪಂದದಲ್ಲಿ ಭಾಗಿಯಾಗಿರುವ ಯಾವುದೇ ಸದಸ್ಯ ರಾಷ್ಟ್ರದ ಮೇಲೆ ದಾಳಿ ಮಾಡಿದರೆ ಆ ದಾಳಿಯನ್ನು ಒಪ್ಪಂದದ ಎಲ್ಲಾ ಸದಸ್ಯ ರಾಷ್ಟ್ರಗಳ ಮೇಲಿನ ದಾಳಿಯನ್ನು ಪರಿಗಣಿಸಲಾಗುವುದು ಮತ್ತು ಆ ದಾಳಿಯನ್ನು ಎಲ್ಲಾ ಸದಸ್ಯ ರಾಷ್ಟ್ರಗಳು ಒಟ್ಟಾಗಿ ಎದುರಿಸುವವು.

ಆರ್ಥಿಕ, ಸಾಂಸ್ಕೃತಿಕ ಮತ್ತು ಭದ್ರತಾ ಸಮಸ್ಯೆಗಳ ಬಗ್ಗೆ ಅಮೆರಿಕನ್ ರಾಜ್ಯಗಳ ಮಧ್ಯೆ ಪರಸ್ಪರ ಸಹಯೋಗಕ್ಕಾಗಿ 1948ರಲ್ಲಿ ಬಗೋಟದಲ್ಲಿ 10ನೇ ಅಮೆರಿಕನ್ ರಾಜ್ಯಗಳ ಸಮ್ಮೇಳನ ನಡೆಯಿತು. ನಿಕಟವಾದ ಆರ್ಥಿಕ ಸಂಘಟನೆಯನ್ನು ಸಾಧಿಸುವುದರಲ್ಲಿ ನಿರ್ದಿಷ್ಟ ಹಾಗೂ ಸೀಮಿತ ಕ್ಷೇತ್ರಕ್ಕೆ ಅನ್ವಯಿಸುವಂತೆ 1952ರಲ್ಲಿ ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ, ಬೆಲ್ಜಿಯಮ್, ನೆದರ್‌ಲ್ಯಾಂಡ್ ಮತ್ತು ಲಕ್ಸಂಬರ್ಗ್ ಈ ಆರು ಯುರೋಪಿನ ರಾಷ್ಟ್ರಗಳು ಯುರೋಪಿನ ಕಲ್ಲಿದ್ದಲು ಮತ್ತು ಉಕ್ಕು ಸಮುದಾಯ (E.C.S.C) ವನ್ನು ರಚಿಸಿಕೊಂಡವು. ಇದರ ಮುಖ್ಯ ಉದ್ದೇಶ ಕಲ್ಲಿದ್ದಲು, ಉಕ್ಕು ಮತ್ತು ಕಬ್ಬಿಣ ಇವುಗಳಿಗಾಗಿ ಸಾಮಾನ್ಯ ಮೂರು ಕಟ್ಟೆಯನ್ನು ಹೊಂದುವುದಾಗಿತ್ತು.

ನಿಕಟ ಆರ್ಥಿಕ ಸಂಘಟನೆಯನ್ನು ಸಾಧಿಸುವಲ್ಲಿ ಯುರೋಪಿನ ಕಲ್ಲಿದ್ದಲು ಮತ್ತು ಸಮುದಾಯದ ಯಶಸ್ಸಿನಿಂದ ಪ್ರೇರಣೆಗೊಂಡ ಈ ಆರು ದೇಶಗಳು (ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ, ಬೆನೆಲಕ್ಸ್ ರಾಷ್ಟ್ರಗಳು) ಸೇರಿ ಯುರೋಪಿನ ಆರ್ಥಿಕ ಸಮುದಾಯದ (E.E.C) ಸ್ಥಾಪನೆಗಾಗಿ 1957ರಲ್ಲಿ ರೋಮ್ ಒಪ್ಪಂದವನ್ನು ಮಾಡಿಕೊಂಡವು. 1958ರ ಜನವರಿ 1ರಂದು ಯುರೋಪಿನ ಆರ್ಥಿಕ ಸಮುದಾಯ (ಸಾಮಾನ್ಯ ಮಾರುಕಟ್ಟೆ) ಅಸ್ತಿತ್ವಕ್ಕೆ ಬಂದಿತು. ಇದರ ಸಮುದಾಯ (ಸಾಮಾನ್ಯ ಮಾರುಕಟ್ಟೆ) ಅಸ್ತಿತ್ವಕ್ಕೆ ಬಂದಿತು. ಇದರ ಮುಖ್ಯ ಉದ್ದೇಶವೆಂದರೆ ನಿರಾತಂಕ ವ್ಯಾಪಾರ ವ್ಯವಸ್ಥೆಯನ್ನು ಅಳವಡಿಸಿಕೊಂಡು ಸಮುದಾಯದಲ್ಲಿ ವ್ಯಾಪಾರಾಭಿವೃದ್ಧಿಯನ್ನು ಸಾಧಿಸುವುದು. ಈ ಐರೋಪ್ಯ ಆರ್ಥಿಕ ಸಮುದಾಯದ ಉದ್ದೇಶಗಳಲ್ಲಿ ಪ್ರಧಾನವಾಗಿ ಎದ್ದು ಕಾಣುವ ಅಂಗಗಳೆಂದರೆ ಸದಸ್ಯ ರಾಷ್ಟ್ರಗಳ ನಡುವೆ ಬಂಡವಾಳ, ಶ್ರಮ ಹಾಗೂ ಸರಕುಗಳ ಮುಕ್ತ ಚಲನವಲನ ಮತ್ತು ಅವುಗಳು ಕೃಷಿ, ಸಾರಿಗೆ ಮತ್ತು ವ್ಯಾಪಾರಕ್ಕೆ ಸಂಬಂಧಿಸಿದಂತೆ ಸಾಮಾನ್ಯ ನೀತಿಯನ್ನು ರೂಪಿಸುವುದಾಗಿದೆ.

ದ್ವಿತೀಯ ಮಹಾಯುದ್ಧದ ನಂತರ ಯುರೋಪ್ ರಾಷ್ಟ್ರಗಳ ಪುನರ್ ನಿರ್ಮಾಣಕ್ಕಾಗಿ ಆರ್ಥಿಕ ಸಹಕಾರ ಯೋಜನೆ (1947) ಮತ್ತು ಸುರಕ್ಷೆಗಾಗಿ ನ್ಯಾಟೋ ಮತ್ತು ವಾರ್ಸಾ ಸೇನಾ ಕೂಟಗಳ ಉದಯ ಮುಂತಾದ ಅಂತರರಾಷ್ಟ್ರೀಯ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು.

**ನಿಮ್ಮ ಪ್ರಗತಿ ಪರಿಶೀಲನೆ – 1**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. 20ನೇ ಶತಮಾನದ ಪೂರ್ವಾರ್ಧದಲ್ಲಿ ಅಂತರರಾಷ್ಟ್ರೀಯ ಸಂಘಟನೆಗಳ ಬೆಳವಣಿಗೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಿ.**

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

### 4.2.3 ರಾಷ್ಟ್ರ ಸಂಘ (ಲೀಗ್ ಆಫ್ ನೇಷನ್ಸ್)

ವಿಶ್ವ ಶಾಂತಿ ರಕ್ಷಣೆಗಾಗಿ ಅಸ್ತಿತ್ವಕ್ಕೆ ಬಂದ ರಾಷ್ಟ್ರ ಸಂಘವು (ಲೀಗ್ ಆಫ್ ನೇಷನ್ಸ್) ಜಾಗತಿಕ ಸ್ವರೂಪದ ಪ್ರಥಮ ಅಂತರರಾಷ್ಟ್ರೀಯ ಸಂಸ್ಥೆಯಾಗಿದೆ. ಇದು ಪ್ರಥಮ ಜಾಗತಿಕ ಯುದ್ಧದ ನಂತರ 1920ರ ಜನವರಿ 10ರಂದು ಅಸ್ತಿತ್ವಕ್ಕೆ ಬಂದಿತು. ವಿಶ್ವಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು ಮತ್ತು ಅಂತರರಾಷ್ಟ್ರೀಯ ಸಹಕಾರವನ್ನು ವೃದ್ಧಿಸುವುದು ರಾಷ್ಟ್ರ ಸಂಘದ ಗುರಿಗಳಾಗಿದ್ದವು. ಅಲ್ಲದೆ, ರಾಷ್ಟ್ರ ಸಂಘವು ಜಾಗತಿಕ ವೇದಿಕೆಯಾಗಿ, ನಿರಂತರ ರಾಜತಾಂತ್ರಿಕ ಸಂಧಾನಗಳ

ಸಾಧನವಾಗಿ, ಅಂತರರಾಷ್ಟ್ರೀಯ ಸೇವಾ ಸಿಬ್ಬಂದಿಯಾಗಿ ಹಾಗೂ ಆರ್ಥಿಕ ಮತ್ತು ಸಾಮಾಜಿಕ ಸಹಯೋಗದ ಒಂದು ಅಂದ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ರಾಷ್ಟ್ರ ಸಂಘವು ಪ್ರಥಮತಃ ರಾಜಕೀಯ, ಭದ್ರತೆ ಮತ್ತು ಯುದ್ಧ ಹಾಗೂ ಶಾಂತಿ ಸಮಸ್ಯೆಗಳಿಗೆ ತನ್ನ ಗಮನಹರಿಸಿದ್ದರೂ, ಅದೊಂದು ಬಹುಮುಖೀಯ ಹುದ್ದೇ ಹೊಂದಿದ್ದ ಒಂದು ಜಾಗತಿಕ ಸಂಘಟನೆಯಾಗಿತ್ತು. 19ನೇ ಶತಮಾನದ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಯುರೋಪಿನ ಪ್ರಾಧಾನ್ಯತೆಯ ಸ್ವರೂಪವನ್ನು ಉಳಿಸಿಕೊಂಡಿದ್ದರೂ, ಲೀಗ್ ತತ್ವಶಃ ಒಂದು ಜಾಗತಿಕ ಸಂಸ್ಥೆಯಾಗಿದ್ದಿತು.

ಆರ್, 1930ರ ದಶಕದಲ್ಲಿ ಮತ್ತೆ ತಲೆ ಎತ್ತಿದ ಉಗ್ರರಾಷ್ಟ್ರೀಯತೆ ಹಾಗೂ ನಾಜಿ ಜರ್ಮನಿ ಮತ್ತು ಫಾಸಿಸ್ಟ್ ಇಟಲಿ ಹಾಗೂ ಜಪಾನ್‌ಗಳ ಆಕ್ರಮಣಕಾರಿ ಧೋರಣೆಗಳ ಎದುರಿಗೆ ಲೀಗ್ ಅಂತರರಾಷ್ಟ್ರೀಯ ಭದ್ರತೆಯ ರಕ್ಷಕನಾಗಿ ತನ್ನ ರಾಜಕೀಯ ಪಾತ್ರವನ್ನು ನಿರ್ವಹಿಸಲು ವಿಫಲವಾಯಿತು. ಒಟ್ಟಾರೆ, ಶಕ್ತ ರಾಷ್ಟ್ರಗಳ ಪ್ರಾಬಲ್ಯ, ಅಮೆರಿಕ ಮತ್ತು ಇತರ ಶಕ್ತ ರಾಷ್ಟ್ರಗಳು ರಾಷ್ಟ್ರ ಸಂಘದ ಸದಸ್ಯತ್ವವನ್ನು ಹೊಂದದೆ ಇದ್ದುದು, ರಾಷ್ಟ್ರ ಸಂಘವು ತನ್ನ ನಿರ್ಣಯಗಳನ್ನು ಜಾರಿಗೆ ತರಲು ದಂಡನಾಶಕ್ತಿ ಹೊಂದಿಲ್ಲದಿದ್ದುದು, ಜರ್ಮನಿ, ಇಟಲಿ, ಜಪಾನ್ ಅನುರಿಸಿದ ಉಗ್ರ ರಾಷ್ಟ್ರೀಯವಾದ ಮತ್ತು ಅವುಗಳ ವಿಸ್ತರಣಾ ಹಾಗೂ ಆಕ್ರಮಣಕಾರಿ ನೀತಿಗಳು ಇವೇ ಮುಂತಾದವುಗಳು ಲೀಗ್‌ನ ವೈಫಲ್ಯತೆಗೆ ಕಾರಣಗಳಾಗಿವೆ. ಆದರೂ, ದ್ವಿತೀಯ ಮಹಾಯುದ್ಧದ ನಂತರದ ಅಂತರರಾಷ್ಟ್ರೀಯ ಸಂಸ್ಥೆಗಳ ಸ್ಥಾಪನೆಗೆ ಲೀಗ್ ಆಫ್ ನೇಷನ್ಸ್ ಭದ್ರ ಗಳಪಾಯ ಹಾಕಿತು.

### 4.2.4 ಸಂಯುಕ್ತ ರಾಷ್ಟ್ರ ಸಂಘ (ವಿಶ್ವ ಸಂಸ್ಥೆ)

2ನೇ ಜಾಗತಿಕ ಯುದ್ಧದಿಂದ ಉಂಟಾದ ಭಯಂಕರ ಸಾವು ನೋವುಗಳಿಗೆ ಬೆಚ್ಚಿ ಬಿದ್ದ ಮಾನವನು ಮತ್ತೊಂದು ಮಹಾಯುದ್ಧದಿಂದ ಈ ಪೃಥ್ವಿಯನ್ನು ಪಾರು ಮಾಡಲು ಮತ್ತು ವಿಶ್ವ ಶಾಂತಿಗಾಗಿ ತೀವ್ರ ಪ್ರಯತ್ನಗಳು ನಡೆದವು. ಆ ಪ್ರಯತ್ನಗಳ ಪರಿಣಾಮವಾಗಿ 1945ರ ಅಕ್ಟೋಬರ್ 24ರಂದು ಸಂಯುಕ್ತ ರಾಷ್ಟ್ರ ಸಂಘ (ವಿಶ್ವ ಸಂಸ್ಥೆ – U.N.O) ಜನ್ಮ ತಾಳಿತು. ಹೀಗೆ ಅಂತರರಾಷ್ಟ್ರೀಯ ಶಾಂತಿ ಸೌಹಾರ್ದಕ್ಕಾಗಿ ಹುಟ್ಟಿದ ಈ ಸಂಸ್ಥೆಯು ಯುದ್ಧಗಳಿಗೆ ಮಂಗಳ ಹಾಡಿ, ವಿಶ್ವ ಶಾಂತಿ ಮತ್ತು ಭದ್ರತೆಯ ರಕ್ಷಣೆ, ಮಾನವ ಹಕ್ಕುಗಳಿಗೆ ಮನ್ನಣೆ, ಅಂತರರಾಷ್ಟ್ರೀಯ ಸಹಕಾರವನ್ನು ವೃದ್ಧಿಸುವುದು, ರಾಷ್ಟ್ರಗಳ ಸಾರ್ವಭೌಮತ್ವಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳುವುದು ಇವೇ ಮುಂತಾದ ಉದಾತ್ತಧ್ಯೇಯಗಳನ್ನು ಹೊಂದಿದೆ. ಪ್ರಪಂಚದಾದ್ಯಂತ ಇರುವ ಸಣ್ಣ, ದೊಡ್ಡ, ಶ್ರೀಮಂತ ಬಡ, ಶಕ್ತ ದುರ್ಬಲ–ಸದಸ್ಯ ರಾಷ್ಟ್ರಗಳು ಒಟ್ಟಿಗೆ ಕಲೆತು ತಮ್ಮ ಸಮಸ್ಯೆಗಳನ್ನು ಚರ್ಚಿಸುವುದಕ್ಕೆ ವಿಶ್ವ ಸಂಸ್ಥೆಯು ವೇದಿಕೆಯನ್ನು ಒದಗಿಸುತ್ತದೆ. ಇಡೀ ಜಗತ್ತಿನಲ್ಲಿ ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಲು ಇರುವ ಏಕಮೇವ ಸಂಸ್ಥೆಯೆಂದರೆ ವಿಶ್ವಸಂಸ್ಥೆಯೇ ಆಗಿದೆ. ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸಲು ಸಾಮೂಹಿಕ ಕಾರ್ಯಾಚರಣೆಗೆ ಅತ್ಯಂತ ವ್ಯಾಪಕವಾದ ಚೌಕಟ್ಟನ್ನು ವಿಶ್ವಸಂಸ್ಥೆ ಒದಗಿಸಿದೆ. ವಿಶ್ವಸಂಸ್ಥೆಯ ಮಾಜಿ ಮಹಾಕಾರ್ಯದರ್ಶಿ ದಿವಂಗತ ಡ್ಯಾಗ್ ಹ್ಯಾಮರ್ ಶೀಲ್ಡ್ ಅವರು ವಿಶ್ವ ಸಂಸ್ಥೆಯನ್ನು "ಸಹಬಾಳ್ವೆಗೆ ಒಂದು ಸಾಂಸ್ಥಿಕ ವ್ಯವಸ್ಥೆ" ("an institutional system for co-existence") ಎಂದು ಬಣ್ಣಿಸಿದ್ದಾರೆ.

### 4.2.5 ವಿಶ್ವಸಂಸ್ಥೆಯ ನಂತರದ ಬೆಳವಣಿಗೆ

ದ್ವಿತೀಯ ಯುದ್ಧಾ ನಂತರದ ಅವಧಿಯ ಅಂತರರಾಷ್ಟ್ರೀಯ ಸಂಘಟನಾ ವ್ಯವಸ್ಥೆಯು ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕ ಸಂಖ್ಯೆಯ ವಿಶೇಷ ಅಂಗ ಸಂಸ್ಥೆಗಳನ್ನು ಹೊಂದಿದೆ. ಅವುಗಳಲ್ಲಿ ಬಹುತೇಕ ಅಂಗ ಸಂಸ್ಥೆಗಳನ್ನು ಹೊಂದಿದೆ. ಅವುಗಳಲ್ಲಿ ಬಹುತೇಕ ಅಂಗ ಸಂಸ್ಥೆಗಳನ್ನು ಹೊಸದಾಗಿ ಸೃಷ್ಟಿಸಲಾಗಿದ್ದು ವಿಶ್ವಸಂಸ್ಥೆಯ ಪರಿಣಾಮಕತ್ವದ ಕಾರ್ಯನಿರ್ವಹಣೆಗೆ ಸಮನ್ವಯ ಕಾರ್ಯನಿರ್ವಹಿಸುತ್ತವೆ.

1945ರ ನಂತರ ಸೈನಿಕ, ರಾಜಕೀಯ ಅಥವಾ ಆರ್ಥಿಕ ಕಾರಣಗಳಿಂದಾಗಿ ರಾಷ್ಟ್ರಗಳು ಪ್ರಾದೇಶಿಕ ಸಂಘಟನೆಗಳಾಗಿ ಒಂದುಗೂಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ರಾಷ್ಟ್ರಗಳು ತಮ್ಮ ಹಿತರಕ್ಷಣೆಗಾಗಿ ಪ್ರಾದೇಶಿಕ ಗುಂಪುಗಳಾಗುತ್ತಿವೆ. "ರಾಜ್ಯ ಸಮುದಾಯಗಳು (Communities of States) ಭವಿಷತ್ತಿನಲ್ಲಿ ಅಂತರರಾಷ್ಟ್ರೀಯ ವ್ಯವಸ್ಥೆಯ ನಿಜವಾದ ಅಂಗ ಸದಸ್ಯರೆಂದು" ವಾಲ್ಟರ್ ಲಿಪ್‌ಮ್ಯಾನ್ ಹೇಳಿರುವುದು ಸಮಂಜಸವಾಗಿದೆ.

ವಿಶ್ವಸಂಸ್ಥೆಯ ವ್ಯಾಪ್ತಿಯ ಹೊರಗೆ ಒಟ್ಟಾರೆ ಅಂತರರಾಷ್ಟ್ರೀಯ ಸಂಸ್ಥೆಗಳ ಜಾಲವು 28 ಅಂತರ-ಸರ್ಕಾರೆ ಅಂಗಸಂಸ್ಥೆಗಳನ್ನು ಒಳಗೊಂಡಿದೆ. ಈ ಅಂಗಸಂಸ್ಥೆಗಳು ವಿವಿಧ ರೀತಿಯ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದು, ರಾಷ್ಟ್ರಗಳ ನಡುವಿನ ಸಂಬಂಧಗಳ ನಿರ್ವಹಣೆಗೆ ವಿವಿಧ ಬಗೆಯ ಕಾರ್ಯತಂತ್ರಗಳನ್ನು ಒದಗಿಸುತ್ತವೆ. ಇವುಗಳಿಗೆ ಪೂರಕವಾಗಿ ಸುಮಾರು 2700 ಸರ್ಕಾರೇತರ ಸಂಘಟನೆಗಳು ಅಂತರರಾಷ್ಟ್ರೀಯ ಸಮಾಲೋಚನೆ ಹಾಗೂ ವಿಶೇಷ ಕ್ಷೇತ್ರಗಳಲ್ಲಿ ಅನಧಿಕೃತವಾಗಿ ಕಾರ್ಯಚಟುವಟಿಕೆಗಳಿಗೆ ಉತ್ತೇಜನ ನೀಡುತ್ತವೆ.

ಮೇಲೆ ವಿವರಿಸಿದ ಅಂತರರಾಷ್ಟ್ರೀಯ ಸಂಘಟನೆಗಳಲ್ಲದೆ, ಇನ್ನೂ ಅನೇಕ ಪ್ರಾದೇಶಿಕ ಸಂಘ ಸಂಸ್ಥೆಗಳು ದ್ವಿತೀಯ ಯುದ್ಧದ ನಂತರ ಅಸ್ತಿತ್ವಕ್ಕೆ ಬಂದಿವೆ. 2ನೇ ಮಹಾಯುದ್ಧದ ನಂತರ ಅಮೇರಿಕಾ ಮತ್ತು ರಷ್ಯಾ ಬಣಗಳ ಮಧ್ಯೆ ಉಂಟಾದ ಶೀತಲ ಯುದ್ಧದ ಪರಿಣಾಮವಾಗಿ ಹಲವಾರು ಪ್ರಾದೇಶಿಕ ಗುಂಪುಗಳು ವಿಶ್ವದ ನಾನಾಕಡೆಗಳಲ್ಲಿ ಅಸ್ತಿತ್ವಕ್ಕೆ ಬಂದವು. ಯುರೋಪ್ ವಿಭಜನೆಯಾಗಿ, ಪಶ್ಚಿಮ ಮತ್ತು ಪೂರ್ವ ಯುರೋಪ್‌ಗಳೆಂಬ ಉಪವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು. ಪಶ್ಚಿಮ ಗೋಲಾರ್ಧದಲ್ಲಿ (Western Hemisphere) ಅನೇಕ ಪ್ರಾದೇಶಿಕ ಸಂಘಟನೆಗಳು ಅಸ್ತಿತ್ವಕ್ಕೆ ಬಂದಿವೆ. ಉದಾ. ಪಶ್ಚಿಮ ಯುರೋಪ್ ಒಂದು ಪ್ರಾದೇಶಿಕ ವ್ಯವಸ್ಥೆಯಾಗಿದೆ. ಬೆನೆಲಕ್ಸ್ (BENELUX) ಒಕ್ಕೂಟ; ಯುರೋಪಿನ ಆರ್ಥಿಕ ಸಹಕಾರ ಸಂಸ್ಥೆ; ಮುಂತಾದವುಗಳು. ಇವುಗಳಲ್ಲದೆ ನ್ಯಾಟೋ (NATO): ಬ್ರಸೆಲ್ಸ್ ಮೈತ್ರಿಕೂಟ; ಪಶ್ಚಿಮ ಯುರೋಪಿನ ಒಕ್ಕೂಟ (Western European Union); ಅಮೇರಿಕಾ ರಾಜ್ಯಗಳ ಸಂಘಟನೆ (Organisation of American States) ಇತ್ಯಾದಿ.

ಹಾಗೆಯೇ ಪೂರ್ವ ಯುರೋಪಿನ ಭಾಗದಲ್ಲಿ ರಷ್ಯಾದ ಪ್ರಭಾವ ವಲಯದಲ್ಲಿ ಅನೇಕ ಪ್ರಾದೇಶಿಕ ವ್ಯವಸ್ಥೆಗಳನ್ನು ಕಾಣಬಹುದು. ಉದಾ. : ಕಮ್ಯುನಿಸ್ಟ್ ಸಮಾಚಾರ ಕಛೇರಿ (COMINFORM - Dommunist Information Bureau); ಪರಸ್ಪರ ಆರ್ಥಿಕ ಸಹಾಯ ಸಮಿತಿ (COMECON); ವಾರ್ಸಾ ಒಪ್ಪಂದ ಮುಂತಾದವುಗಳು. ಇವುಗಳಲ್ಲದೆ ಅಮೆರಿಕ ಮತ್ತು ರಷ್ಯಾ ಗುಂಪಿಗೆ ಸೇರದೇ ಇರುವ ಕೆಲವು ಪ್ರಾದೇಶಿಕ ವ್ಯವಸ್ಥೆಗಳು ಅಸ್ತಿತ್ವದಲ್ಲಿರುವುದನ್ನು ಕಾಣಬಹುದು. ಅವುಗಳೆಂದರೆ, ಅರಬ್ ಲೀಗ್, ಆಫ್ರಿಕನ್ ಐಕ್ಯತೆ ಒಕ್ಕೂಟ (Organisation of African Unity); ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘ (Association of South - East Asian Nations); ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಸ್ಥೆ (SAARC) ಇತ್ಯಾದಿ.

(ಸೂಚನೆ : ಪ್ರಾದೇಶಿಕ ಸಂಘಟನೆ ಹಾಗೂ ಅಂತರರಾಷ್ಟ್ರೀಯ ಒಪ್ಪಂದಗಳ ಬಗ್ಗೆ ಹೆಚ್ಚಿನ ವಿವರಣೆಯನ್ನು ನಾಲ್ಕನೇ ಬ್ಲಾಕ್‌ನಲ್ಲಿ ಕೊಡಲಾಗಿದೆ).

**ನಿಮ್ಮ ಪ್ರಗತಿ ಪರಿಶೀಲನೆ - 2**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ಲೀಗ್ ಆಫ್‌ನೇಷನ್ಸ್ ನಂತರ ಸಾಮಾನ್ಯ ಅಂತರರಾಷ್ಟ್ರೀಯ ಸಂಘಟನೆಗಳ ಬೆಳವಣಿಗೆಯನ್ನು ಕುರಿತು ಚರ್ಚಿಸಿ.**

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

**2. ವಿಶ್ವಸಂಸ್ಥೆಯ ಸ್ಥಾಪನೆಯ ನಂತರ ಅಸ್ತಿತ್ವಕ್ಕೆ ಬಂದ ಅಂತರರಾಷ್ಟ್ರೀಯ ಸಂಘಟನೆಗಳ ಬಗ್ಗೆ ತಿಳಿಸಿರಿ.**

## 4.3 ಸಾರಾಂಶ

ಈ ಘಟಕದಲ್ಲಿ 20ನೇ ಶತಮಾನದಲ್ಲಿ ಬೆಳವಣಿಗೆಯಾದ ಮೂರು ವಿವಿಧ ಅಂತರರಾಷ್ಟ್ರೀಯ ಸಂಘಟನೆಗಳನ್ನು ಕುರಿತು ಚರ್ಚಿಸಲಾಗಿದೆ. ಮೊದಲನೆಯದಾಗಿ, ಅಂತರರಾಷ್ಟ್ರೀಯ ಸಾರಿಗೆ ಸಂಪರ್ಕ ಮುಂತಾದ ವಿಶೇಷ ತಾಂತ್ರಿಕ ಕಾರ್ಯಗಳ ನಿರ್ವಹಣೆಗೆ ಆಡಳಿತಾತ್ಮಕ ಅಂಗಸಂಸ್ಥೆಗಳ ಸ್ಥಾಪನೆ. ಉದಾಹರಣೆಗೆ ಅಂತರರಾಷ್ಟ್ರೀಯ ಕಾರ್ಮಿಕರ ಸಂಘ (1919).

ಎರಡನೆಯದಾಗಿ, ಅಂತರರಾಷ್ಟ್ರೀಯ ವಿವಾದಗಳನ್ನು ತೀರ್ಮಾನಿಸಲು ಅಗತ್ಯವಾದ ಸಾಧನೋಪಾಯಗಳ ಏರ್ಪಾಡು. ಉದಾ. : ಖಾಯಂ ಅಂತರರಾಷ್ಟ್ರೀಯ ನ್ಯಾಯಾಲಯ.

ಮೂರನೆಯದಾಗಿ, ಪ್ರಾದೇಶಿಕ ಅಥವಾ ಜಾಗತಿಕ ಮಟ್ಟದಲ್ಲಿ ಸಾಮೂಹಿಕ ಭದ್ರತೆಯನ್ನು ಒದಗಿಸಲು ಸಾಮಾನ್ಯ ಅಂತರರಾಷ್ಟ್ರೀಯ ಸಂಘಟನೆಗಳ ಸ್ಥಾಪನೆ. ಉದಾ. : 1946ರ ರೈಯೋ ಒಪ್ಪಂದ, ಯುರೋಪಿನ ಕಲ್ಲಿದ್ದಲು ಮತ್ತು ಉಕ್ಕು ಸಮುದಾಯ, ಲೀಗ್ ಆಫ್ ನೇಷನ್ಸ್, ವಿಶ್ವಸಂಸ್ಥೆ ಇತ್ಯಾದಿ.

## 4.4 ಕಠಿಣ ಪದಗಳು

ಖಂಡ – ಅನೇಕ ದೇಶಗಳನ್ನೊಳಗೊಂಡ ದೊಡ್ಡ ಭೂಭಾಗ.

ರಾಜಿ – ಒಪ್ಪಂದ, ಒಪ್ಪಿಗೆ.

ಸಾಮಾನ್ಯ ಮೂರುಕಟ್ಟೆ – ರಾಷ್ಟ್ರಗಳ ನಡುವೆ ಬಂಡವಾಳ, ವಸ್ತುಗಳು ಮತ್ತು ಸೇವೆಗಳ ಚಲನವಲನಗಳಿಗೆ ಮುಕ್ತ ಅವಕಾಶ ಕಲ್ಪಿಸುವ ಒಂದು ವಿಧವಾದ ಅಂತರರಾಜ್ಯಗಳ ಒಂದು ಸಂಘಟನೆ.

## 4.5 ಕೆಲವು ಉಪಯುಕ್ತ ಪುಸ್ತಕಗಳು

**ಪ್ರೊ. ಎನ್. ಹಾಲಪ್ಪ** : *ಅಂತರರಾಷ್ಟ್ರೀಯ ಸಂಬಂಧಗಳು*

**ಡಾ. ಟಿ.ಡಿ. ದೇವೇಗೌಡ** : *ಅಂತರರಾಷ್ಟ್ರೀಯ ಸಂಬಂಧಗಳು*

**ಪಾಮರ್ ಮತ್ತು ಪರ್ಕಿನ್ಸ್** : *ಇಂಟರ್‌ನ್ಯಾಷನಲ್ ರಿಲೇಷನ್ಸ್*

**ಪ್ರೇಮ್ ಅರೋರ** : *ದಿ ಯುನೈಟೆಡ್ ನೇಷನ್ಸ್*

**ಎಲ್. ಲ್ಯಾರಿ ಲಿಯೊನಾರ್ಡ್** : *ಇಂಟರ್‌ನ್ಯಾಷನಲ್ ಆರ್ಗನೈಜೇಷನ್ಸ್*

| | | |
|---|---|---|
| ಹ್ಯಾನ್ಸ್ ಮಾಗೆಂಥ್ಯೂ | : | ಪಾಲಿಟಿಕ್ಸ್ ಅಮಾಂಗ್ ನೇಷನ್ಸ್ |
| ಬಿ.ಎನ್. ಮೆಹ್ರಿಷ್ | : | ಇಂಟರ್‌ನ್ಯಾಷನಲ್ ಆರ್ಗನೈಜೇಷನ್ಸ್ |
| ಬಿಲ್‌ಗ್ರಾಮಿ | : | ಇಂಟರ್‌ನ್ಯಾಷನಲ್ ಆರ್ಗನೈಜೇಷನ್ಸ್ |

## 4.6 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರ

### ನಿಮ್ಮ ಪ್ರಗತಿ ಪರಿಶೀಲನೆ – 1

1. ನೋಡಿ ವಿಭಾಗ 4.2, 4.2.1 ಮತ್ತು 4.2.2

### ನಿಮ್ಮ ಪ್ರಗತಿ ಪರಿಶೀಲನೆ – 2

1. ನೋಡಿ ವಿಭಾಗ 4.2.3 ಮತ್ತು 4.2.4
2. ನೋಡಿ ವಿಭಾಗ 4.2.5

# ಘಟಕ – 5 : ರಾಷ್ಟ್ರ ಸಂಘದ ಮೂಲ, ಬೆಳವಣಿಗೆ ಮತ್ತು ಉದ್ದೇಶಗಳು

**ರಚನೆ**


5.0 ಉದ್ದೇಶಗಳು

5.1 ಪೀಠಿಕೆ

5.2 ರಾಷ್ಟ್ರ ಸಂಘದ ಮೂಲ ಮತ್ತು ಬೆಳವಣಿಗೆ

5.3 ರಾಷ್ಟ್ರ ಸಂಘದ ಉದ್ದೇಶಗಳು

5.4 ಸಾರಾಂಶ

5.5 ಕಠಿಣ ಪದಗಳು

5.6 ಕೆಲವು ಉಪಯುಕ್ತ ಪುಸ್ತಕಗಳು

5.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 5.0 ಉದ್ದೇಶಗಳು

ರಾಷ್ಟ್ರ ಸಂಘದ (ಲೀಗ್ ಆಫ್ ನೇಷನ್ಸ್) ಮೂಲ, ಬೆಳವಣಿಗೆ ಮತ್ತು ಉದ್ದೇಶಗಳನ್ನು ನಿಮಗೆ ವಿವರಿಸುವುದೇ ಈ ಘಟಕದ ಉದ್ದೇಶವಾಗಿದೆ. ಈ ಘಟಕದ ಅಧ್ಯಯನದ ನಂತರ ನೀವು ಈ ಕೆಳಗಿನವುಗಳಿಗೆ ಉತ್ತರಿಸಬಲ್ಲಿರಿ.

- ರಾಷ್ಟ್ರ ಸಂಘದ ಮೂಲ ಹಾಗೂ ಬೆಳವಣಿಗೆಯನ್ನು ವಿವರಿಸಿ.
- ರಾಷ್ಟ್ರ ಸಂಘದ ಧ್ಯೇಯೋದ್ದೇಶಗಳನ್ನು ಚರ್ಚಿಸಿ.

## 5.1 ಪೀಠಿಕೆ

ಪ್ರಥಮ ಜಾಗತಿಕ ಯುದ್ಧದ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದ ರಾಷ್ಟ್ರ ಸಂಘವು ಅಂತರರಾಷ್ಟ್ರೀಯ ಸಂಘಟನೆಗಳಲ್ಲಿ ಒಂದು ಸಮಗ್ರ ಸ್ವರೂಪದ ಅಂತರರಾಷ್ಟ್ರೀಯ ಸಂಘಟನೆಗಳಲ್ಲಿ ಒಂದು ಸಮಗ್ರ ಸ್ವರೂಪದ ಅಂತರರಾಷ್ಟ್ರೀಯ ಸಂಸ್ಥೆಯಾಗಿದೆ. ಅಂತರರಾಷ್ಟ್ರೀಯ ವಿವಾದಗಳ ಪರಿಹಾರಕ್ಕೆ ಯುದ್ಧವೊಂದೇ ಪರಿಣಾಮಕಾರಿಯಾದ ವಿಧಾನವಲ್ಲ ಎಂಬುದು ಪ್ರಥಮ ಜಾಗತಿಕ ಯುದ್ಧದ ವಿಷಣ್ಣತೆಯಿಂದ/ಭೀತಿಯಿಂದ ವಿಶ್ವದ ಜನತೆಗೆ ಮನದಟ್ಟಾಯಿತು. ಯುದ್ಧದಿಂದ ಜಯಶಾಲಿಯಾದವರಿಗಾಗಲಿ ಅಥವಾ ಸೋತವರಿಗಾಗಲಿ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ತಿಳಿಯಲಾಯಿತು. ಆದುದರಿಂದ ಯುದ್ಧದಿಂದ ಬಳಲಿದ ವಿಶ್ವದ ಜನತೆಗೆ ಯುದ್ಧದ ಪುನರಾವೃತ್ತಿಯನ್ನು ತಡೆಗಟ್ಟಿ, ವಿಶ್ವಶಾಂತಿ ಹಾಗೂ ಭದ್ರತೆಯ ಭರವಸೆ ನೀಡಬಲ್ಲ ಒಂದು ಬಲಿಷ್ಠವಾದ ಅಂತರರಾಷ್ಟ್ರೀಯ ಸಂಘಟನೆಯ ಅಥವಾ ಸಂಸ್ಥೆಯ ಅವಶ್ಯಕತೆವುಂಟಾಯಿತು. ಇದರ ಫಲವೇ ರಾಷ್ಟ್ರ ಸಂಘದ ಉದಯ. ರಾಷ್ಟ್ರ ಸಂಘವು ಪ್ರಪ್ರಥಮವಾಗಿ ಎಲ್ಲಾ ಅಂಶಗಳನ್ನೊಳಗೊಂಡ ಒಂದು ವ್ಯಾಪಕ ಹಾಗೂ ಸಮಗ್ರ ಸ್ವರೂಪದ ಒಕ್ಕೂಟ ವ್ಯವಸ್ಥೆಗೆ ಒಂದು ಚೌಕಟ್ಟನ್ನು ಒದಗಿಸಿತು.

## 5.2 ರಾಷ್ಟ್ರ ಸಂಘದ ಮೂಲ ಮತ್ತು ಬೆಳವಣಿಗೆ

ರಾಷ್ಟ್ರ ಸಂಘವು ಪ್ರಥಮ ಜಾಗತಿಕ ಯುದ್ಧದ ನಂತರವೇ ಹುಟ್ಟಿತ್ತು ಎಂಬ ಸಾಮಾನ್ಯ ಭಾವನೆಯಿದೆ. ಮೊದಲ ಮಹಾಯುದ್ಧದಿಂದಾದ ಅಪಾರ ಹಾನಿ ಹಾಗೂ ರಕ್ತಪಾತವು ಯುದ್ಧವು ಮುಂದೆ ಮತ್ತೆ ಮರುಕಳಿಸದಂತೆ ತಡೆಯಲು ರಾಷ್ಟ್ರ ಸಂಘ ಸ್ಥಾಪನೆಯಾಯಿತು. ಆದರೆ ರಾಷ್ಟ್ರ ಸಂಘದ ಮೂಲವನ್ನು 19ನೇ ಶತಮಾನದಲ್ಲಿ ನಡೆದ ವಿಯೆನ್ನಾ ಕಾಂಗ್ರೆಸ್ (1814–15); ಪವಿತ್ರ ಮೈತ್ರಿಕೂಟ (1815); ಯುರೋಪ್ ರಾಷ್ಟ್ರಗಳ ಕೂಟ (1815–22); ಯುರೋಪಿನ ಆಯೋಗ (1856); ಅಂತರರಾಷ್ಟ್ರೀಯ ತಂತಿ ಸಂಪರ್ಕ ಒಕ್ಕೂಟ (1856); ವಿಶ್ವ ಅಂಚೆ ಸಂಘ (1874–75); ಅಮೆರಿಕಾದ ಒಕ್ಕೂಟ (1890); ಹೇಗ್ ಸಮ್ಮೇಳನಗಳು ಮುಂತಾದ ವಿವಿಧ ಸಮ್ಮೇಳನಗಳಲ್ಲಿ ಕಾಣಬಹುದು.

ಲೀಗ್ ಆಫ್ ನೇಷನ್ಸ್ ಸ್ಥಾಪನೆಗೆ ಪ್ರಥಮ ಹೆಜ್ಜೆಗಳಾದ ಕೆಲವು ಮುಖ್ಯ ಸಮ್ಮೇಳನಗಳು ಹಾಗೂ ಚಳುವಳಿಗಳನ್ನು ಸಂಕ್ಷಿಪ್ತವಾಗಿ ಚರ್ಚಿಸೋಣ.

### 1. ಯುರೋಪಿನ ರಾಷ್ಟ್ರಗಳ ಒಕ್ಕೂಟ (Concert of Europe)

19ನೇ ಶತಮಾನದ ಮುಂಚೆಯೇ ಅಂತರರಾಷ್ಟ್ರೀಯ ಸಹಕಾರದ ಸ್ಥಾಪನೆಗೆ ಹಲವಾರು ಯೋಜನೆಗಳು ಹಾಗೂ ಪ್ರಯತ್ನಗಳು ನಡೆದಿದ್ದರೂ, ಅಂತರರಾಷ್ಟ್ರೀಯ ಸಂಘಟನೆಯ ಸ್ಥಾಪನೆಯ ದಿಕ್ಕಿನಲ್ಲಿ ವಿಯೆನ್ನಾ ಕಾಂಗ್ರೆಸ್ ಪ್ರಮುಖ ಮೈಲಿಗಲ್ಲು ಎಂದು ಪರಿಗಣಿಸಲಾಗಿದೆ. ನೆಪೋಲಿಯನ್‌ನಿಂದ ನಾಶವಾಗಿದ್ದ ಯುರೋಪ್‌ನ್ನು ವಿಯೆನ್ನಾ ಕಾಂಗ್ರೆಸ್ ಪುನರ್‌ರೂಪಿಸಿತಲ್ಲದೆ, ಗುಲಾಮಗಿರಿ ರದ್ದತಿ, ಅಂತರರಾಷ್ಟ್ರೀಯ ನದಿಗಳನ್ನು ವಾಣಿಜ್ಯ ವ್ಯಾಪಾರಕ್ಕೆ ಮುಕ್ತವಾಗಿರಿಸುವುದು, ಅಲ್ಪಸಂಖ್ಯಾತರ ರಕ್ಷಣೆ, ರಾಯಭಾರಿಗಳ ಕ್ರಮಬದ್ಧವಾದ ವರ್ಗೀಕರಣ ಇವೇ ಮುಂತಾದ ಪ್ರಯತ್ನಗಳನ್ನು ಕೈಗೊಂಡಿತು.

ವಿಯೆನ್ನಾ ಸಮ್ಮೇಳನದ ನಿರ್ಣಯಗಳನ್ನು ಕಾರ್ಯಗತಗೊಳಿಸಲು, ಆಸ್ಟ್ರಿಯಾ, ಬ್ರಿಟನ್, ಪ್ರಷ್ಯಾ ಮತ್ತು ರಾಷ್ಟ್ರಯಾಗಳನ್ನೊಳಗೊಂಡ ಚತುಷ್ಟ ಮೈತ್ರಿಕೂಟ ರಚನೆಯಾಯಿತು. ಆನಂತರ ಫ್ರಾನ್ಸ್ ಈ ಮೈತ್ರಿಕೂಟಕ್ಕೆ ಸೇರಿಕೊಂಡಿತು. ಈ ಒಂದು ಬೆಳವಣಿಗೆಯನ್ನು ಬೇವರ್ ಮತ್ತು ಹಾವಿಲ್ಯಾಂಡ್ ಅವರು "ಅಂತರರಾಷ್ಟ್ರೀಯ ಸಂಘಟನೆಗಳ ಇತಿಹಾಸದಲ್ಲಿ ಒಂದು ಮೈಲಿಗಲ್ಲು" ಎಂದು ಬಣ್ಣಿಸಿದ್ದಾರೆ. ವಿಯೆನ್ನಾ ಕಾಂಗ್ರೆಸ್ ಮುಂದಿನ ಒಂದು ಶತಮಾನದವರೆಗೂ ಜಾಗತಿಕ ವ್ಯವಹಾರಗಳನ್ನು ರೂಪಿಸುವಂತಹ ಒಂದು ರಾಜಕೀಯ ಮತ್ತು ಅಂತರರಾಷ್ಟ್ರೀಯ ವ್ಯವಸ್ಥೆಗೆ ಭದ್ರಬುನಾದಿ ಹಾಕಿತು ಎಂದು ಪಾಮರ್ ಮತ್ತು ಪರ್ಕಿನ್ಸ್‌ರು ಅಭಿಪ್ರಾಯಪಟ್ಟಿದ್ದಾರೆ. ಶಾಂತಿ ರಕ್ಷಣೆಯು ದೊಡ್ಡ ರಾಷ್ಟ್ರಗಳ ಸಹಕಾರವನ್ನು ಅವಲಂಬಿಸಿದೆ ಎಂಬ ವಿಚಾರ ಸ್ಪಷ್ಟವಾಯಿತು. ಈ ಒಂದು ಸಂತತಿಯು (ವಿಚಾರ) ಮುಂದಿನ ವರ್ಷಗಳಲ್ಲಿ ಲೀಗ್ ಆಫ್ ನೇಷನ್ಸ್ ಮತ್ತು ವಿಶ್ವಸಂಸ್ಥೆಯ ಸ್ಥಾಪನೆಯ ಮೇಲೆ ಪ್ರಭಾವ ಬೀರಿತು.

ವಿಯೆನ್ನಾ ಕಾಂಗ್ರೆಸ್ ನಂತರ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಸ್ಥಾಪನೆಯಲ್ಲಿ ಸಮಾಲೋಚನೆಗಳ ಯುಗ ಪ್ರಾರಂಭವಾಯಿತೆಂದು ಹೇಳಬಹುದು. ಯುರೋಪಿನ ಶಾಂತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಲು ಹಲವಾರು ಸಮ್ಮೇಳನಗಳು ಜರುಗಿದವು. ಅಂತಹ ಸಮ್ಮೇಳನಗಳು 1828ರಲ್ಲಿ ಎಕ್ಸ್–ಲಾ–ಛಾಪೆಲ್‌ನಲ್ಲಿಯೂ, 1820ರಲ್ಲಿ ಪ್ರೊಪೌವಿನಲ್ಲಿಯೂ, ಮತ್ತು 1821ರಲ್ಲಿ ಲೈ ಬಾಕ್‌ನಲ್ಲಿಯೂ ಮತ್ತು 1822ರಲ್ಲಿ ವೆರೋನದಲ್ಲಿಯೂ ನಡೆದವು. ಎಕ್ಸ್–ಲಾ–ಛಾಪೆಲ್ ಸಮ್ಮೇಳನದಲ್ಲಿ 'ಯುರೋಪಿನ ಒಕ್ಕೂಟ' (Concert of Europe) ಎಂದು ಕರೆಯಲ್ಪಟ್ಟ ರಾಷ್ಟ್ರ ಸಂಘದ (League of Nations) ಸ್ಥಾಪನೆಯ ವಿಚಾರವನ್ನು ಮಂಡಿಸಲಾಯಿತು. ಈ ಒಕ್ಕೂಟವು ಪ್ರಥಮ ಜಾಗತಿಕ ಯುದ್ಧ ಪ್ರಾರಂಭವಾಗುವವರೆಗೂ ಯುರೋಪಿನ ಶಾಂತಿ ಸ್ಥಾಪನೆಯಲ್ಲಿ ಜಂಟಿ ಕಾರ್ಯಾಚರಣೆಯನ್ನು ಮುಂದುವರಿಸಿತು.

ಯುರೋಪಿನ ಒಕ್ಕೂಟವು ಪ್ರಾರಂಭದಲ್ಲಿ ಯುರೋಪಿನ ವ್ಯವಹಾರ ಹಾಗೂ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿದ್ದಿತು. ಆನಂತರ ಅದು ಜಾಗತಿಕ ಒಕ್ಕೂಟವಾಗಿ ಬೆಳೆಯಿತು. ಯುರೋಪಿನ ಒಕ್ಕೂಟವು ತನ್ನ ಜೀವಿತಾವಧಿಯಲ್ಲಿ ಬಹುತೇಕ ಅಂತರರಾಷ್ಟ್ರೀಯ ವಿವಾದಗಳಲ್ಲಿ ಮಧ್ಯೆ ಪ್ರವೇಶಿಸಿ ತೀರ್ಪುಗಳನ್ನು ನೀಡಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಯುದ್ಧಗಳನ್ನು ತಡೆಗಟ್ಟಿ ಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಒಕ್ಕೂಟದ ಪ್ರಯತ್ನಗಳು ತುಂಬಾ ಸಹಕಾರಿಯಾಗಿದ್ದವು. ಯುರೋಪಿನ ಒಕ್ಕೂಟವು ಆಧುನಿಕ ಕಾಲದ ಪ್ರಧಾನ ಅಂತರರಾಷ್ಟ್ರೀಯ ಸಂಘಟನೆಯ ಪ್ರತಿರೂಪವನ್ನು ಸೃಷ್ಟಿಸಿತೆಂದು ಹೇಳಬಹುದು.

### 2. ದಿ ಹೇಗ್ ವ್ಯವಸ್ಥೆ

1899 ಮತ್ತು 1907ರಲ್ಲಿ ನಡೆದ ಹೇಗ್ ಶಾಂತಿ ಸಮ್ಮೇಳನಗಳು ಆಧುನಿಕ ಕಾಲದ ಅಂತರರಾಷ್ಟ್ರೀಯ ಸಂಘಟನೆಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದವು. ಈ ಸಮ್ಮೇಳನಗಳು ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸಿತಲ್ಲದೆ, ಅಂತರರಾಷ್ಟ್ರೀಯ ವಿವಾದಗಳನ್ನು ತೀರ್ಮಾನಿಸಲು ಖಾಯಂ ಜಾಗತಿಕ ನ್ಯಾಯಾಲಯವನ್ನು ಸ್ಥಾಪಿಸಿತು. ಈ ಅನೇಕ ಅಂತರರಾಷ್ಟ್ರೀಯ ಪ್ರಯತ್ನಗಳು ಮುಂದೆ ಲೀಗ್ ಆಫ್ ನೇಷನ್ಸ್ ಸಂಸ್ಥೆಯನ್ನು ಸ್ಥಾಪಿಸಲು ಪೂರ್ವಭಾವಿ ತಯಾರಿಯನ್ನು ಮಾಡಿಕೊಟ್ಟವು. "ಹೇಗ್ ಸಮ್ಮೇಳನಗಳು ತಾತ್ಕಾಲಿಕ ಸಮ್ಮೇಳನಗಳಿಂದ ರಾಷ್ಟ್ರ ಸಂಘದ ಸ್ಥಾಪನೆಡೆಗೆ ಪರಿವರ್ತನಾ ಹೆಜ್ಜೆಯನ್ನು ಬಿಂಬಿಸುತ್ತವೆ" ಎಂದು ಪಾಮರ್ ಮತ್ತು ಪರ್ಕಿನ್ಸ್ರು ಹೇಳಿದ್ದಾರೆ. ರಾಷ್ಟ್ರಗಳ ಹಾಗೂ ವಿಧಾನಗಳನ್ನು ಈ ಸಮ್ಮೇಳನಗಳು ಒದಗಿಸಿದವು.

### 3. ಸಾರ್ವಜನಿಕ ಅಂತರರಾಷ್ಟ್ರೀಯ ಸಂಘಗಳು

19ನೇ ಶತಮಾನದ ಉತ್ತರಾರ್ಧದಲ್ಲಿ ಮತ್ತು 20ನೇ ಶತಮಾನದ ಪ್ರಾರಂಭದಲ್ಲಿ ಬೆಳವಣಿಗೆಯಾದ ಹಲವಾರು ಸಾರ್ವಜನಿಕ ಅಂತರರಾಷ್ಟ್ರೀಯ ಸಂಘಗಳು ಲೀಗ್ ಆಫ್ ನೇಷನ್ಸ್‌ನ ರಚನೆ ಮತ್ತು ಸಂಘಟನೆಯ ಮೇಲೆ ಪ್ರಭಾವ ಬೀರಿದವು. ತಂತಿ ಸಂಪರ್ಕ ಆಡಳಿತದ ಅಂತರರಾಷ್ಟ್ರೀಯ ಕಛೇರಿ, ವಿಶ್ವ ಅಂಚೆ ಸಂಘ, ತೂಕ ಮತ್ತು ಅಳತೆಯ ಜಾಗತಿಕ ಕಾರ್ಯಾಲಯ; ಕೃಷಿ ಅಂತರರಾಷ್ಟ್ರೀಯ ಅಧ್ಯಯನ ಸಂಸ್ಥೆ ಮುಂತಾದವು ಅಸ್ತಿತ್ವಕ್ಕೆ ಬಂದವು. ಈ ಸಂಘಗಳು

ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಹಕಾರವನ್ನು ಸಾಧಿಸಿದವು. ಇವುಗಳಲ್ಲಿ ಕೆಲವು ಇನ್ನೂ ಅಸ್ತಿತ್ವದಲ್ಲಿವೆ. ಉಳಿದ ಕೆಲವು ಸಂಸ್ಥೆಗಳ ಕಾರ್ಯಗಳನ್ನು ವಿಶ್ವಸಂಸ್ಥೆಯು ವಿಶೇಷ ಅಂತ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ. ಈ ಸಂಸ್ಥೆಗಳಿಂದ ವಿಶ್ವಭ್ರಾತೃತ್ವ ಬೆಳೆಯಲು ಅವಕಾಶವಾಯಿತು. ಸಾರ್ವಜನಿಕ ಅಂತರರಾಷ್ಟ್ರೀಯ ಸಂಘಗಳು ಭವಿಷ್ಯತ್ತಿನ ಅಂತರರಾಷ್ಟ್ರೀಯ ಸಂಸ್ಥೆಗಳ ಮೇಲೆ ಗಾಢವಾದ ಪ್ರಭಾವ ಬೀರುವಂತ ಹಲವಾರು ಸಂಘಟನಾತ್ಮಕ ಪರಿಕಲ್ಪನೆಗಳನ್ನು ಜಾರಿಗೆ ತಂದವು.

## 4. ಯುದ್ಧ ಕಾಲದಲ್ಲಿನ ಶಾಂತಿ ಪ್ರಯತ್ನಗಳು

1914ರಲ್ಲಿ ಬ್ರಿಟನ್, ಫ್ರಾನ್ಸ್, ಜರ್ಮನಿ, ಆಸ್ಟ್ರಿಯಾ ಮತ್ತು ರಷ್ಯಾ ನಡುವೆ ಸಂಧಾನ ಕಾರ್ಯಗಳು ವಿಫಲವಾದವು. ಅಂತರರಾಷ್ಟ್ರೀಯ ರಾಜಿ-ಒಪ್ಪಂದಕ್ಕಾಗಿ ಒಂದು ಸ್ಥಾಯಿ ಅಂಗಸಂಸ್ಥೆಯ ಅವಶ್ಯಕತೆಯನ್ನು ರಾಜಕೀಯ ನೀತಿಜ್ಞರು ಮನಗಂಡರು. ಹೇಗ್ ಸಮ್ಮೇಳನಗಳೂ ಖಾಯಂ ಅಂತರರಾಷ್ಟ್ರೀಯ ನ್ಯಾಯಾಲಯಗಳಿಗೆ ಪ್ರಸ್ತಾಪ ಮಾಡಿದ್ದರೂ, ಅವು ಅಸ್ತಿತ್ವಕ್ಕೆ ಬರಲೇ ಇಲ್ಲ.

ಲೀಗ್ ಆಫ್ ನೇಷನ್ಸ್ ಸಂಸ್ಥೆಯನ್ನು ಪ್ರಾರಂಭಿಸುವ ಯೋಚನೆಯು ಮೊದಲ ಜಾಗತಿಕ ಯುದ್ಧದ ಮುನ್ನವೇ ಬಂದಿತ್ತು. 1905ರಲ್ಲಿ ಸರ್ ಹೆನ್ರಿ ಕ್ಯಾಬೆಲ್‌ರವರು 'ಶಾಂತಿಯಲೀಗ್' ಸಂಸ್ಥೆಯನ್ನು ಸ್ಥಾಪಿಸಲು ಕರೆಯಿತ್ತರು. 1911ರಲ್ಲಿ ಸರ್ ಎಡ್ವರ್ಡ್ ಗ್ರೇರವರು ಶಾಂತಿಯನ್ನು ಕಾಪಾಡಲು ಒಂದು ಜಾಗತಿಕ ಸಂಸ್ಥೆಬೇಕೆಂದು ಹೇಳಿದರು. 1914ರಲ್ಲಿ ಮೊದಲನೆಯ ಜಾಗತಿಕ ಯುದ್ಧವು ಪ್ರಾರಂಭವಾದ ನಂತರ ಪ್ರಪಂಚದಲ್ಲಿ ಶಾಶ್ವತ ಶಾಂತಿ ಸ್ಥಾಪನೆಗಾಗಿ ಒಂದು ಭದ್ರತಾ ವ್ಯವಸ್ಥೆಯನ್ನು ಸ್ಥಾಪಿಸುವ ಪ್ರಯತ್ನಗಳು ನಡೆದವು. ಈ ದಿಶೆಯಲ್ಲಿ ಸಿಟ್ಜರ್ಲೆಂಡಿನ ಪ್ರೊಫೆಸರ್ ರಪ್ಪಾರ್ಡ್‌ರವರು ಮುಂದಾಳತ್ವ ವಹಿಸಿದರು. 1915ರ ಪ್ರಾರಂಭದಲ್ಲಿ ಅಮೆರಿಕದ ಮಾಜಿ ರಾಷ್ಟ್ರಾಧ್ಯಕ್ಷರು ಟ್ಯಾಫ್ಟ್ ಅವರು **"ಲೀಗ್ ಟು ಎನ್‌ಫೋರ್ಸ್ ಫಿಸ್"** (ಶಾಂತಿಯನ್ನು ವಿಧಿಸುವ ಒಕ್ಕೂಟ) ಎಂಬ ಜಾಗತಿಕ ಸಂಸ್ಥೆಯನ್ನು ಸ್ಥಾಪಿಸಲು ಸಹಾಯ ಮಾಡಿದರು. ಈ ಜಾಗತಿಕ ಸಂಸ್ಥೆಯು, ಎಲ್ಲಾ ರಾಷ್ಟ್ರಗಳು ಒಂದು ರಾಷ್ಟ್ರ ಸಂಘವನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿತಲ್ಲದೆ, ರಾಷ್ಟ್ರಗಳು ತಮ್ಮ ಕಾನೂನುಬದ್ಧ ವಿವಾದಗಳನ್ನು ನ್ಯಾಯ ಪಂಚಾಯಿತಿಗೆ ಒಪ್ಪಿಸಬೇಕೆಂದೂ ಹಾಗೂ ರಾಜಕೀಯ ಸಮಸ್ಯೆಗಳ ಪರಿಹಾರಕ್ಕೆ ಯುದ್ಧ ಕೈಗೊಳ್ಳುವ ಮೊದಲು, ರಾಜಿ ಸಂಧಾನ ಸಮಿತಿಗೆ ಒಪ್ಪಿಸಲು ಶಿಫಾರಸ್ಸು ಮಾಡಿತು.

1915ರ ವಸಂತ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಲಾರ್ಡ್ ಬ್ರೈಸ್‌ರವರ ಮುಖಂಡತ್ವದಲ್ಲಿ ಅನೇಕರು **"ಲೀಗ್ ಆಫ್‌ನೇಷನ್ಸ್ ಸೊಸೈಟಿ"** (League of Nations Society) ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇದು ಸಹ ರಾಷ್ಟ್ರ ಸಂಘದ ಸ್ಥಾಪನೆ, ನ್ಯಾಯ ಪಂಚಾಯಿತಿಯ ಮೂಲಕ ವಿವಾದಗಳ ತೀರ್ಮಾನ ಮತ್ತು ಅಂತರರಾಷ್ಟ್ರೀಯ ಕಾನೂನಿನ ಕ್ರೋಢಿಕರಣಕ್ಕೆ ಆಗಾಗ್ಗೆ ಸಮ್ಮೇಳನಗಳ ಏರ್ಪಾಡುಗಳಿಗೆ ಶಿಫಾರಸ್ಸು ಮಾಡಿತು.

1915ರಲ್ಲಿ ಸುಮಾರು 12ಕ್ಕಿಂತ ಹೆಚ್ಚು ದೇಶಗಳ 30 ಜನ ಪ್ರತಿನಿಧಿಗಳು, ಸ್ಥಿರ ಶಾಂತಿಗಾಗಿ ಒಂದು 'ಕೇಂದ್ರೀಯ ಸಂಘಟನೆ'ಯನ್ನು (Central Organisation) ಸ್ಥಾಪಿಸಲು ದಿಹೇಗ್ ಪಟ್ಟಣದಲ್ಲಿ ಸಭೆ ಸೇರಿದರು. ಹೇಗ್ ಸಮ್ಮೇಳನಗಳನ್ನು ಖಾಯಂ ಸಂಸ್ಥೆಗಳನ್ನಾಗಿ ಮಾಡಲು ಸಭೆಯು ಬಯಸಿತು. ಅಲ್ಲದೆ, ಹೇಗರ ಸಮ್ಮೇಳನಗಳು ಕಾಲಕಾಲಕ್ಕೆ ಸಭೆ ಸೇರಬೇಕೆಂದು, ಪ್ರತಿಯೊಂದು ರಾಷ್ಟ್ರವು ಎಲ್ಲಾ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳಬೇಕೆಂದೂ ಹಾಗೂ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸಬೇಕೆಂದು ಸಭೆ ತೀರ್ಮಾನಿಸಿತು. ಸ್ವಲ್ಪ ಕಾಲದ ನಂತರ ರಾಷ್ಟ್ರ ಸಂಘದ ಬೇಡಿಕೆಗಾಗಿ ಇಟಲಿ ಮತ್ತು ಫ್ರಾನ್ಸ್‌ನಲ್ಲಿ ಸಂಘಗಳನ್ನು ಸ್ಥಾಪಿಸಲಾಯಿತು.

ಮೇಲಿನ ಪ್ರಯತ್ನಗಳಲ್ಲದೆ, ಲೀಗ್ ಆಫ್ ನೇಷನ್ಸ್ ಸ್ಥಾಪನೆಗಾಗಿ ಬ್ರಿಟನ್, ಅಮೆರಿಕ, ಫ್ರಾನ್ಸ್, ದಕ್ಷಿಣ ಆಫ್ರಿಕಾ ಮತ್ತು ಇತರ ದೇಶಗಳ ಸರ್ಕಾರಗಳು ಸಹ ಅಧಿಕೃತವಾಗಿ ಪ್ರಯತ್ನಗಳನ್ನು ಕೈಗೊಂಡವು. ಬ್ರಿಟನ್ನಿನ ವಿದೇಶಾಂಗ ವ್ಯವಹಾರಗಳ ಅಧೀನ ಕಾರ್ಯದರ್ಶಿಯಾಗಿದ್ದ **ಲಾರ್ಡ್‌ಸಿಸಿಲ್** ರವರು 1916ರಲ್ಲಿ ಬ್ರಿಟನ್ನಿನ ಸಚಿವ ಸಂಪುಟಕ್ಕೆ ಒಂದು

ಅಸಾಪಚಾರಿಕ ಜ್ಞಾಪಕ ಪತ್ರವನ್ನು (Memorandum) ಸಲ್ಲಿಸಿದನು. ಆತನು ಅಂತರರಾಷ್ಟ್ರೀಯ ವಿವಾದಗಳನ್ನು ಯುದ್ಧದ ಮೂಲಕ ಬಗೆಹರಿಸಿದೆ ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬೇಕೆಂಬ ಪ್ರಸ್ತಾಪವನ್ನು ಮಂಡಿಸಿದನು. ಈ ನಿಯಮವನ್ನು ಯಾವುದೇ ರಾಷ್ಟ್ರವು ಉಲ್ಲಂಘಿಸಿದರೆ, ಇತರ ರಾಷ್ಟ್ರಗಳು ಕರ್ತವ್ಯ ಲೋಪಿಯಾದ ರಾಷ್ಟ್ರದೊಡನೆ ಆರ್ಥಿಕ ಮತ್ತು ಇತರ ಹಣಕಾಸಿನ ಸಂಬಂಧಗಳನ್ನು ನಿಲ್ಲಿಸಬೇಕೆಂದು ಜ್ಞಾಪಕ ಪತ್ರದಲ್ಲಿ ಪ್ರಸ್ತಾಪಿಸಲಾಗಿತ್ತು.

ಲಾರ್ಡ್ ಸಿಸಿಲ್‌ರು ಜ್ಞಾಪನ ಪತ್ರವನ್ನು ಸಲ್ಲಿಸಿದ ನಂತರ ಬ್ರಿಟನ್ನಿನ ವಿದೇಶಾಂಗ ಕಾರ್ಯದರ್ಶಿಯವರು, ಲಾರ್ಡ್ ಫಿಲ್ಲಿ ಮೋರ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಿಸಿದನು. ಈ ಕಮಿಟಿಯು ಹಲವಾರು ಶಾಂತಿ ಯೋಜನೆಗಳ ಅಧ್ಯಯನ ನಡೆಸಿದ ನಂತರ 'ಒಡಂಬಡಿಕೆಯು ದಸ್ತಾವೇಜಿನ ಕರಡನ್ನು' ಸಿದ್ಧಪಡಿಸಿತು. ಈ ದಸ್ತಾವೇಜಿನ ಹಲವು ಭಾಗಗಳನ್ನು ಮುಂದಿನ ಲೀಗ್ ಆಫ್ ನೇಷನ್ಸ್ ಸ್ಥಾಪನೆಯ ಒಪ್ಪಂದದ ದಸ್ತಾವೇಜಿನಲ್ಲಿ ಸೇರಿಸಲಾಯಿತು. ದಕ್ಷಿಣ ಆಫ್ರಿಕಾದ ಜನರಲ್ ಸ್ಮಟ್ಸ್ ಅವರು ಈ ಕಮಿಟಿಯ ಶಿಫಾರಸ್ಸುಗಳನ್ನು ಅನುಮೋದಿಸಿದನು. ಯುದ್ಧವನ್ನು ನಿವಾರಿಸುವ ಒಂದು ಅಂತರರಾಷ್ಟ್ರೀಯ ಮಂಡಳಿಯ ಸ್ಥಾಪನೆಗೆ ಸ್ವೀಡನ್, ಡೆನ್ಮಾರ್ಕ್, ನಾವಳ, ಇಂಗ್ಲೆಂಡ್, ಫ್ರಾನ್ಸ್ ಮತ್ತು ಇತರ ರಾಷ್ಟ್ರಗಳು ಪ್ರಸ್ತಾಪಗಳನ್ನು ಸಲ್ಲಿಸಿದವು.

ಅಮೇರಿಕದ ಮಾಜಿ ಅಧ್ಯಕ್ಷರು ವುಡ್ರೊ ವಿಲ್ಸನ್‌ರು 1918ರಲ್ಲಿ ಘೋಷಿಸಿದ ಅವರ ಐತಿಹಾಸಿಕ 14 ಅಂಶಗಳ ಕಾರ್ಯಕ್ರಮವು ರಾಷ್ಟ್ರ ಸಂಘದ (ಲೀಗ್ ಆಫ್ ನೇಷನ್ಸ್) ಸ್ಥಾಪನೆಗೆ ವಿಶೇಷ ಉತ್ತೇಜನ ನೀಡಿತು. ಈ 14 ಅಂಶಗಳಲ್ಲಿ ಕೊನೆಯ ಅಂಶವೇ ಲೀಗ್ ಆಫ್ ನೇಷನ್ಸ್ ಸಂಸ್ಥೆಯ ಸ್ಥಾಪನೆ ಸಂಬಂಧಿಸಿದೆ. "ಎಲ್ಲಾ ರಾಷ್ಟ್ರಗಳ ರಾಜಕೀಯ ಸ್ವಾತಂತ್ರ ಮತ್ತು ಭೂಸಮಗ್ರತೆಯನ್ನು ರಕ್ಷಿಸುವಂತಹ ಒಂದು ಸಾಮಾನ್ಯ ರಾಷ್ಟ್ರ ಸಂಘವನ್ನು ರಚಿಸಬೇಕೆಂದು" ತಮ್ಮ ಕೊನೆಯ ಅಂಶದಲ್ಲಿ ವಿಲ್ಸನ್‌ರು ಒತ್ತಿ ಹೇಳಿದ್ದಾರೆ. ಲೀಗ್ ಆಫ್ ನೇಷನ್ಸ್ ವಿಲ್ಸನ್‌ರ ಪರಿಶ್ರಮದ ಫಲವಾಗಿದೆ. ಅದರ ಸ್ಥಾಪನೆಯಲ್ಲಿ ವಿಲ್ಸನ್‌ರು ಅಪಾರ ಆಸಕ್ತಿಯನ್ನು ಹೊಂದಿದ್ದರು. ಷೂಮನ್‌ರು, "ಲೀಗ್ ಆಫ್ ನೇಷನ್ಸ್ ವಿಲ್ಸನ್‌ರಿಂದಲೇ ಸ್ಥಾಪಿಸಲ್ಪಟ್ಟಿತು" ಎಂದು ಹೇಳಿರುವುದು ಸೂಕ್ತವಾಗಿದೆ. ತಮ್ಮ ಕಠಿಣ ಪರಿಶ್ರಮದಿಂದ ವುಡ್ರೊ ವಿಲ್ಸನ್‌ರು ರಾಷ್ಟ್ರ ಸಂಘಕ್ಕೆ (League of Nations) ಒಂದು ಸೂಕ್ತವಾದ ಚೌಕಟ್ಟನ್ನು ಒದಗಿಸಿದರು.

1919ರ ಜನವರಿಯಲ್ಲಿ ಜರ್ಮನಿಗೆ ಶಾಂತಿ ಷರತ್ತುಗಳನ್ನು ವಿಧಿಸಲು ಮಿತ್ರ ರಾಷ್ಟ್ರಗಳು ಸಭೆ ಸೇರಿದಾಗ, ಶಾಂತಿ ಒಪ್ಪಂದದ ಒಂದು ಭಾಗವಾಗಿ ರಾಷ್ಟ್ರ ಸಂಘವನ್ನು ಸ್ಥಾಪಿಸಲು ತೀರ್ಮಾನಿಸಿದವು. ಲೀಗ್ ಒಡಂಬಡಿಕೆಯ ಕರಡನ್ನು ತಯಾರಿಸಲು ವುಡ್ರೊ ವಿಲ್ಸನ್‌ರವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು (ಸಮಿತಿ) ರಚಿಸಲಾಯಿತು. ಪ್ರಾರಂಭದಲ್ಲಿ ಈ ಆಯೋಗವು ಪ್ರತಿ ರಾಷ್ಟ್ರದಿಂದ 2 ಸದಸ್ಯರಂತೆ 5 ಬೃಹತ್ ರಾಷ್ಟ್ರಗಳಿಂದ ಒಟ್ಟು 10 ಜನ ಸದಸ್ಯರನ್ನು ಹೊಂದಿದ್ದಿತು. ಆನಂತರ ಚಿಕ್ಕ ರಾಷ್ಟ್ರಗಳಿಂದ ಪ್ರತಿಭಟನೆ ಬಂದಿದ್ದರಿಂದ ಮತ್ತೆ 9 ಜನ ಹೆಚ್ಚುವರಿ ಸದಸ್ಯರನ್ನು ಈ ಆಯೋಗಕ್ಕೆ ಸೇರಿಸಿಕೊಳ್ಳಲಾಯಿತು. ಈ ಆಯೋಗವು ಹದಿನೈದು ಬಾರಿ ಸಭೆ ಸೇರಿ ಕೂಲಂಕಷವಾಗಿ ಚರ್ಚೆ ನಡೆಸಿ ಲೀಗ್ ಒಡಂಬಡಿಕೆಯನ್ನು (League Covenant) ವರ್ಸೇಲ್ಸ್ ಒಪ್ಪಂದದ ಒಂದು ಭಾಗವನ್ನಾಗಿ ಸೇರಿಸಲಾಯಿತು. ಈ ವರ್ಸೇಲ್ಸ್ ಒಪ್ಪಂದಕ್ಕೆ 281–1919ರಲ್ಲಿ ಅಂಕಿತ ಹಾಕಲಾಯಿತು. ನಿಗದಿತ ಸಂಖ್ಯೆಯ ರಾಷ್ಟ್ರಗಳ ಸರ್ಕಾರಗಳು ಅನುಮತಿ ನೀಡಿದ ನಂತರ 'ರಾಷ್ಟ್ರ ಸಂಘ' (ಲೀಗ್ ಆಫ್ ನೇಷನ್ಸ್) 10–1–1920ರಂದು ಜಾರಿಗೆ ಬಂದಿತು. ಸ್ವಿಜರ್ಲೆಂಡಿನ ಜಿನೆವಾದಲ್ಲಿ ರಾಷ್ಟ್ರ ಸಂಘದ ಕಾರ್ಯಾಲಯವನ್ನು ಸ್ಥಾಪಿಸಲಾಯಿತು.

### ಲೀಗಿನ ಸದಸ್ಯತ್ವ

ರಾಷ್ಟ್ರ ಸಂಘದ ಒಡಂಬಡಿಕೆ / ಒಪ್ಪಂದ (Covenant of League of Nations) ಒಂದು ಚಿಕ್ಕ ದಾಖಲೆಯಾಗಿದ್ದು 26 ವಿಧಿಗಳನ್ನು (ಪರಿಚ್ಛೇದಗಳು) ಹೊಂದಿದ್ದಿತು. ಈ ಲೀಗ್ ಒಡಂಬಡಿಕೆಯಲ್ಲಿನ ಮೊದಲಿನ 7 ವಿಧಿಗು ಲೀಗ್ ಸದಸ್ಯತ್ವಕ್ಕೆ ಸಂಬಂಧಿಸಿವೆ. ಅವುಗಳಲ್ಲಿ ರಾಷ್ಟ್ರ ಸಂಘದ ಸದಸ್ಯತ್ವಕ್ಕೆ ಅಗತ್ಯವಾದ ಅರ್ಹತೆ ಮತ್ತು ಇತರ ಕಟ್ಟುಪಾಡುಗಳನ್ನು

ವಿವರಿಸಲಾಗಿದೆ. ಈ ವಿಧಿಗಳ ಪ್ರಕಾರ ರಾಷ್ಟ್ರ ಸಂಘವು ಎರಡು ವಿಧವಾದ ಸದಸ್ಯ ರಾಷ್ಟ್ರಗಳನ್ನು ಹೊಂದಿದ್ದಿತು. (1) ಮೂಲ ಸದಸ್ಯ ರಾಷ್ಟ್ರಗಳು (Original Members) ಮತ್ತು (2) ನಂತರದ ಸದಸ್ಯ ರಾಷ್ಟ್ರಗಳು.

**ಮೂಲ ಸದಸ್ಯ-ರಾಷ್ಟ್ರಗಳು (Original Members)**

ವರ್ಸೇಲ್ಸ್ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳು (ಏರ್ಸೇಲ್ಸ್ ಒಪ್ಪಂದಕ್ಕೆ ಲೀಗ್ ಒಡಂಬಡಿಕೆಯೂ ಸೇರಿತ್ತು) ಮತ್ತು 1920ನೇ ಮಾರ್ಚ್ 20ರಂದು ಲೀಗ್ ಒಡಂಬಡಿಕೆಗೆ, ಆಮಂತ್ರಣದ ಮೇರೆಗೆ ಬಂದು, ಸಹಿ ಹಾಕಿದ ರಾಷ್ಟ್ರಗಳು ರಾಷ್ಟ್ರ ಸಂಘದ ಮೂಲ ಸದಸ್ಯ ರಾಷ್ಟ್ರಗಳಾಗಿದ್ದವು. ಅಂತಹ ಮೂಲ ಸದಸ್ಯ ರಾಷ್ಟ್ರಗಳು 43 ಇದ್ದವು. ಈ 43 ಮೂಲ ಸದಸ್ಯ ರಾಷ್ಟ್ರಗಳಲ್ಲಿ 30 ರಾಷ್ಟ್ರಗಳು ಮಿತ್ರ ರಾಷ್ಟ್ರಗಳ ಗುಂಪಿಗೆ ಸೇರಿದ್ದು ಅವೆಲ್ಲವೂ ವರ್ಸೇಲ್ಸ್ ಒಪ್ಪಂದಕ್ಕೆ ಸಹಿ ಹಾಕಿದ್ದವು; ಮತ್ತು 13 ಇತರ ರಾಷ್ಟ್ರಗಳನ್ನು ಸದಸ್ಯ ರಾಷ್ಟ್ರಗಳಾಗಲು ಆಮಂತ್ರಣ ನೀಡಲಾಗಿತ್ತು. ಅವು ಈ ಆಮಂತ್ರಣವನ್ನು ಒಪ್ಪಿ ಲೀಗಿನ ಒಡಂಬಡಿಕೆಗೆ ನಿರ್ದಿಷ್ಟಪಡಿಸಿದ ದಿನಾಂಕದಮದು ಸಹಿ ಹಾಕಿ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳಾದವು.

**ಆನಂತರ ಸದಸ್ಯ-ರಾಷ್ಟ್ರಗಳು / ಮೂಲವಲ್ಲದ ಸದಸ್ಯ ರಾಷ್ಟ್ರಗಳು**

ಮೂಲವಲ್ಲದ ಸದಸ್ಯ ರಾಷ್ಟ್ರಗಳು 1920ರ ಮಾರ್ಚ್ 20ನೇ ದಿನಾಂಕದ ನಂತರ ರಾಷ್ಟ್ರ ಸಂಘಕ್ಕೆ ಸೇರಿದ ರಾಷ್ಟ್ರಗಳಾಗಿದ್ದವು. ಇಂತಹ ಮೂಲವಲ್ಲದ ರಾಷ್ಟ್ರಸಂಘದ ಸದಸ್ಯ ರಾಷ್ಟ್ರಗಳ ಸಂಖ್ಯೆ ಪ್ರತಿ ವರ್ಷ ಹೆಚ್ಚುತ್ತಾ ಹೋಯಿತು. 1935ರಲ್ಲಿ ಲೀಗಿನಲ್ಲಿ ಒಟ್ಟು 62 ರಾಷ್ಟ್ರಗಳು ಸದಸ್ಯ ರಾಷ್ಟ್ರಗಳಾಗಿದ್ದವು. ಆದರೆ 1935ರ ನಂತರ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಾ ಹೋಯಿತು.

**ಸದಸ್ಯ-ರಾಷ್ಟ್ರಗಳ ಅರ್ಹತೆ**

ಲೀಗ್ ಒಡಂಬಡಿಕೆಯ ಪ್ರಕಾರ, ಲೀಗ್ ಅಸೆಂಬ್ಲಿಯ 2/3ರಷ್ಟು ಸದಸ್ಯರು ಒಪ್ಪಿ ಅನುಮೋದಿಸಿದ ಯಾವುದೇ ಸ್ವತಂತ್ರ ರಾಷ್ಟ್ರ ಅಥವಾ ಡೊಮಿನಿಯನ್ ಅಥವಾ ವಸಾಹತು ಲೀಗಿನ ಸದಸ್ಯ ರಾಷ್ಟ್ರವಾಗಬಹುದು. ಆದರೆ ಯಾವುದೇ ರಾಷ್ಟ್ರವು ಲೀಗಿನ ಸದಸ್ಯತ್ವ ಪಡೆಯಬೇಕಾದರೆ ಆ ರಾಷ್ಟ್ರವು ಲೀಗಿನ ಒಡಂಬಡಿಕೆಯ ನಿಯಮಗಳನ್ನು ಪಾಲಿಸುವುದೆಂದು ಭರವಸೆ ನೀಡಿದಾಗ ಮಾತ್ರ ಲೀಗಿನ ಸದಸ್ಯ ರಾಷ್ಟ್ರವಾಗಬಲ್ಲದು.

ರಾಷ್ಟ್ರ ಸಂಘವು, ಈ ಕೆಳಗಿನ ಕಾರಣಗಳಿಂದ ಕೆಲವು ರಾಷ್ಟ್ರಗಳ ಸದ್ಯತ್ವದ ಅರ್ಜಿಯನ್ನು ತಿರಸ್ಕರಿಸಿದೆ : (1) ಕೆಲವು ರಾಷ್ಟ್ರಗಳ ಸದಸ್ಯತ್ವದ ಅರ್ಜಿಗಳು ಸರಿಯಾದಕ್ರಮದಲ್ಲಿರಲಿಲ್ಲ. (2) ಕೆಲವು ರಾಷ್ಟ್ರಗಳು ಅಸ್ಥಿರ ಸರ್ಕಾರವನ್ನು ಹೊಂದಿದ್ದರೆ ಮತ್ತು ರಾಷ್ಟ್ರಗಳ ಗಡಿಗಳು ಅನಿಶ್ಚಿತವಾಗಿದ್ದರೆ ಮತ್ತು (3) ಕೆಲವು ರಾಷ್ಟ್ರಗಳು ತಮ್ಮ ಕರ್ತವ್ಯ ಹಾಗೂ ಅಂತರರಾಷ್ಟ್ರೀಯ ಬಾಧ್ಯತೆಗಳನ್ನು ಪರಿಪಾಲಿಸಿದ ಹಿಂದಿನ ದಾಖಲೆ ಸರಿಯಾಗಿಲ್ಲದಿದ್ದರೆ, ಸದಸ್ಯತ್ವದ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿತ್ತು.

ಲೀಗಿನ ಒಡಂಬಡಿಕೆಯು, ಸದಸ್ಯ ರಾಷ್ಟ್ರಗಳ ಸದಸ್ಯತ್ವವು ರದ್ದಾಗುವ ವಿಧಾನಗಳ ಬಗ್ಗೆ ಉಪಬಂದಗಳನ್ನು ಸಹ ಒಳಗೊಂಡಿತ್ತು. ಸ್ವಪ್ರೇರಣೆಯಿಂದ ಸದಸ್ಯತ್ವಕ್ಕೆ ರಾಜಿನಾಮೆ, ಸದಸ್ಯತ್ವದಿಂದ ವಜಾ ಮಾಡುವುದು. ಯಾವುದೇ ರಾಷ್ಟ್ರವು 2 ವರ್ಷಗಳ ಮುಂಚೆ ನೋಟಿಸ್ ಕೊಟ್ಟು ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಬಹುದು. ಹೀಗೆ ಸ್ವಪ್ರೇರಣೆಯ ಮೂಲಕ ಒಂದು ರಾಷ್ಟ್ರವು ತನ್ನ ಅರ್ಜಿ ಸಲ್ಲಿಸಿ ಲೀಗಿನ ಸದಸ್ಯತ್ವಕ್ಕೆ ರಾಜಿನಾಮೆ ನೀಡಬಹುದು. ರಾಷ್ಟ್ರ ಸಂಘದ ತನ್ನ ಇಡೀ 19 ವರ್ಷ ಜೀವಿತಾವಧಿಯಲ್ಲಿ ಒಟ್ಟು 16 ರಾಷ್ಟ್ರಗಳು ಈ ರೀತಿ ರಾಷ್ಟ್ರ ಸಂಘದ ಸದಸ್ಯತ್ವಕ್ಕೆ ಸ್ವಯಂ ಪ್ರೇರಣೆಯಿಂದ ರಾಜಿನಾಮೆ ನೀಡಿದವು. 1939 ರಲ್ಲಿ ಫಿನ್‌ಲ್ಯಾಂಡ್ ದೇಶದ ಮೇಲ್ ರಷ್ಯ ದಾಳಿ ಮಾಡಿದ ಪರಿಣಾಮವಾಗಿ, ರಷ್ಯಾವನ್ನು ಲೀಗಿನ ಸದಸ್ಯತ್ವದಿಂದ ಹೊರಹಾಕಲಾಯಿತು. ಯಾವುದೇ ಒಂದು ವರ್ಷದಲ್ಲಿ ರಾಷ್ಟ್ರ ಸಂಘದ ಸದಸ್ಯತ್ವ 58 ರಾಷ್ಟ್ರಗಳಿಗೆ ಯಾವಾಗಲೂ ಮೀರಲಿಲ್ಲ.

**ರಾಷ್ಟದ ಸಂಘದ ರಚನೆ – ಹೊಸ ವ್ಯವಸ್ಥೆ / ಹಂತ**

ಅಂತರರಾಷ್ಟ್ರೀಯ ಸಂಘಟನೆಯಲ್ಲಿ ರಾಷ್ಟ್ರ ಸಂಘದ ಸ್ಥಾಪನೆಯು / ರಚನೆಯು ಒಂದು ಹೊಸ ಹೆಜ್ಜೆಯಾಗಿದೆ. ಈ ಹಿಂದಿನ ಅಂತರರಾಷ್ಟ್ರೀಯ ಸಂಸ್ಥೆಗಳು ಕೇವಲ ಸಮಾಲೋಚನಾ ಅಂಗ ಸಂಸ್ಥೆಗಳಾಗಿದ್ದವು. ಲೀಗ್ ಆಫ್ ನೇಷನ್ಸ್ ಸ್ಥಾಪನೆಯಿಂದ ಅಂತರರಾಷ್ಟ್ರೀಯ ಸಹಕಾರದಲ್ಲಿ ಒಂದು ಹೊಸ ಯುಗ ಪ್ರಾರಂಭವಾಯಿತೆಂದು ಹೇಳಬಹುದು. ಜಾಗತಿಕ ಶಾಂತಿಯನ್ನು ಕದಡುವ ಸಮಸ್ಯೆಗಳ ಪರಿಹಾರಕ್ಕಾಗಿ ರಾಷ್ಟ್ರಗಳು ಪರಸ್ಪರ ಸಹಕರಿಸುವಂತೆ ರಾಷ್ಟ್ರ ಸಂಘ ಅನುವು ಮಾಡಿಕೊಟ್ಟಿತು.

ಆದರೆ ಕೆಲವರು ರಾಷ್ಟ್ರ ಸಂಘದ ಅಂಗಗಳು ಕೇವಲ ಹಿಂದಿನ ಅಂತರರಾಷ್ಟ್ರೀಯ ಸಂಘಟನೆಗಳ ಪುನರುತ್ಪತ್ತಿ ಎಂದು ಅಭಿಪ್ರಾಯಪಟ್ಟಿದ್ದಾರೆ. ಉದಾಹರಣೆಗೆ, ಲೀಗಿನ ಮಹಾಮಂಡಲಿ (ಕೌನ್ಸಿಲ್)ಯು ಹಿಂದಿನ ಯುರೋಪ್ ಒಕ್ಕೂಟದ (Concert of Europe) ಪಡಿಯಚ್ಚು. ಹಾಗೆಯೇ ರಾಷ್ಟ್ರ ಸಂಘದ ಮಹಾಸಭೆ (Assembly) ಹೇಗ್ ಸಮ್ಮೇಳನದ ಪ್ರತಿ–ಮುಖವಾಗಿದೆ. ರಾಷ್ಟ್ರ ಸಂಘದ ಸಚಿವಾಲಯವು ಹಿಂದಿನ ಸಾರ್ವಜನಿಕ ಅಂತರರಾಷ್ಟ್ರೀಯ ಸಂಘಗಳ ಭಾಗವಾಗಿದ್ದ ಅಂತರರಾಷ್ಟ್ರೀಯ ಕಛೇರಿಯ ವಿಸ್ತರಣೆಯಾಗಿದೆ. ಲೀಗಿನ ಖಾಯಂ ನ್ಯಾಯಾಲಯವು ಹೇಗ್ ಸಮ್ಮೇಳನ ಸ್ಥಾಪಿಸಲು ಬಯಸಿದ್ದ ಅಂತರರಾಷ್ಟ್ರೀಯ ನ್ಯಾಯ ಪಂಚಾಯಿತಿಯ ಪ್ರತಿರೂಪ. ಆದರೆ ಹಿಂದಿನ ಕಾಲದ ಕೆಲವು ಸಂಸ್ಥೆಗಳನ್ನು ಪೂರ್ಣಗೊಳಿಸಿ ಉನ್ನತಮಟ್ಟಕ್ಕೆ ತರುವಲ್ಲಿ ಹಾಗೂ ಹಿಂದೆಯೇ ನಿರೀಕ್ಷಿಸಿದಂತೆ ಅಸೆಂಬ್ಲಿ, ಕೌನ್ಸಿಲ್ ಮತ್ತು ಖಾಯಂ ನ್ಯಾಯಾಲಯ ಸ್ಥಾಪನೆಯಲ್ಲಿ ಲೀಗ್ ಆಫ್ ನೇಷನ್ಸ್‌ನ ಖ್ಯಾತಿ ಅಡಗಿದೆ. ಲೀಗ್ ಆಫ್ ನೇಷನ್ಸ್ ಅಂತರರಾಷ್ಟ್ರೀಯ ಸಹಕಾರದ ಒಂದು ಸಾಧನವಾಗಿದೆ ಹಾಗೂ ಸಾಮಾನ್ಯ ಕಾರ್ಯ ಸೂಚಿಗೆ ಅನುವು ಮಾಡಿಕೊಡುವ ಒಂದು ಸ್ಥಾಯಿ ಅಂಗ ಸಂಸ್ಥೆಯಾಗಿದೆ. ಜಾಗತಿಕ ರಾಜಕೀಯ ಪದ್ಧತಿಯ ಕಾರ್ಯ ವಿಧಾನದ ಸುಧಾರಣೆಗೆ ಹಾಗೂ ಅದರ ಕಾರ್ಯನಿರ್ವಹಣೆಗೆ ನೆರವಾಗಲು ಅನೇಕ ಪ್ರಯತ್ನಗಳನ್ನು ಮಾಡಿದೆ. ರಾಷ್ಟ್ರಸಂಘ ಅಸ್ತಿತ್ವದಲ್ಲಿ ಎರಡು ದಶಕಗಳಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ವಾಸ್ತವಿಕವಾಗಿ ಕಾರ್ಯನಿರ್ವಹಣೆಯಲ್ಲಿ ತನ್ನ ಪರಿಣಾಮಕತೆಯನ್ನು ಪ್ರದರ್ಶಿಸಿದೆ.

ಮೇಲಿನ ವಿವರಣೆಯಿಂದ ನಮಗೆ ತಿಳಿಯುವುದೇನೆಂದರೆ ರಾಷ್ಟ್ರ ಸಂಘವು ಕೇವಲ ಪ್ರಥಮ ಜಾಗತಿಕ ಯುದ್ಧದ ಫಲವಾಗಿರದೆ, ಅದು ಅನೇಕ ಮೂಲಗಳಿಂದ ವಿಕಾಸ ಹೊಂದಿದ ಸಂಸ್ಥೆಯಾಗಿದೆ. ರಾಷ್ಟ್ರ ಸಂಘದ ಸ್ಥಾಪನೆಯು ಅಂತರರಾಷ್ಟ್ರೀಯ ಸಂಘಟನೆಯಲ್ಲಿ ಒಂದು ನೂತನ ಹೆಜ್ಜೆ ಹಾಗೂ ಸಹಯೋಗವಾಗಿದೆ.

**ನಿಮ್ಮ ಪ್ರಗತಿ ಪರಿಶೀಲನೆ – 1**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ರಾಷ್ಟಸಂಘದ ಮೂಲ ಹಾಗೂ ಬೆಳವಣಿಗೆಯನ್ನು ವಿವರಿಸಿ.**

---------------------------------------------------------------------

---------------------------------------------------------------------

---------------------------------------------------------------------

---------------------------------------------------------------------

---------------------------------------------------------------------

## 5.3 ರಾಷ್ಟ್ರ ಸಂಘದ ಧ್ಯೇಯೋದ್ದೇಶಗಳು

ರಾಷ್ಟ್ರ ಸಂಘವು ರಾಷ್ಟ್ರಗಳ ಒಂದು ಸಡಿಲ ಸ್ವರೂಪದ ಕೂಟವಾಗಿದ್ದಿತು. ಅದರ ಒಡಂಬಡಿಕೆ (Covenant) ಘನೋದ್ದೇಶದ ಪ್ರಸ್ತಾವನೆ ಮತ್ತು 26 ವಿಧಿಗಳನ್ನೊಳಗೊಂಡಿದೆ. ಅದರ ಪ್ರಣಾಳಿಕೆಯು ರಾಷ್ಟ್ರ ಸಂಘದ ಉದ್ದೇಶಗಳು ಮತ್ತು ಅಂಗ ರಚನೆಯನ್ನು ವಿವರಿಸುತ್ತದೆ. ಮೊದಲ 7 ವಿಧಿಗಳು ರಾಷ್ಟ್ರ ಸಂಘದ ಸದಸ್ಯತ್ವ ಮತ್ತು ಸಂವಿಧಾನಾತ್ಮಕ ವ್ಯವಸ್ಥೆಯನ್ನು ವಿವರಿಸುತ್ತವೆ. ಎಂಟರಿಂದ ಹದಿನೇಳರವರೆಗಿನ ವಿಧಾನಗಳು ವಿಶ್ವಶಾಂತಿ ರಕ್ಷಣೆಗೆ ಸಂಬಂಧಿಸಿವೆ. 18 ರಿಂದ 21ರವರೆಗಿನ ವಿಧಾನಗಳು ಒಪ್ಪಂದಗಳು, ವಲಯ ಕೂಟಗಳು ಮತ್ತು ಶಾಂತಿಯುತ ಬದಲಾವಣೆಗಳಿಗೆ ಸಂಬಂಧಿಸಿವೆ. ಉಳಿದ ಐದು ವಿಧಿಗಳು ಪ್ರಣಾಳಿಕೆಯ ತಿದ್ದುಪಡಿ, ಅಂತರರಾಷ್ಟ್ರೀಯ ಸಹಕಾರ ಮತ್ತು ಜಾಗತಿಕ ಕಲ್ಯಾಣದ ಸಮಸ್ಯೆಗಳಿಗೆ ಸಂಬಂಧಿಸಿವೆ.

ಲೀಗ್ ಆಫ್ ನೇಷನ್ಸ್ನ (ರಾಷ್ಟ್ರ ಸಂಘದ) ಪ್ರಸ್ತಾಪನೆಯಲ್ಲಿ (Preamble) ಅದರ ಗುರಿ ಗುರಿ ಮತ್ತು ಧ್ಯೇಯಗಳನ್ನು ವಿವರಿಸಲಾಗಿದೆ. ಅದರ ಪೀಠಿಕೆ ಈ ಕೆಳಗಿನಂತಿದೆ :

"ಅಂತರರಾಷ್ಟ್ರೀಯ 'ಸಹಕಾರವನ್ನು ಸಾಧಿಸಲು ಮತ್ತು ಅಂತರರಾಷ್ಟ್ರೀಯ ಭದ್ರತೆ ಹಾಗೂ ಶಾಂತಿಯನ್ನು ಕಾಪಾಡಲು ಯುದ್ಧ ಮಾಡುವುದಿಲ್ಲ ಎಂಬ ನಮ್ಮ ಕರ್ತವ್ಯವನ್ನು ಪಾಲಿಸಲು ರಾಷ್ಟ್ರಗಳ ಮಧ್ಯೆ ಬಹಿರಂಗವಾದ (ಮುಕ್ತವಾದ), ನ್ಯಾಯಯುತವಾದ ಮತ್ತು ಗೌರವಪೂರ್ಣವಾದ ಸಂಬಂಧ ಬೆಳೆಸಲು ಅಂತರರಾಷ್ಟ್ರೀಯ ಕಾನೂನನ್ನು ರೂಪಿಸಿ, ಆ ಮೂಲಕ ರಾಷ್ಟ್ರಗಳ ನಡವಳಿಕೆಯನ್ನು ಮುಂದುವರಿಸಿಕೊಂಡು ಹೋಗಲು ಮತ್ತು ಎಲ್ಲಾ ಅಂತರರಾಷ್ಟ್ರೀಯ ಒಪ್ಪಂದಗಳನ್ನು ಗೌರವಿಸಲು ಮತ್ತು ರಾಷ್ಟ್ರ-ರಾಷ್ಟ್ರಗಳ ಸಂಬಂಧಗಳಲ್ಲಿ ನ್ಯಾಯವನ್ನು ದೊರಕಿಸಲು ನಾವು ಇಂದು ರಾಷ್ಟ್ರ ಸಂಘದ ಒಡಂಬಡಿಕೆಯನ್ನು (Covenant of League) ಒಪ್ಪಿಕೊಳ್ಳುತ್ತೇವೆ."

ರಾಷ್ಟ್ರಸಂಘದ ಪ್ರಸ್ತಾವನೆಯ ಅಂಗವಾಗಿ ವಿವರಿಸಿದ ಗುರಿ ಹಾಗೂ ಉದ್ದೇಶಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

1. ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಸಾಧಿಸುವುದು.
2. ಭವಿಷ್ಯತ್ತಿನಲ್ಲಿ ಯುದ್ಧಗಳು ಸಂಭವಿಸಿದಂತೆ ತಡೆಯುವುದು. ಇದನ್ನು ಸಾಧಿಸಲು ಸಮಾನತೆ, ನ್ಯಾಯ ಮತ್ತು ಗೌರವ ತತ್ವಗಳ ಆಧಾರದ ಮೇಲೆ ರಾಷ್ಟ್ರಗಳ ಸಂಬಂಧಗಳನ್ನು ಸ್ಥಾಪಿಸುವುದು.
3. ಮಾನವನ ಜೀವನವನ್ನು ಉತ್ತಮವನ್ನಾಗಿಸಲು ಹಾಗೂ ಉದಾತ್ತವನ್ನಾಗಿ ಮಾಡಲು ರಾಷ್ಟ್ರಗಳ ಮಧ್ಯೆ ಸಾಮಾಜಿಕ, ಬೌದ್ಧಿಕ ಮತ್ತು ಆರ್ಥಿಕ ರಂಗಗಳಲ್ಲಿ ಪರಸ್ಪರ ಸಹಕಾರವನ್ನು ವೃದ್ಧಿಸುವುದು.
4. ರಾಷ್ಟ್ರಗಳ ಮಧ್ಯೆ ಸಂಬಂಧಗಳ ನಿರ್ವಹಣೆಯಲ್ಲಿ ಅಂತರರಾಷ್ಟ್ರೀಯ ಕಾನೂನಿಗೆ ಮನ್ನಣೆ ನೀಡುವುದು.

ಇವುಗಳಿಗೆ ಸಂಬಂಧಿಸಿದಂತೆ ರಾಷ್ಟ್ರ ಸಂಘದ ಮೂಲಭೂತ ಉದ್ದೇಶಗಳೆಂದರೆ :

1. ಯುದ್ಧದ ಕಾರಣಗಳನ್ನು ಗುರುತಿಸುವುದು ಹಾಗೂ ನಿವಾರಿಸುವುದ.
2. ಯುದ್ಧವನ್ನು ತಡೆಗಟ್ಟುವ ವಿಧಾನಗಳನ್ನು ಗೊತ್ತುಪಡಿಸುವುದು.
3. ಯುದ್ಧ ನಿರೋಧಕ ವಿಧಾನಗಳನ್ನು ಉಲ್ಲಂಘಿಸಿದವರು ವಿರುದ್ಧ ಕ್ರಮ ಕೈಗೊಳುವುದು.
4. ವಿಶ್ವದಲ್ಲಿ ಶಾಂತಿ ಸ್ಥಾಪನೆಗಾಗಿ ಶ್ರಮಿಸುವುದು.
5. ವಸಾಹತುಗಳ ನಿವಾಸಿಗಳ ಹಿತಾಸಕ್ತಿಗಳನ್ನು ಕಾಪಾಡಿ, ಅವರ ಪುರೋಬದ್ಧಿಗಾಗಿ ಶ್ರಮಿಸುವುದು.

6. ರಾಜ್ಯಗಳ ನಡುವಣ ಭಿನ್ನಾಭಿಪ್ರಾಯಗಳನ್ನು ಪಂಚಾಯಿತಿಗಳ ಮೂಲಕ ಬಗೆಹರಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು ಮತ್ತು

7. ರಾಷ್ಟ್ರ ಸಂಘದ ಧ್ಯೇಯೋದ್ದೇಶಗಳನ್ನು ಅನುಷ್ಠಾನಕ್ಕೆ ತರಲು ಸ್ಥಾಯಿ ಸಮಿತಿಗಳನ್ನು ನೇಮಿಸುವುದು.

ಮೇಲಿನ ಉದ್ದೇಶಗಳನ್ನು ಈಡೇರಿಸಲು ರಾಷ್ಟ್ರ ಸಂಘ ರಾಷ್ಟ್ರಗಳ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸಲು ಯೋಜನೆಗಳನ್ನು ತಯಾರಿಸಿತು. ಎಲ್ಲಾ ಸದಸ್ಯ ರಾಷ್ಟ್ರಗಳ ಭೂಸಮಗ್ರತೆ ಮತ್ತು ರಾಜಕೀಯ ಸ್ವಾತಂತ್ರಕ್ಕೆ ಮನ್ನಣೆಗೆ ಉತ್ತೇಜನ ಮತ್ತು ಶಾಂತಿ ವಿಧಾನಗಳ ಮೂಲಕ ಅಂತರರಾಷ್ಟ್ರೀಯ ವಿವಾದಗಳನ್ನು ಪರಿಹರಿಸಿಕೊಳ್ಳಲು ಪ್ರೋತ್ಸಾಹಿಸುವುದು, ಇವೇ ಮುಂತಾದ ಪ್ರಯಾತ್ನಗಳನ್ನು ರಾಷ್ಟ್ರ ಸಂಘ ಕೈಗೊಂಡಿತು.

**ನಿಮ್ಮ ಪ್ರಗತಿ ಪರಿಶೀಲನೆ – 2**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ರಾಷ್ಟ್ರಸಂಘದ ಗುರಿ ಹಾಗೂ ಉದ್ದೇಶಗಳನ್ನು ಚರ್ಚಿಸಿ.**

------------------------------------------------------------

------------------------------------------------------------

------------------------------------------------------------

------------------------------------------------------------

## 5.4 ಸಾರಾಂಶ

ಜಾಗತಿಕ ಶಾಂತಿಯನ್ನು ಕಾಪಾಡಿಕೊಂಡು ಬರುವ ಉದ್ದೇಶದಿಂದ ರಾಷ್ಟ್ರಸಂಘ ಎಂಬ ಜಾಗತಿಕ ಸಂಸ್ಥೆಯು ಪ್ರಪಂಚದ ಮೊದಲನೆಯ ಮಹಾಯುದ್ಧದ ನಂತರ ಹುಟ್ಟಿಕೊಂಡಿತಾದರೂ, ಅದಕ್ಕಿಂತ ಮುನ್ನವೇ ಕೆಲವು ಆಡಳಿತಾತ್ಮಕ ಜಾಗತಿಕ ಸಂಸ್ಥೆಗಳನ್ನು ಸ್ಥಾಪಿಸಲು ಅನೇಕ ಪ್ರಯತ್ನಗಳು ನಡೆದವು. ಯುರೋಪಿನ ಒಕ್ಕೂಟ, ಹೇಗ್ ಸಮ್ಮೇಳನಗಳು ಮತ್ತು ಸಾರ್ವಜನಿಕ ಅಂತರರಾಷ್ಟ್ರೀಯ ಸಂಘಗಳು ರಾಷ್ಟ್ರ ಸಂಘದ ಸ್ಥಾಪನೆಗೆ ಪ್ರಥಮ ಹೆಜ್ಜೆಗಳು. ಪ್ರಥಮ ಜಾಗತಿಕ ಯುದ್ಧದ (1914–1918) ಭೀಕರತೆಯು ಜನರನ್ನು ದಂಗುಪಡಿಸಿತು. ರಾಷ್ಟ್ರಗಳ ನಡುವಿನ ವಿವಾದಗಳನ್ನು ಹಾಗೂ ಸಮಸ್ಯೆಗಳನ್ನು ಪರಿಹರಿಸಲು ಯುದ್ಧವು ಸರಿಯಾದ ಮಾರ್ಗವಲ್ಲವೆಂಬದನ್ನು ಜನತೆ ಮನಗಂಡಿತು. ಆದ್ದರಿಂದ ಇನ್ನು ಮುಂದೆ ಇಂತಹ ಯುದ್ಧಗಳನ್ನು ತಡೆಯಲು ಶಾಂತಿ ಮತ್ತು ಭದ್ರತೆಗಳನ್ನು ಪ್ರಪಂಚದಲ್ಲಿ ಸ್ಥಾಪಿಸಲು ಜಾಗತಿಕ ಸಂಸ್ಥೆಯೊಂದರ ಅಗತ್ಯತೆಯನ್ನು ಜನರು ಮನಗಂಡರು. ಇದರ ಫಲವೇ ರಾಷ್ಟ್ರ ಸಂಘದ ಸ್ಥಾಪನೆ.

ರಾಷ್ಟ್ರ ಸಂಘವನ್ನು ಸ್ಥಾಪಿಸುವ ಚಿಂತನೆಯು ಪ್ರಥಮ ಮಹಾಯುದ್ಧದ ಮುಂಚೆಯೇ ಪ್ರಾರಂಭವಾಗಿತ್ತು. ಸರ್ ಹೆನ್ರಿ ಕ್ಯಾಂಬೆಲ್, ಸರ್ ಎಡ್ವರ್ಡ್ ಗ್ರೇ, ಸ್ವಿಜರ್ಲೆಂಡಿನ ಪ್ರೊ. ರಪ್ಪಾರ್ಡ್ ಇಂಗ್ಲೆಂಡಿನ ಲಾರ್ಡ್ ಬ್ರೈಸ್, ಅಮೆರಿಕ ರಾಷ್ಟ್ರಾಧ್ಯಕ್ಷ ಟ್ಯಾಪ್ಟ್ ಮುಂತಾದವು ಈ ದಿಶೆಯಲ್ಲಿ ಅನೇಕ ಪ್ರಯತ್ನಗಳನ್ನು ಕೈಗೊಂಡರು.

ರಾಷ್ಟ್ರ ಸಂಘದ ಸ್ಥಾಪನೆಗೆ ವಿಶೇಷ ಉತ್ತೇಜನ ದೊರಕಿದ್ದು ಅಮೆರಿಕದ ಅಂದಿನ ಅಧ್ಯಕ್ಷರಾಗಿದ್ದ ವುಡ್ರೊ ವಿಲ್ಸನ್ರಿಂದ ವಿಲ್ಸನ್‌ರು ತಮ್ಮ ಐತಿಹಾಸಿಕ 14 ಅಂಗಳ ಕಾರ್ಯಕ್ರಮಗಳನ್ನು ಘೋಷಿಸಿ, ಅದರ 14ನೇ ಅಂಶದಲ್ಲಿ ರಾಷ್ಟ್ರ

ಸಂಘವನ್ನು ಸೇರಿಸಿದರು. 1919 ರಲ್ಲಿ ಮಾಡಿಕೊಂಡ ವರ್ಸೇಲ್ಸ್ ಒಪ್ಪಂದದಲ್ಲಿ ರಾಷ್ಟ್ರ ಸಂಘವನ್ನು ಒಂದು ಭಾಗವಾಗಿ ಸೇರಿಸಲಾಯಿತು. ರಾಷ್ಟ್ರ ಸಂಘವು ಅಧಿಕೃತವಾಗಿ 1920 ರ ಜನವರಿ 10 ರಂದು ಜಾರಿಗೆ ಬಂದಿತು.

## 5.5 ಕಠಿಣ ಪದಗಳು

| | | |
|---|---|---|
| ಒಡಂಬಡಿಕೆ | – | ಒಪ್ಪಂದ |
| ಸಹಕರಿಸು | – | ನೆರವು ನೀಡು |
| ಸಹಜೀವನ | – | ಕೂಡಿ ಬಾಳುವುದು |
| ಪ್ರಸರಣ | – | ಹರಡುವಿಕೆ |
| ಸಂಘಟನೆ | – | ವ್ಯವಸ್ಥೆ |

## 5.6 ಕೆಲವು ಉಪಯುಕ್ತ ಪುಸ್ತಕಗಳು

| | | |
|---|---|---|
| **ಪ್ರೊ. ಎನ್. ಹಾಲಪ್ಪ** | : | *ಅಂತರರಾಷ್ಟ್ರೀಯ ಸಂಬಂಧಗಳು* |
| **ಡಾ. ಟಿ.ಡಿ. ದೇವೇಗೌಡ** | : | *ಅಂತರರಾಷ್ಟ್ರೀಯ ಸಂಬಂಧಗಳು* |
| **ಪ್ರೇಮ ಅರೋರ** | : | *ದಿ ಯುನೈಟೆಡ್ ನೇಷನ್ಸ್* |
| **ಎಫ್. ಪೊಲ್ಲಾಕ್** | : | *ದಿ ಲೀಗ್ ಆಫ್ ನೇಷನ್ಸ್* |
| **ಪಾಮರ್ ಮತ್ತು ಪರ್ಕಿನ್ಸ್** | : | *ಇಂಟರ್‌ನ್ಯಾಷನಲ್ ರಿಲೇಷನ್ಸ್* |
| **ಜಾಜ್ ಸ್ಕಾಟ್** | : | *ದಿ ರೈಜ್ ಅಂಡ್ ಫಾಲ್ ಆಫ್ ದಿ ಲೀಗ್ ಆಫ್ ನೇಷನ್ಸ್* |

## 5.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

**ನಿಮ್ಮ ಪ್ರಗತಿ ಪರಿಶೀಲನೆ – 1**

1. ನೋಡಿ ವಿಭಾಗ 5.2

**ನಿಮ್ಮ ಪ್ರಗತಿ ಪರಿಶೀಲನೆ – 2**

1. ನೋಡಿ ವಿಭಾಗ 5.3

# ಘಟಕ – 6 : ರಾಷ್ಟ್ರಗಳ ಸಂಘದ ಅಂಗಗಳು – ಅಸೆಂಬ್ಲಿ ಮತ್ತು ಕೌನ್ಸಿಲ್

ರಚನೆ

6.0 ಉದ್ದೇಶಗಳು

6.1 ಪೀಠಿಕೆ

6.2 ಅಸೆಂಬ್ಲಿ (ಮಹಾಸಭೆ) – ರಚನೆ ಮತ್ತು ಕಾರ್ಯಗಳು

6.3 ಕೌನ್ಸಿಲ್ (ಮಹಾಮಂಡಲಿ) – ರಚನೆ ಮತ್ತು ಕಾರ್ಯಗಳು

6.4 ಸಾರಾಂಶ

6.5 ಕಠಿಣ ಪದಗಳು

6.6 ಕೆಲವು ಉಪಯುಕ್ತ ಪುಸ್ತಕಗಳು

6.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 6.0 ಉದ್ದೇಶಗಳು

ಈ ಘಟಕದ ಉದ್ದೇಶವೆಂದರೆ, ರಾಷ್ಟ್ರ ಸಂಘದ ಅಂಗಗಳನ್ನು ವಿವರಿಸುವುದಾಗಿದೆ. ಈ ಘಟಕದಲ್ಲಿ ರಾಷ್ಟ್ರ ಸಂಘದ ಅಂಗಗಳನ್ನು ವಿವರಿಸುವುದಾಗಿದೆ. ಈ ಘಟಕದಲ್ಲಿ ರಾಷ್ಟ್ರ ಸಂಘದ ಎರಡು ಪ್ರಮುಖ ಅಂಗಗಳಾದ ಅಸೆಂಬ್ಲಿ (ಮಹಾಸಭೆ) ಮತ್ತು ಕೌನ್ಸಿಲಿನ (ಮಹಾಮಂಡಲಿ) ರಚನೆ ಹಾಗೂ ಕಾರ್ಯಗಳನ್ನು ವಿವರಿಸಲಾಗಿದೆ. ಈ ಘಟದ ಅಧ್ಯಯನದ ನಂತರ ನೀವು ಈ ಕೆಳಗಿನವುಗಳಿಗೆ ಉತ್ತರಿಸಬಹುದು :

- ರಾಷ್ಟ್ರ ಸಂಘದ ಅಸೆಂಬ್ಲಿಯ ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.
- ಲೀಗ್ ಆಫ್ ನೇಷನ್ಸ್ (ರಾಷ್ಟ್ರ ಸಂಘ)ನ ರಚನೆ ಮತ್ತು ಕಾರ್ಯಗಳನ್ನು ಪರಿಶೀಲಿಸಿ.

## 6.1 ಪೀಠಿಕೆ

ಯಾವುದೇ ಒಂದು ಸಂಘ ಸಂಸ್ಥೆಯು, ಅದು ಅಂತರರಾಷ್ಟ್ರೀಯ ಸಂಘ ಅಥವಾ ಇನ್ನಾವುದೇ ಸಂಸ್ಥೆಯಾಗಿರಲಿ, ಸಮರ್ಪಕ ಹಾಗೂ ಕ್ರಮಬದ್ಧವಾಗಿ ಕಾರ್ಯನಿರ್ವಹಿಸಲು ಅದು ನಿರ್ಧಿಷ್ಟವಾದ ರಚನೆ ಅಥವಾ ಸೂಕ್ತ ಅಂಗಗಳನ್ನು ಹೊಂದಿರಬೇಕು. ರಾಷ್ಟ್ರ ಸಂಘವು (ಲೀಗ್ ಆಫ್ ನೇಷನ್ಸ್) ಇದರಿಂದ ಹೊರತಾಗಿಲ್ಲ.

ರಾಷ್ಟ್ರ ಸಂಘವು ರಾಜ್ಯಗಳ ಒಂದು ಸಡಿಲ ಸ್ವರೂಪದ ಕೂಟವಾಗಿದ್ದಿತು. ಅದರ ಪ್ರಣಾಳಿಕೆಯ್ಯು ರಾಷ್ಟ್ರ ಸಂಘದ ಉದ್ದೇಶಗಳು ಮತ್ತು ಅಂಗ ರಚನೆಯನ್ನು ವಿವರಿಸುತ್ತದೆ. ರಾಷ್ಟ್ರ ಸಂಘವು ಮೂರು ಅಂಗಗಳನ್ನು ಒಳಗೊಂಡಿದ್ದಿತು. ಅವುಗಳೆಂದರೆ (1) ಮಹಾಸಭೆ (ಅಸೆಂಬ್ಲಿ) (2) ಮಹಾಮಂಡಲಿ (ಕೌನ್ಸಿಲ್) ಮತ್ತು (3) ಸಚಿವಾಲಯ (ಸೆಕ್ರೆಟರಿಯೆಟ್). ಇವುಗಳಲ್ಲಿ ಅಂತರರಾಷ್ಟ್ರೀಯ ಖಾಯಂ ನ್ಯಾಯಾಲಯವು ತನ್ನದೇ ಆದ ಪ್ರಣಾಳಿಕೆಯನ್ನು ಹೊಂದಿದ್ದಿತು. ಅದು ರಾಷ್ಟ್ರ ಸಂಘದ ನ್ಯಾಯಿಕ ಅಂಗವಾಗಿದ್ದಿತು. ಜಾಗತಿಕ ಕಾರ್ಮಿಕ ಸಂಸ್ಥೆಯು ರಾಷ್ಟ್ರ ಸಂಘಕ್ಕೆ ಸೇರಿದ್ದ ಒಂದು ತಜ್ಞ ಶಾಖೆಯಾಗಿದ್ದಿತು. ಇವೆರಡು ಸ್ವಾಯತ್ತ ಅಂಗಗಳಾಗಿದ್ದು, ರಾಷ್ಟ್ರ ಸಂಘದ ಭಾಗಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಜೊತೆಗೆ, ಆರೋಗ್ಯ ಸಂಸ್ಥೆ, ಹಣಕಾಸಿನ ಮತ್ತು ಆರ್ಥಿಕ ಸಮಿತಿ, ಸಂಪರ್ಕ ಮತ್ತು ಸಾರಿಗೆ ಸಂಸ್ಥೆಯಂತಹ ತಾಂತ್ರಿಕ ಸಂಸ್ಥೆಗಳನ್ನು ಸಹ ರಾಷ್ಟ್ರ ಸಂಘದ ಮಹಾಸಭೆ ಮತ್ತು ಮಹಾಮಂಡಲಿಗಳ ರಚನೆ ಮತ್ತು ಕಾರ್ಯಗಳನ್ನು ಮಾತ್ರ ಚರ್ಚಿಸಲಾಗಿದೆ.

## 6.2 ಅಸೆಂಬ್ಲಿ (ಮಹಾಸಭೆ) – ರಚನೆ ಮತ್ತು ಕಾರ್ಯಗಳು

**ರಚನೆ**

ರಾಷ್ಟ್ರ ಸಂಘದ ಮಹಾಸಭೆಯ ರಚನೆಯನ್ನು ಪ್ರಣಾಳಿಕೆಯ 3 ಮತ್ತು 5ನೇ ವಿಧಿಗಳು ವಿವರಿಸುತ್ತವೆ. ರಾಷ್ಟ್ರ ಸಂಘದ ಪ್ರತಿ ಸದಸ್ಯ ರಾಷ್ಟ್ರವೂ ಮಹಾಸಭೆಯ ಸದಸ್ಯತ್ವವನ್ನು ಹೊಂದಿತ್ತು. ಮಹಾಸಭೆಯು ಒಂದು ರೀತಿಯ ಇಂದಿನ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯನ್ನು ಹೋಲುತ್ತಿತ್ತು, ಪ್ರತಿಯೊಂದು ರಾಜ್ಯವು ಮೂವರು ಪ್ರತಿನಿಧಿಗಳ ನಿಯೋಗವನ್ನು ಕಳುಹಿಸಬಹುದಾಗಿತ್ತು. ಆದರೆ ಪ್ರತಿಯೊಂದು ರಾಜ್ಯವು ಒಂದೇ ಮತವನ್ನು ಚಲಾಯಿಸಬಹುದಾಗಿತ್ತು. ಅಧಿವೇಶನವು ಸೆಪ್ಟೆಂಬರ್ ತಿಂಗಳಿನ ಪ್ರಥಮ ಸೋಮವಾರ ಪ್ರಾರಂಭವಾಗುತ್ತಿದ್ದಿತು. ಅಗತ್ಯಕ್ಕನುಗುಣವಾಗಿ ವಿಶೇಷ ಅಧಿವೇಶನಗಳನ್ನು ಕರೆಯಬಹುದಾಗಿತ್ತು. ಅದರ ಅಧಿವೇಶನವು ಬಹಿರಂಗವಾಗಿ ನಡೆಯುತ್ತಿದ್ದವು.

ಮಹಾಸಭೆಯು ತನ್ನ ಅಧ್ಯಕ್ಷರನ್ನು ತಾನೇ ಆರಿಸುತ್ತಿತ್ತು. ತನ್ನ ಕಾರ್ಯವಿಧಾನದ ನಿಯಮಗಳನ್ನು ತಾನೇ ರೂಪಿಸುತ್ತಿತ್ತು, ಅಧ್ಯಕ್ಷನಲ್ಲದೆ ಮಹಾಸಭೆಯು 12 ಮಂದಿ ಉಪಾಧ್ಯಕ್ಷರನ್ನು ಹೊಂದಿತ್ತು. ಸಾಮಾನ್ಯವಾಗಿ ಲೀಗಿನ ಕೌನ್ಸಿಲ್ಲಿನ ಸದಸ್ಯತ್ವ ಹೊಂದಿರದ ಚಿಕ್ಕ ರಾಷ್ಟ್ರದ ಪ್ರತಿನಿಧಿಯೊಬ್ಬನನ್ನು ಅಸೆಂಬ್ಲಿಯ ಅಧ್ಯಕ್ಷನನ್ನಾಗಿ ಆರಿಸುವ ರೂಢಿಯಿತ್ತು. ಕಾರ್ಯವಿಧಾನ

(Procedural) ವಿಷಯಗಳಿಗೆ ಸಂಬಂಧಿಸಿದಂತೆ ತೀರ್ಮಾನಗಳನ್ನು ಸರಳ ಬಹುಮತದಿಂದ ತೆಗೆದುಕೊಳ್ಳಬಹುದಿತ್ತು. ಇತರ ವಿಷಯಗಳಿಗೆ ಸಂಬಂಧಿಸಿದಂತೆ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಗುತ್ತಿತ್ತು.

ಸಾಮಾನ್ಯವಾಗಿ ಅಸೆಂಬ್ಲಿಯು ಆರು ಸ್ಥಾಯಿ ಸಮಿತಿಗಳ ಮೂಲಕ ತನ್ನ ಕಾರ್ಯಗಳನ್ನು ನಿರ್ವಹಿಸುತ್ತಿತ್ತು. ಅವುಗಳೆಂದರೆ (1) ಸಂವಿಧಾನಾತ್ಮಕ ಮತ್ತು ಶಾಸನೀಯ ಸಮಸ್ಯೆಗಳ ಸಮಿತಿ (2) ತಾಂತ್ರಿಕ ಸಂಸ್ಥೆಗಳ ಸಮಿತಿ (3) ಶಸ್ತ್ರಾಸ್ತ್ರಗಳ ಖೋತದ ಸಮಿತಿ (4) ಆಯವ್ಯಯಗಳ ವಿಷಯಗಳ ಸಮಿತಿ (5) ಸಾಮಾಜಿಕ ಮತ್ತು ಮಾನವೀಯ ವಿಷಯಗಳ ಸಮಿತಿ ಮತ್ತು (6) ರಾಜಕೀಯ ಸಮಸ್ಯೆಗಳ ಸಮಿತಿ. ನಿರ್ದಿಷ್ಟ ಉದ್ದೇಶಗಳಿಗಾಗಿ ವಿಶೇಷ ಸಮಿತಿಗಳನ್ನು ನೇಮಿಸಲಾಗುತ್ತಿತ್ತು.

**ಕಾರ್ಯಗಳು**

ರಾಷ್ಟ್ರ ಸಂಘದ ಮಹಾಸಭೆಯು ಕಾರ್ಯಗಳನ್ನು ಚರ್ಚಾಕಾರ್ಯಗಳು, ಚುನಾವಣಾ ಜವಾಬ್ದಾರಿಗಳನ್ನು ಹಾಗೂ ಸಂವಿಧಾಯಿಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದಿತು. ರಾಷ್ಟ್ರ ಸಂಘದ ಅಸೆಂಬ್ಲಿಯು ಪರ್ಯಾಲೋಚನ ಮಂಡಲಿಯಾಗಿದ್ದಿತು. ಅದು ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತಿತ್ತು.

1. ರಾಷ್ಟ್ರ ಸಂಘದ ವ್ಯಾಪ್ತಿಗೆ ಬರುವ ವಿಶ್ವಶಾಂತಿ ಮತ್ತು ಭದ್ರತೆಗೆ ಹಾಗೂ ಅಂತರರಾಷ್ಟ್ರೀಯ ಸಹಕಾರಕ್ಕೆ ಸಂಬಂಧಿಸಿದ ಯಾವ ವಿಷಯದ ಬಗ್ಗೆಯಾದರೂ ಮಹಾಸಭೆಯು ಚರ್ಚಿಸುವ ಅಧಿಕಾರ ಹೊಂದಿದ್ದಿತು. ವಿಶ್ವಶಾಂತಿಗೆ ಮಾರಕವಾಗುವ ಅಂತರರಾಷ್ಟ್ರೀಯ ರಾಜಕೀಯ ಮತ್ತು ಆರ್ಥಿಕ ಬಿಕ್ಕಟ್ಟುಗಳ ಬಗ್ಗೆ ಮಹಾಸಭೆಯು ಚರ್ಚಿಸುತ್ತಿತ್ತು.

2. ಅದು ವಾರ್ಷಿಕ ಆಯವ್ಯಯದ ಬಗ್ಗೆ ಚರ್ಚಿಸಿ ಸಮ್ಮತಿಸುತ್ತಿತ್ತು ಹಾಗೂ ವಿವಿಧ ಸದಸ್ಯ ರಾಷ್ಟ್ರಗಳು ರಾಷ್ಟ್ರ ಸಂಘಕ್ಕೆ ವೆಚ್ಚ ಭರಿಸಲು ಕೊಡಬೇಕಾದ ವಂತಿಗೆಯನ್ನು ನಿರ್ಧರಿಸುತ್ತಿತ್ತು. ಅಲ್ಲದೆ ತನ್ನ ಹಲವಾರು ತಾಂತ್ರಿಕ ಸಂಸ್ಥೆಗಳ ಕಾರ್ಯದ ಮೇಲ್ವಿಚಾರಕವಾಗಿತ್ತು.

3. $^{2}/_{3}$ ಸದಸ್ಯರ ಬಹುಮತದ ನಿರ್ಣಯದಂತೆ ಅಸೆಂಬ್ಲಿಯು ಹೊಸ ರಾಷ್ಟ್ರಗಳನ್ನು ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳೆಂದು ಸೇರಿಸಿಕೊಳ್ಳುವ ಅಧಿಕಾರ ಹೊಂದಿತ್ತು.

4. ಮಹಾಸಮಿತಿಯ (ಕೌನ್ಸಿಲಿನ) ತಾತ್ಕಾಲಿಕ ಸದಸ್ಯರನ್ನು (Non-permanent Members) ಮಹಾಸಭೆಯು ಆಯ್ಕೆ ಮಾಡುತ್ತಿತ್ತು.

5. ಹೊಸದಾಗಿ ಇಂಥವರನ್ನು ಖಾಯಂ ಸದಸ್ಯರನ್ನಾಗಿ ತೆಗೆದುಕೊಳ್ಳಬಹುದೆಂದು ಕೌನ್ಸಿಲ್ ಸೂಚಿಸಿದಾಗ ಅದರ ಬಗ್ಗೆ ಬಹುಮತದ ನಿರ್ಣಯವನ್ನು ತೆಗೆದುಕೊಳ್ಳುವುದು.

6. ಕೌನ್ಸಿಲ್‌ನೊಡನೆ ಅಂತರರಾಷ್ಟ್ರೀಯ ಖಾಯಂ ನ್ಯಾಯಾಲಯದ 15 ನ್ಯಾಯಾಧೀಶರನ್ನು 9 ವರ್ಷಗಳ ಅವಧಿಗೆ ಆಯ್ಕೆ ಮಾಡುವುದು.

7. ಮಹಾಸಭೆಯ ಒಪ್ಪಿಗೆಯೊಡನೆ ಕೌನ್ಸಿಲ್ ರಾಷ್ಟ್ರ ಸಂಘದ ಮಹಾಕಾರ್ಯದರ್ಶಿಯನ್ನು ನೇಮಕ ಮಾಡುತ್ತಿತ್ತು.

8. ಮಹಾಸಮಿತಿಯ ಸದಸ್ಯರ ಒಪ್ಪಿಗೆಯೊಡನೆ ರಾಷ್ಟ್ರ ಸಂಘದ ಪ್ರಣಾಳಿಕೆಯನ್ನು ತಿದ್ದುವ ಅಧಿಕಾರವನ್ನು ಮಹಾಸಭೆಯು ಹೊಂದಿತ್ತು.

9. ಹಳೆಯ ಒಪ್ಪಂದಗಳು ತಮ್ಮ ನಿರ್ದಿಷ್ಟ ಅವಧಿಯನ್ನು ಮೀರಿದ್ದರೆ ಅವುಗಳನ್ನು ನವೀಕರಿಸಲು ಅಸೆಂಬ್ಲಿಯು ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳಿಗೆ ಸಲಹೆ ನೀಡುತ್ತಿತ್ತು.

10. ಅಸೆಂಬ್ಲಿಯು (ಕೌನ್ಸಿಲ್) ತನ್ನ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಸಲಹೆ ಮಾಡಿದಾಗ ಅದರ ಬಗ್ಗೆ ಬಹುಮತದ ನಿರ್ಣಯವನ್ನು ತೆಗೆದುಕೊಳ್ಳುವುದು. ಅದಕ್ಕೆ ಒಪ್ಪಿಗೆ ನೀಡಿದಲ್ಲಿ ಅವರನ್ನು ಆಯ್ಕೆ ಮಾಡುವುದು.

ಅದರ ಸದಸ್ಯರ ಸಂಖ್ಯೆ ಮತ್ತು ಚಟುವಟಿಕೆಗಳ ವ್ಯಾಪ್ತಿಯಿಂದಾಗಿ ಮಹಾಸಮಿತಿಯು ರಾಷ್ಟ್ರ ಸಂಘದ ಅತಿಮುಖ್ಯವಾದ ಅಂಗವಾಗಿದ್ದಿತು.

**ನಿಮ್ಮ ಪ್ರಗತಿ ಪರಿಶೀಲನೆ – 1**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ರಾಷ್ಟ್ರ ಸಂಘದ ಮಹಾಸಭೆಯ ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.**

----------------------------------------------------------------------------

----------------------------------------------------------------------------

----------------------------------------------------------------------------

----------------------------------------------------------------------------

## 6.3 ಮಹಾಮಂಡಲಿ (ಕೌನ್ಸಿಲ್) – ರಚನೆ ಮತ್ತು ಕಾರ್ಯಗಳು

ಮಹಾಮಂಡಲಿಯು (ಕೌನ್ಸಿಲ್) ರಾಷ್ಟ್ರ ಸಂಘದ ಕಾರ್ಯಾಂಗವಾಗಿದ್ದಿತು. ಈಗಿನ ವಿಶ್ವಸಂಸ್ಥೆಯ ಭದ್ರತಾ ಸಮಿತಿಯನ್ನು ರಾಷ್ಟ್ರ ಸಂಘದ ಮಹಾಮಂಡಲಿಯು ಹೋಲುತ್ತಿತ್ತು. ಮಹಾಮಂಡಲಿಯು ಐದು ಖಾಯಂ ಸದಸ್ಯರನ್ನು ಮತ್ತು ನಾಲ್ಕು ಶಾಶ್ವತವಲ್ಲದ ಸದಸ್ಯರನ್ನು ಹೊಂದಿದ್ದಿತು. ಐದು ಶಾಶ್ವತ ಸದಸ್ಯರೆಂದರೆ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಇಟಲಿ ಮತ್ತು ಜಪಾನ್. ಆದರೆ ಅಮೆರಿಕ ರಾಷ್ಟ್ರ ಸಂಘಕ್ಕೆ ಸೇರಲಿಲ್ಲವಾದ್ದರಿಂದ ಕೌನ್ಸಿಲ್‌ನ ಖಾಯಂ ಸದಸ್ಯರ ಸಂಖ್ಯೆ ನಾಲ್ಕಕ್ಕೆ ಇಳಿಯಿತು. ಹೀಗೆ ಮಹಾಮಂಡಲಿಯ ಒಟ್ಟು ಸದಸ್ಯರ ಸಂಖ್ಯೆ ಎಂಟಾಯಿತು.

ರಾಷ್ಟ್ರ ಸಂಘದ ಪ್ರಣಾಳಿಕೆಯ 4(2) ನೇ ವಿಧಿಯ ಮೂಲಕ, ಅಸೆಂಬ್ಲಿಯ ಅನುಮತಿಯ ಮೇರೆಗೆ ಕೌನ್ಸಿಲಿನ ಶಾಶ್ವತ ಮತ್ತು ಶಾಶ್ವತವಲ್ಲದ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಅವಕಾಶ ಮಾಡಿಕೊಡಲಾಗಿತ್ತು. ಈ ಅಧಿಕಾರದ ಮೇರೆಗೆ 1926ರಲ್ಲಿ ಜರ್ಮನಿಗೂ ಮತ್ತು 1934ರಲ್ಲಿ ರಷ್ಯಕ್ಕೂ ಕೌನ್ಸಿಲಿನ ಶಾಶ್ವತವಲ್ಲದ ಸದಸ್ಯ ರಾಷ್ಟ್ರಗಳ ಸಂಖ್ಯೆ ಹನ್ನೊಂದಕ್ಕೆ ಏರಿತು. ಕೌನ್ಸಿಲಿನ ಶಾಶ್ವತವಲ್ಲದ ಸದಸ್ಯರನ್ನು ಮೂರು ವರ್ಷಗಳ ಅವಧಿಗಾಗಿ ಮಹಾಸಭೆಯಿಂದ ಆಯ್ಕೆ ಮಾಡಲಾಗುತ್ತಿತ್ತು. ವಿಶೇಷ ಸದಸ್ಯರಿಗೂ ಕೌನ್ಸಿಲ್‌ನಲ್ಲಿ ಅವಕಾಶ ಮಾಡಿಕೊಡಲಾಗಿತ್ತು. ಹೀಗಾಗಿ ಕೌನ್ಸಿಲ್ ಮೂರು ವರ್ಗದ ಸದಸ್ಯರನ್ನು ಹೊಂದಿದ್ದಿತು, – ಖಾಯಂ ಸದಸ್ಯರು, ಖಾಯಂ ಅಲ್ಲದ ಸದಸ್ಯರು ಮತ್ತು ವಿಶೇಷ ಸದಸ್ಯರು.

ರಾಷ್ಟ್ರ ಸಂಘದ ಕೌನ್ಸಿಲ್ ಸಾಮಾನ್ಯವಾಗಿ ವರ್ಷಕ್ಕೆ ಮೂರು ಸಾರಿ ಸಭೆ ಸೇರುತ್ತಿತ್ತು. ಅಗತ್ಯಕ್ಕನುಗುಣವಾಗಿ ಸದಸ್ಯರ ಕೋರಿಕೆಯ ಮೇರೆಗೆ ವಿಶೇಷ ಅಧಿವೇಶನಗಳನ್ನು ಅವಕಾಶವಿತ್ತು. ಮಹಾಸಮಿತಿಯ (ಕೌನ್ಸಿಲ್) ಪ್ರತಿಯೊಂದು ಸದಸ್ಯ ರಾಷ್ಟ್ರವು ಓರ್ವ ಪ್ರತಿನಿಧಿಯನ್ನು ಕಳುಹಿಸಬಹುದಾಗಿದ್ದಿತು, ಹಾಗೂ ಕೇವಲ ಒಂದು ಓಟನ್ನು ಹೊಂದಿದ್ದಿತು. ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಕೆಲವು ವಿಷಯುಗಳಿಗೆ ಸರ್ವಾನುಮತವೂ, ಕೆಲವಕ್ಕೆ ಸರಳ ಬಹುಮತವೂ

ಅವಶ್ಯಕವಾಗಿತ್ತು. ಕೌನ್ಸಿಲ್ ಚರ್ಚಿಸುತ್ತಿದ್ದ ವಿಷಯವು ಕೌನ್ಸಿಲಿನ ಸದಸ್ಯನಲ್ಲದ ರಾಷ್ಟ್ರಕ್ಕೆ ಸಂಬಂಧಿಸಿದಾಗ ಅಂತಹ ರಾಷ್ಟ್ರವನ್ನು ಚರ್ಚೆಯಲ್ಲಿ ಭಾಗವಹಿಸಲು ಅಗತ್ಯವಾಗಿ ಆಹ್ವಾನಿಸಲಾಗುತ್ತಿತ್ತು. ಕೌನ್ಸಿಲಿನ ಸದಸ್ಯರಿಂದಲೇ ಆಯ್ಕೆಯಾದ ಓರ್ವ ಅಧ್ಯಕ್ಷನು ಕೌನ್ಸಿಲಿನ ಸಭೆಗಳ ಅಧ್ಯಕ್ಷತೆ ವಹಿಸುತ್ತಿದ್ದನು. ವಿಶ್ವಶಾಂತಿ ಮತ್ತು ಭದ್ರತೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಕೌನ್ಸಿಲ್ ಚರ್ಚಿಸಬಹುದಿತ್ತು.

**ಮಹಾಮಂಡಲಿ (ಕೌನ್ಸಿಲಿನ) ಕಾರ್ಯಗಳು**

ರಾಷ್ಟ್ರ ಸಂಘದ ಕೌನ್ಸಿಲಿನ ಕಾರ್ಯಗಳು ಬಹುಮುಖವಾಗಿದ್ದವು. ರಾಷ್ಟ್ರ ಸಂಘದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಯಗಳನ್ನು ಕೌನ್ಸಿಲ್ ನಿರ್ವಹಿಸುತ್ತಿತ್ತು. ಇದಲ್ಲದೆ ಕೌನ್ಸಿಲ್ ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತಿತ್ತು.

1. ವಿಶ್ವಶಾಂತಿಗೆ ಭಂಗವನ್ನುಂಟು ಮಾಡುವ ಸನ್ನಿವೇಶಗಳನ್ನು ತಡೆಗಟ್ಟಲು ಅಗತ್ಯ ಕ್ರಮಕೈಗೊಳ್ಳುವುದು.
2. ತಮ್ಮ ಮತ್ತು ತಮ್ಮ ನೆರೆಯ ರಾಷ್ಟ್ರಗಳ-ಪ್ರದೇಶಗಳ ಮೇಲೆ ದಾಳಿಯಾದಾಗ ಅಥವಾ ಅವುಗಳ ಸ್ವಾತಂತ್ರ್ಯಹರಣವಾದಾಗ ಶಾಂತಿಯನ್ನು ಕಾಪಾಡುವ ಕ್ರಮಗಳ ಬಗ್ಗೆ ಸದಸ್ಯ ರಾಷ್ಟ್ರಗಳಿಗೆ ಸಲಹ ಸೂಚನೆಗಳನ್ನು ಕೊಡುವುದು.
3. ರಾಷ್ಟ್ರ ಸಂಘದ ಪ್ರಣಾಳಿಕೆಯನ್ನು (ಒಡಂಬಡಿಕೆಯನ್ನು) ಉಲ್ಲಂಘಿಸಿದ ಸದಸ್ಯ ರಾಷ್ಟ್ರಗಳ ಸದಸ್ಯತ್ವವನ್ನು ರದ್ದುಗೊಳಿಸುವುದು.
4. ನಿಶಸ್ತ್ರೀಕರಣದ ಬಗ್ಗೆ ಯೋಜನೆಗಳನ್ನು ತಯಾರಿಸುವುದು.
5. ಭೌಗೋಳಿಕ ಸ್ಥಾನ ಮತ್ತು ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರಗಳ ನಿಶಸ್ತ್ರೀಕರಣ ಯೋಜನೆಗಳನ್ನು ರೂಪಿಸುವುದು.
6. ಕೌನ್ಸಿಲಿಗೆ ವಿಶೇಷ ಶಾಶ್ವತ ಸದಸ್ಯರನ್ನು ನೇಮಿಸುವುದು.
7. ಸದಸ್ಯ ರಾಷ್ಟ್ರಗಳಿಗೆ ಖಾಸಗಿ ಸಂಸ್ಥೆಗಳ ಶಸ್ತ್ರಾಸ್ತ್ರಗಳ ತಯಾರಿಕೆಯಿಂದ ಅವುಗಳಿಗೆ ಆಗಬಹುದಾದ ಅನಾಹುತಗಳನ್ನು ತಿಳಿಸಿ ಹೇಳುವುದು ಮತ್ತು ಶಸ್ತ್ರಾಸ್ತ್ರಗಳನ್ನು ತಯಾರಿಸದಿದ್ದ ರಾಷ್ಟ್ರಗಳ ರಕ್ಷಣೆಗಾಗಿ ವಿಶೇಷ ಗಮನಹರಿಸುವುದು.
8. ನಿಯೋಜಿತ ಅಥವಾ ಮ್ಯಾಂಡೇಟ್ ಪ್ರದೇಶಗಳ ಮೇಲೆ ಅವುಗಳ ಆಡಳಿತವನ್ನು ನಡೆಸುವ ರಾಷ್ಟ್ರಗಳಿಗೆ ಇರಬೇಕಾದ ಅಧಿಕಾರಗಳನ್ನು ನಿರ್ಧರಿಸುವುದು.
9. ರಾಷ್ಟ್ರ ಸಂಘದ ಸಚಿವಾಲಯ ಹೇಗೆ ಕೆಲಸ ಮಾಡಬೇಕು ಮತ್ತು ಅದು ಹೇಗೆ ಲೀಗಿನ ಇತರ ಅಂಗ ಸಂಸ್ಥೆಗಳ ಕಾರ್ಯಗಳ ಬಗ್ಗೆ ವರದಿಗಳನ್ನು ಪಡೆಯಬೇಕು ಎಂಬುದನ್ನು ತಿಳಿಸುವುದು. ಒಟ್ಟಾರೆ ಸಚಿವಾಲಯದ ಕಾರ್ಯದಲ್ಲಿ ಮಾರ್ಗದರ್ಶನ ಮಾಡುವುದು.
10. ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ಸಂಘಟಿಸುವುದು.
11. ರಾಷ್ಟ್ರ ಸಂಘದ ಸದಸ್ಯ-ರಾಷ್ಟ್ರಗಳಲ್ಲಿ ವಿವಾದಗಳನ್ನು ಪರಿಶೀಲಿಸುವುದು.
12. ರಾಷ್ಟ್ರಸಂಘದ ಪ್ರಧಾನ ಕಾರ್ಯದರ್ಶಿಯ ನೇಮಕವನ್ನು ದೃಢೀಕರಿಸುವುದು.

**ನಿಮ್ಮ ಪ್ರಗತಿ ಪರಿಶೀಲನೆ – 2**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ಮಹಾಮಂಡಲಿಯ ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.**

--------------------------------------------------------------------------------

--------------------------------------------------------------------------------

--------------------------------------------------------------------------------

--------------------------------------------------------------------------------

## 6.4 ಸಾರಾಂಶ

ಈ ಘಟಕದಲ್ಲಿ ರಾಷ್ಟ್ರ ಸಂಘದ ಮಹಾಸಭೆ (ಅಸೆಂಬ್ಲಿ) ಮತ್ತು ಮಹಾಮಂಡಲಿ (ಕೌನ್ಸಿಲ್) ರಚನೆ ಮತ್ತು ಕಾರ್ಯಗಳನ್ನು ಚರ್ಚಿಸಿದ್ದೇವೆ. ಅಸೆಂಬ್ಲಿಯು ರಾಷ್ಟ್ರ ಸಂಘದ ಶಾಸಕಾಂಗವಾದರೆ, ಕೌನ್ಸಿಲ್ ಅದರ ಕಾರ್ಯಾಂಗ ಎನ್ನಬಹುದು. ಅಸೆಂಬ್ಲಿಯು ಈಗಿನ ವಿಶ್ವಸಂಸ್ಥೆಯ ಮಹಾಸಭೆಯನ್ನು ಮತ್ತು ಕೌನ್ಸಿಲ್ ಈಗಿನ ವಿಶ್ವಸಂಸ್ಥೆಯ ಭದ್ರತಾ ಸಮಿತಿಯನ್ನು ಹೋಲುತ್ತಿದ್ದವು.

## 6.5 ಕಠಿಣ ಪದಗಳು

**ಪರ್ಯಾಲೋಚಕ ಕಾರ್ಯ** – ಚರ್ಚಾ ಕಾರ್ಯ

**ಪ್ರಣಾಳಿಕೆ** – ಲೀಗಿನ ಒಡಂಬಡಿಕೆ

## 6.5 ಕಠಿಣ ಪದಗಳು

| | | |
|---|---|---|
| **ಪ್ರೊ. ಎನ್. ಹಾಲಪ್ಪ** | : | *ಅಂತರರಾಷ್ಟ್ರೀಯ ಸಂಬಂಧಗಳು* |
| **ಡಾ. ಟಿ.ಡಿ. ದೇವೇಗೌಡ** | : | *ಅಂತರರಾಷ್ಟ್ರೀಯ ಸಂಬಂಧಗಳು* |
| **ಸ್ಲೀಚರ್** | : | *ಇಂಟರ್‌ನ್ಯಾಷನಲ್ ರಿಲೇಷನ್ಸ್* |
| **ಮಾಲಿಮದ್ದಣ್ಣ** | : | *ಅಂತರರಾಷ್ಟ್ರೀಯ ಸಂಬಂಧಗಳು* |

## 6.6 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

**ನಿಮ್ಮ ಪ್ರಗತಿ ಪರಿಶೀಲನೆ – 1**

1. ನೋಡಿ ವಿಭಾಗ 6.2

**ನಿಮ್ಮ ಪ್ರಗತಿ ಪರಿಶೀಲನೆ – 2**

1. ನೋಡಿ ವಿಭಾಗ 6.3

# ಘಟಕ – 7 : ಕಾರ್ಯಾಲಯ – ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯ

**ರಚನೆ**

7.0 ಉದ್ದೇಶಗಳು

7.1 ಪೀಠಿಕೆ

7.2 ಲೀಗಿನ ಸಚಿವಾಲಯ – ರಚನೆ ಮತ್ತು ಕಾರ್ಯಗಳು

7.3 ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯ – ರಚನೆ ಮತ್ತು ಅಧಿಕಾರ ವ್ಯಾಪ್ತಿ

7.4 ಸಾರಾಂಶ

7.5 ಕಠಿಣ ಪದಗಳು

7.6 ಕೆಲವು ಉಪಯುಕ್ತ ಪುಸ್ತಕಗಳು

7.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 7.0 ಉದ್ದೇಶಗಳು

ಈ ಘಟಕದ ಉದ್ದೇಶವೆಂದರೆ ಲೀಗಿನ ಸಚಿವಾಲಯದ ರಚನೆ ಹಾಗೂ ಅಧಿಕಾರ ಮತ್ತು ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯದ ರಚನೆ ಹಾಗೂ ಅದರ ಅಧಿಕಾರ ವ್ಯಾಪ್ತಿಯನ್ನು ನಿಮಗೆ ವಿವರಿಸುವುದೇ ಆಗಿದೆ. ಈ ಘಟಕದ ಸಂಪೂರ್ಣದ ಅಧ್ಯಯನದ ನಂತರ ನೀವು ಈ ಕೆಳಗಿನವುಗಳನ್ನು ಉತ್ತರಿಸಬಲ್ಲಿರಿ :

- ಲೀಗಿನ ಸಚಿವಾಲಯದ (ಕಾರ್ಯಾಲಯದ) ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.
- ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯದ ರಚನೆ ಮತ್ತು ಅದರ ಅಧಿಕಾರ ವ್ಯಾಪ್ತಿಯನ್ನು ಚರ್ಚಿಸಿ.

## 7.1 ಪೀಠಿಕೆ

ರಾಷ್ಟ್ರ ಸಂಘದ ಸಚಿವಾಲಯವು ನಿಜವಾಗಿಯೂ ಪ್ರಥಮ ಅಂತರರಾಷ್ಟ್ರೀಯ ನಾಗರಿಕ ಸೇವಾ ವರ್ಗವಾಗಿದ್ದರೆ, ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯವು ಪ್ರಥಮ ವಿಶ್ವವ್ಯಾಪಕ ಅಂತರರಾಷ್ಟ್ರೀಯ ನ್ಯಾಯಿಕ ಮಂಡಲಿಯಾಗಿದ್ದಿತು. ರಾಷ್ಟ್ರ ಸಂಘವು ಒಂದು ಶಾಶ್ವತ ಸಚಿವಾಲಯವನ್ನು (ಕಾರ್ಯಾಲಯವನ್ನು) ಹೊಂದಿರಬೇಕೆಂಬುದು ಪ್ಯಾರಿಸ್ ಸಮ್ಮೇಳನದಲ್ಲಿ ಸಾಮಾನ್ಯ ಒಪ್ಪಂದಕ್ಕೆ ಬರಲಾಗಿದ್ದಿತು. ರಾಷ್ಟ್ರ ಸಂಘದ ಪ್ರಥಮ ಮಹಾಕಾರ್ಯದರ್ಶಿಯಾಗಿ ನೇಮಕಗೊಂಡ ಸರ್ ಎರ್ರಿಕ್ ಡ್ರಮಾಂಡ್ ಅವರು ಮುಂದೆ ಲೀಗ್ ಹೊಂದಿರಬೇಕಾದ ಸಚಿವಾಲಯದ ವ್ಯವಸ್ಥೆಗೆ ಸಮ್ಮೇಳನದ ಒಪ್ಪಿಗೆಯನ್ನು ಪಡೆದರು. ಹೀಗೆ ಸಚಿವಾಲಯವು ಪ್ರಥಮ ಅಂತರರಾಷ್ಟ್ರೀಯ ನಾಗರಿಕ ಸೇವೆ ಎನಿಸಿತು. ಹಾಗೆಯೇ ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯವು ಸ್ವಾಯತ್ತತೆ ಪಡೆದ ಒಂದು ನ್ಯಾಯಿಕ ಮಂಡಲಿ ಎನಿಸಿತು. ಈ ಪೀಠಿಕೆಯೊಂದಿಗೆ ಮುಂದಿನ ಭಾಗದಲ್ಲಿ ಲೀಗಿನ ಸಚಿವಾಲಯದ ರಚನೆ ಮತ್ತು ಕಾರ್ಯಗಳು ಹಾಗೂ ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯದ ರಚನೆ ಮತ್ತು ಅದರ ಅಧಿಕಾರ ವ್ಯಾಪ್ತಿಯನ್ನು ಚರ್ಚಿಸೋಣ.

## 7.2 ಲೀಗಿನ ಸಚಿವಾಲಯ – ರಚನೆ ಮತ್ತು ಕಾರ್ಯಗಳು

**ರಚನೆ**

ಸಚಿವಾಲಯವು ಲೀಗಿನ ಶಾಶ್ವತ ಆಡಳಿತ ಅಂಗವಾಗಿದ್ದಿತು. ಲೀಗ್ ಪ್ರಣಾಳಿಕೆಯ 6ನೇ ಪರಿಚ್ಛೇದವು ಸಚಿವಾಲಯದ ಬಗ್ಗೆ ತಿಳಿಸುತ್ತದೆ. ಸಚಿವಾಲಯದ ಪ್ರಧಾನ ಕಛೇರಿ ಸ್ವಿಜರ್ಲೆಂಡಿನ ಜಿನೆವಾ ನಗರದಲ್ಲಿ ಸ್ಥಾಪಿತವಾಗಿದ್ದಿತು. ಮಹಾಕಾರ್ಯದರ್ಶಿಯು ಸಚಿವಾಲಯದ ಮುಖ್ಯಸ್ಥನು. ಈತನಿಗೆ ಸಹಾಯಕರಾಗಿ ಉಪಮಹಾಕಾರ್ಯದರ್ಶಿಗಳಿರುತ್ತಿದ್ದರು. ಅಗತ್ಯಕ್ಕೆ ತಕ್ಕಂತೆ ಸಚಿವಾಲಯವು ಕಾರ್ಯದರ್ಶಿಗಳನ್ನು ಮತ್ತು ಇತರ ಸಿಬ್ಬಂದಿಯನ್ನು ಹೊಂದಿದ್ದಿತು. ಸಚಿವಾಲಯದ ಮುಖ್ಯಸ್ಥನಾದ ಮಹಾಕಾರ್ಯದರ್ಶಿಯನ್ನು ಲೀಗಿನ ಮಹಾಸಭೆಯ ಸಮ್ಮತಿಯೊಂದಿಗೆ ಮಹಾಸಮಿತಿಯ ಸಮ್ಮತಿಯ ಮೇರೆಗೆ ಮಹಾಕಾರ್ಯದರ್ಶಿಯನ್ನು ಲೀಗಿನ ಮಹಾಸಭೆಯ ಸಮ್ಮತಿಯೊಂದಿಗೆ ಮಹಾಸಮಿತಿಯು (ಕೌನ್ಸಿಲ್) ನೇಮಿಸುತ್ತಿತ್ತು. ಲೀಗಿನ ಮಹಾಸಮಿತಿಯ ಸಮ್ಮತಿಯ ಮೇರೆಗೆ ಮಹಾಕಾರ್ಯದರ್ಶಿಯು, ಕಾರ್ಯದರ್ಶಿ ಹಾಗೂ ಇತರ ಸಿಬ್ಬಂದಿ ವರ್ಗದವರನ್ನು ನೇಮಿಸುತ್ತಿದ್ದನು. ಅಧಿಕಾರಿಗಳ ನೇಮಕ ಮಾಡುವಾಗ, ವಿಶ್ವದ ಎಲ್ಲಾ ಭಾಗಗಳಿಂದ ಅವರ ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು. ರಾಷ್ಟ್ರ ಸಂಘದ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾಗ, ಅವರುಗಳು ಹಲವಾರು ವಿಶೇಷ ಸೌಲಭ್ಯಗಳನ್ನು ಹಾಗೂ ವಿನಾಯಿತಿಗಳನ್ನು ಹೊಂದಿರುತ್ತಿದ್ದರು. ರಾಷ್ಟ್ರ ಸಂಘದ ಕಟ್ಟಡ ಮತ್ತು ಆಸ್ತಿಯನ್ನು ಯಾವ ರಾಜ್ಯವು ವಶಪಡಿಸಿಕೊಳ್ಳುವಂತಿರಲಿಲ್ಲ. ಮಹಾಸಭೆಯ ಮತ್ತು ಮಹಾಸಮಿತಿಯ ಕಾರ್ಯಕಲಾಪವನ್ನು ಸಚಿವಾಲಯ ಸಿದ್ಧಗೊಳಿಸುತ್ತಿತ್ತು. ಕಲಾಪಗಳ ವಿವರಗಳನ್ನು ಸಚಿವಾಲಯವು ಟಿಪ್ಪಣಿ ಮಾಡಿಕೊಳ್ಳುತ್ತಿತ್ತು. ಸಚಿವಾಲಯವನ್ನು ಅನೇಕ ಭಾಗಗಳಾಗಿ ವಿಂಗಡಿಸಲಾಗಿತ್ತು. ಒಂದೊಂದಕ್ಕೂ ಒಂದೊಂದು ವಿಶೇಷ ಕಾರ್ಯವನ್ನು ವಹಿಸಲಾಗಿತ್ತು. ಸಚಿವಾಲಯದ ವೆಚ್ಚವನ್ನು

ಸದಸ್ಯ ರಾಷ್ಟ್ರಗಳ ವಂತಿಗೆಯಿಂದ ಭರಿಸಲಾಗುತ್ತಿತ್ತು. ಲೀಗಿನ ಮಹಾಸಭೆ ಮತ್ತು ಮಹಾಸಮಿತಿಯು ನಿಗದಿತ ಕಾಲಕ್ಕೆ ಮಾತ್ರ ಸಭೆ ಸೇರುತ್ತಿದ್ದರೆ, ಸಚಿವಾಲಯವು ವರ್ಷಪೂರ್ತಿ ಕಾರ್ಯನಿರ್ವಹಿಸುತ್ತಿತ್ತು.

**ಕಾರ್ಯಗಳು**

ಲೀಗಿನ ಸಚಿವಾಲಯವು ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತಿತ್ತು.

1. ರಾಷ್ಟ್ರಸಂಘದ ವಿವಿಧ ಅಂಗ ಸಂಸ್ಥೆಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದು.
2. ರಾಷ್ಟ್ರಸಂಘದ ಎಲ್ಲ ಅಂಗಸಂಸ್ಥೆಗಳ ಕೆಲಸ ಕಾರ್ಯಗಳು ನಿಲ್ಲದಂತೆ ಮತ್ತು ಅವು ಒಂದೇ ಸಮನೆ ನಡೆಯುವಂತೆ ನೋಡಿಕೊಳ್ಳುವುದು ಮತ್ತು ಅವು ಮಾಡಿದ ಕೆಲಸಗಳನ್ನು ಆಗಾಗ್ಗೆ ಮೇಲ್ವಿಚಾರಣೆ ಮಾಡುವುದು.
3. ರಾಷ್ಟ್ರ ಸಂಘ ಮತ್ತು ಅದರ ಎಲ್ಲ ಅಂಗ ಸಂಸ್ಥೆಗಳು ಮಾಡಿದ ಕಾರ್ಯಗಳ ದಾಖಲೆಗಳನ್ನು ಇಡುವುದು.
4. ರಾಷ್ಟ್ರ ಸಂಘದ ಸದಸ್ಯರಿಗೆ ಮತ್ತು ಅಂಗ ಸಂಸ್ಥೆಗಳಿಗೆ ಬೇಕಾದ ಮಾಹಿತಿ ಮತ್ತು ಅದರ ವಿಶ್ಲೇಷಣೆಯನ್ನು ಪೂರೈಸುವುದು.
5. ಅಂತರರಾಷ್ಟ್ರೀಯ ಕರಾರುಗಳನ್ನು ಮತ್ತು ರಾಷ್ಟ್ರಸಂಘದ ಸದಸ್ಯ ರಾಷ್ಟ್ರಗಳ ಮಧ್ಯೆ ಆದ ಒಪ್ಪಂದಗಳನ್ನು ನೋಂದಾಯಿಸುವುದು.
6. ರಾಷ್ಟ್ರ ಸಂಘದ ವಿವಿಧ ಅಂಗಗಳ ಸಭೆಯನ್ನು ಕರೆಯಲು ವ್ಯವಸ್ಥೆ ಮಾಡುವುದು.
7. ರಾಷ್ಟ್ರಗಳ ನಡುವಿನ ವಿವಾದಗಳನ್ನು ಬಗೆಹರಿಸುವಲ್ಲಿ ಮತ್ತು ರಾಷ್ಟ್ರ ಸಂಘ ತನ್ನ ಧೋರಣೆಗಳನ್ನು ರೂಪಿಸುವಲ್ಲಿ ಅದಕ್ಕೆ ಸಹಾಯ ಮಾಡುವುದು.
8. ರಾಷ್ಟ್ರ ಸಂಘದ ಮಹಾಸಭೆಗೂ ಮತ್ತು ಮಹಾಸಮಿತಿಗೂ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವುದು.

ಸಮನ್ವಯ ಸ್ವರೂಪದ ಕಾರ್ಯಗಳನ್ನು ನಿರ್ವಹಿಸಲು ವಿಶ್ವಸಂಸ್ಥೆಗಿರುವಂತೆ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯಂತಹ ಒಂದು ಅಂಗ ರಾಷ್ಟ್ರ ಸಂಘವು ಹೊಂದಿದ್ದಿಲ್ಲದ ಕಾರಣ, ಲೀಗಿನ ಸಚಿವಾಲಯದ ಕಾರ್ಯವು ವಿಶೇಷ ಮಹತ್ವ ಪಡೆದಿತ್ತು. ಒಂದು ಅರ್ಥದಲ್ಲಿ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿ ಸಮಿತಿಯ ಪಾತ್ರವನ್ನು ಲೀಗಿನ ಸಚಿವಾಲಯವು ನಿರ್ವಹಿಸುತ್ತಿತ್ತು ಎಂದು ಹೇಳಬಹುದು.

**ನಿಮ್ಮ ಪ್ರಗತಿ ಪರಿಶೀಲನೆ – 1**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ರಾಷ್ಟ್ರ ಸಂಘದ ಸಚಿವಾಲಯದ ರಚನೆ ಮತ್ತು ಕಾರ್ಯಗಳನ್ನು ಚರ್ಚಿಸಿ.**

--------------------------------------------------------------------

--------------------------------------------------------------------

--------------------------------------------------------------------

--------------------------------------------------------------------

## 7.3 ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯ – ರಚನೆ ಮತ್ತು ಅಧಿಕಾರ ವ್ಯಾಪ್ತಿ

**ರಚನೆ**

ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯವು ರಾಷ್ಟ್ರ ಸಂಘದ ನ್ಯಾಯಿಕ ಅಂಗವಾಗಿದ್ದಿತು. ಈ ನ್ಯಾಯಾಲಯವನ್ನು ಲೀಗ್ ಪ್ರಣಾಳಿಕೆಯ 14ನೇ ಪರಿಚ್ಛೇದದಡಿಯಲ್ಲಿ ಸ್ಥಾಪಿಸಲಾಗಿದೆ. ರಾಷ್ಟ್ರ ಸಂಘದ ಮಹಾಸಮಿತಿಯು (ಕೌನ್ಸಿಲ್) ಜಾಗತಿಕ ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ ಒಂದು ಯೋಜನೆಯನ್ನು ತಯಾರಿಸಿ ಅದನ್ನು ರಾಷ್ಟ್ರ ಸಂಘಕ್ಕೆ ಒಪ್ಪಿಸಬೇಕೆಂದು ಆ ಪರಿಚ್ಛೇದದಲ್ಲಿ ತಿಳಿಸಲಾಗಿತ್ತು. ಅದರ ಪ್ರಕಾರ 1920ರಲ್ಲಿ ಲೀಗಿನ ಕೌನ್ಸಿಲ್ ಪ್ರಸಿದ್ಧ ನ್ಯಾಯವಾದಿಗಳನ್ನೊಳಗೊಂಡ ಒಂದು ಆಯೋಗವನ್ನು ನೇಮಿಸಿತು. ಈ ಆಯೋಗವು ಜಾಗತಿಕ ನ್ಯಾಯಾಲಯದ ಸ್ಥಾಪನೆಗೆ ಒಂದು ಕರಡನ್ನು ಸಿದ್ಧಪಡಿಸಿ ರಾಷ್ಟ್ರ ಸಂಘಕ್ಕೆ ಒಪ್ಪಿಸಲಾಯಿತು. ಲೀಗಿನ ಮಹಾಸಭೆ ಮತ್ತು ಮಹಾಸಮಿತಿಗಳೆರಡೂ ಈ ಕರಡನ್ನು 1920ರ ಡಿಸೆಂಬರ್ ತಿಂಗಳಿನಲ್ಲಿ ಮಾನ್ಯ ಮಾಡಿದವು (ಅಂಗೀಕರಿಸಿದವು). ನಂತರ 1922ರ ಫೆಬ್ರವರಿ 15ನೇ ದಿನಾಂಕದಂದು ದಿಹೇಗ್ ನಗರದ ಶಾಂತಿ ಅರಮನೆಯ ದೊಡ್ಡ ಸಭಾಂಗಣದಲ್ಲಿ ಅಸ್ತಿತ್ವಕ್ಕೆ ಬಂದಿತು.

ಪ್ರಾರಂಭದಲ್ಲಿ ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯವು 11 ನ್ಯಾಯಾಧೀಶರನ್ನೂ ಮತ್ತು 4 ಉಪನ್ಯಾಯಾಧೀಶರನ್ನೂ ಹೊಂದಿತ್ತು. 1930 ರಲ್ಲಿ ಒಂದು ತಿದ್ದುಪಡಿಯ ಮೂಲಕ ನ್ಯಾಯಾಧೀಶರ ಸಂಖ್ಯೆಯನ್ನು 15ಕ್ಕೆ ಹೆಚ್ಚಿಸಲಾಯಿತು. 1936ರಲ್ಲಿ ಉಪ–ನ್ಯಾಯಾಧೀಶರ ಹುದ್ದೆಗಳನ್ನು ರದ್ದುಪಡಿಸಲಾಯಿತು. ಈ ನ್ಯಾಯಾಲಯದ ಎಲ್ಲಾ ನ್ಯಾಯಾಧೀಶರನ್ನು 9 ವರ್ಷಗಳ ಅವಧಿಗೆ ಮಹಾಸಭೆ ಮತ್ತು ಮಹಾಸಮಿತಿಗಳಿಂದ ಆಯ್ಕೆ ಮಾಡಲಾಗುತ್ತಿತ್ತು. ಜಾಗತಿಕ ನ್ಯಾಯಾಲಯದ ನ್ಯಾಯಾಧೀಶರನ್ನು ಸಾಮಾನ್ಯವಾಗಿ ಬೇರೆ ಬೇರೆ ದೇಶಗಳಿಂದ ಆಯ್ದುಕೊಳ್ಳಲಾಗುತ್ತಿತ್ತು. ಹೀಗಾಗಿ ಜಾಗತಿಕ ನ್ಯಾಯಾಲಯವು ನಿಜವಾಗಿಯೂ ಅಂತರರಾಷ್ಟ್ರೀಯ ನ್ಯಾಯಾಲಯವಾಗಿತ್ತು.

**ಜಾಗತಿಕ ನ್ಯಾಯಾಲಯದ ಅಧಿಕಾರವ್ಯಾಪ್ತಿ**

ರಾಷ್ಟ್ರ ಸಂಘದ ಪ್ರಣಾಳಿಕೆಯ 14ನೇ ವಿಧಿಯು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಬಗ್ಗೆ ತಿಳಿಸುತ್ತದೆ. ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳು ತಮ್ಮಲ್ಲಿರುವ ನ್ಯಾಯ ಸಂಬಂಧಿತ ವಿವಾದಗಳನ್ನು ಜಾಗತಿಕ ನ್ಯಾಯಾಲಯದ ತೀರ್ಮಾನಕ್ಕಾಗಿ ಸಲ್ಲಿಸಬಹುದಾಗಿತ್ತು. ಅಂತಹ ವಿವಾದಗಳನ್ನು ಜಾಗತಿಕ ನ್ಯಾಯಾಲಯ ವಿಚಾರಣೆ ನಡೆಸಿ ತೀರ್ಪನ್ನು ಕೊಡುತ್ತಿತ್ತು. ಅಂತರರಾಷ್ಟ್ರೀಯ ಒಪ್ಪಂದಗಳಲ್ಲಿದ್ದ ನ್ಯಾಯ ಸಂಬಂಧಿತ ವಿಷಯಗಳೂ ಸಹ ಜಾಗತಿಕ ನ್ಯಾಯಾಲಯದ ಕಾರ್ಯವ್ಯಾಪ್ತಿಗೆ ಬರುತ್ತಿದ್ದವು.

ಇದಲ್ಲದೆ, ಜಾಗತಿಕ ನ್ಯಾಯಾಲಯವು ಅಂತರರಾಷ್ಟ್ರೀಯ ಕಾನೂನಿನ ವ್ಯಾಖ್ಯಾನ (ಅರ್ಥ ವಿವರಣೆ) ಕೊಡುತ್ತಿತ್ತು ಮತ್ತು ಅಂತರರಾಷ್ಟ್ರೀಯ ಒಪ್ಪಂದಗಳ ಹಾಗೂ ದ್ವಿಪಕ್ಷೀಯ ಒಪ್ಪಂದಗಳ ಅರ್ಥ ವಿವರಣೆಯನ್ನೂ ಸಹ ಮನವಿಯ ಮೇರೆಗೆ ನೀಡುತ್ತಿತ್ತು. ಜಾಗತಿಕ ನ್ಯಾಯಾಲಯವು ಸದಸ್ಯ ರಾಷ್ಟ್ರಗಳು ಸಲ್ಲಿಸಿದ ವಿವಾದಗಳನ್ನು ಮಾತ್ರ ವಿಚಾರಣೆ ನಡೆಸುವ ಅಧಿಕಾರವನ್ನು ಹೊಂದಿತ್ತು. ಕೆಲವು ರಾಷ್ಟ್ರಗಳು ತಮ್ಮ ವಿವಾದಗಳನ್ನು ಜಾಗತಿಕ ನ್ಯಾಯಾಲಯಕ್ಕೆ ವಿಚರಣೆಗಾಗಿ ಒಪ್ಪಿಸುವ ಅಥವಾ ಬಿಡುವ ಅಧಿಕಾರವನ್ನು ಹೊಂದಿದ್ದವು. ತನಗೆ ಒಪ್ಪಿಸಿದ ವಿವಾದಗಳನ್ನು ಮಾತ್ರ ಜಾಗತಿಕ ನ್ಯಾಯಾಲಯವು ವಿಚಾರಿಸುತ್ತಿತ್ತು.

ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯವು ತನ್ನ ತೀರ್ಪುಗಳನ್ನು ಕೊಡುವಾಗ ವಿವಾದಗ್ರಸ್ತ ರಾಜ್ಯಗಳು ಮಾನ್ಯ ಮಾಡಿದ ಅಂತರರಾಷ್ಟ್ರೀಯ ರೂಢಿ ಸಂಪ್ರದಾಯಗಳು, ಶಾಸನದ ಸಾಮಾನ್ಯ ತತ್ವಗಳು, ಅಂತರರಾಷ್ಟ್ರೀಯ ಕಾನೂನಿನ ಪ್ರಸಿದ್ಧ ಲೇಖಕರು ಪ್ರತಿಪಾದಿಸಿದ ಅಂಶಗಳು, ನ್ಯಾಯಶಾಸ್ತ್ರದ ಗ್ರಂಥಗಳು ಮುಂತಾದವುಗಳನ್ನು ಗಣನೆಗೆ ತೆಗೆದುಕೊಳ್ಳುತ್ತಿತ್ತು.

**ಸಲಹಾಧಿಕಾರ**

ರಾಷ್ಟ್ರ ಸಂಘದ ಮಹಾಸಭೆ ಮತ್ತು ಮಹಾಸಮಿತಿಯು ತಮಗೆ ಬೇಕಾದ ಯಾವುದೇ ಒಂದು ವಿಷಯದ ಮೇಲೆ ಜಾಗತಿಕ ನ್ಯಾಯಾಲಯದ ಸಲಹೆಯನ್ನು ಪಡೆಯಬಹುದಾಗಿತ್ತು. ಅಂತಹ ಸಂದರ್ಭಗಳಲ್ಲಿ ಜಾಗತಿಕ ನ್ಯಾಯಾಲಯವು ಅಸೆಂಬ್ಲಿಗಾಗಲಿ ಅಥವಾ ಕೌನ್ಸಿಲ್‌ಗಾಗಲಿ ಸಲಹೆ ಕೊಡುವ ಅಧಿಕಾರವನ್ನು ಹೊಂದಿತ್ತು. ಆದರೆ ಜಾಗತಿಕ ನ್ಯಾಯಾಲಯ ನೀಡಿದ ಸಲಹೆ ಕಡ್ಡಾಯವಾಗಿರಲಿಲ್ಲ. ರಾಷ್ಟ್ರ ಸಂಘ ಅಂತಹ ಸಲಹೆಗಳನ್ನು ಒಪ್ಪಬಹುದಿತ್ತು ಇಲ್ಲವೆ ತಿರಸ್ಕರಿಸಬಹುದಾಗಿತ್ತು.

ಜಾಗತಿಕ ನ್ಯಾಯಾಲಯದ ತೀರ್ಪು ವಿವಾದಗ್ರಸ್ತ ರಾಷ್ಟ್ರಗಳಿಗೆ ಕಡ್ಡಾಯವಾಗಿದ್ದಿತು. ಈ ಜಾಗತಿಕ ನ್ಯಾಯಾಲಯದ ತೀರ್ಪು ಅಂತಿಮವಾಗಿದ್ದಿತು. ಇದರ ತೀರ್ಪಿನ ವಿರುದ್ಧ ಮೇಲ್ಮನವಿಗೆ ಅವಕಾಶವಿರಲಿಲ್ಲ. ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ನ್ಯಾಯಾಲಯ ತನ್ನ ಹಿಂದಿನ ತೀರ್ಪನ್ನು ಪುನರ್ ಪರಿಶೀಲನೆ ಮಾಡಬಹುದಾಗಿತ್ತು.

**ಮೌಲ್ಯಮಾಪನ**

ಜಾಗತಿಕ ಎರಡು ಮಹಾಯುದ್ಧಗಳ ನಡುವಿನ ಅವಧಿಯಲ್ಲಿ ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯವು ಪ್ರಮುಖ ಪಾತ್ರ ವಹಿಸಿತ್ತು. ಅದರ ಜೀವತಾವಧಿಯಲ್ಲಿ ಒಟ್ಟು 65 ವಿವಾದಗಳನ್ನು ಪರಿಶೀಲಿಸಿದೆ. 27 ಸಲಹೆಗಳನ್ನು ನೀಡಿದೆ ಮತ್ತು ನೂರಾರು ಆದೇಶಗಳನ್ನು ಹೊರಡಿಸಿದೆ. ಕೆಲವುಗಳನ್ನು ಹೊರತುಪಡಿಸಿ ಮಿಕ್ಕೆಲ್ಲಾ ತೀರ್ಪುಗಳನ್ನು ಪ್ರಾಮಾಣಿಕವಾಗಿ ಅಂಗೀಕರಿಸಲ್ಪಟ್ಟಿವೆ. ಕೆಲವು ತೀರ್ಪುಗಳು ಪಕ್ಷಾಧಾರಿತವಾದವುಗಳೆಂದು ಟೀಕಿಸಲಾಗಿದೆ. ಜಾಗತಿಕ ನ್ಯಾಯಾಲಯವು ರಾಷ್ಟ್ರಗಳ ನಡುವೆ ವಿವಾದಗಳನ್ನು ತೀರ್ಮಾನಿಸಲು ಬಹುಮುಖ್ಯವಾದ ನ್ಯಾಯಾಲಯವಾಗಿದ್ದಿತು. ಷೂಮನ್‌ರವರ ಮಾತಿನಲ್ಲಿ ಹೇಳುವುದಾದರೆ, "ರಾಷ್ಟ್ರಗಳ ನಡುವಿನ ವಿವಾದಗಳನ್ನು ಬಗೆಹರಿಸುವಲ್ಲಿ ಜಾಗತಿಕ ನ್ಯಾಯಾಲಯವು ಅತ್ಯಂತ ಮುಖ್ಯವಾದ ಹಾಗೂ ಯಶಸ್ವಿ ಪ್ರಯತ್ನವಾಗಿದ್ದಿತು". ಆಗಿನ ಪ್ರಪಂಚದಲ್ಲಿ ನ್ಯಾಯ ಸಂಬಂಧಿತವಾದ ವಿವಾದಗಳನ್ನು ಪರಿಹರಿಸುವಲ್ಲಿ ರಾಷ್ಟ್ರ ಸಂಘ ಸ್ಥಾಪಿಸಿದ ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯವು ಬಹುಮುಖ್ಯ ಪಾತ್ರವಹಿಸಿತ್ತು. ಈ ನ್ಯಾಯಾಲಯವು ಉನ್ನತ ಧ್ಯೇಯ ಹಾಗೂ ನಿಷ್ಪಕ್ಷಪಾತದ ಲಕ್ಷಣಗಳಿಂದ ಕೂಡಿದ್ದು, ಉತ್ತಮ ಹೆಸರು ಗಳಿಸಿತ್ತು.

**ನಿಮ್ಮ ಪ್ರಗತಿ ಪರಿಶೀಲನೆ – 2**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ಅಂತರರಾಷ್ಟ್ರೀಯ ಶಾಶ್ವತ ನ್ಯಾಯಾಲಯದ ರಚನೆ ಮತ್ತು ಅದರ ಅಧಿಕಾರ ವ್ಯಾಪ್ತಿಯನ್ನು ವಿವರಿಸಿ.**

------------------------------------------------------------

------------------------------------------------------------

------------------------------------------------------------

------------------------------------------------------------

## 7.4 ಸಾರಾಂಶ

ಈ ಘಟಕದಲ್ಲಿ ರಾಷ್ಟ್ರ ಸಂಘದ ಸಚಿವಾಲಯ ಮತ್ತು ಜಾಗತಿಕ ಶಾಶ್ವತ ನ್ಯಾಯಾಲಯದ ರಚನೆ ಹಾಗೂ ಕಾರ್ಯಗಳನ್ನು ಚರ್ಚಿಸಿದೆ. ರಾಷ್ಟ್ರ ಸಂಘದ ಆಡಳಿತ ಜವಾಬ್ದಾರಿಯನ್ನು ಸಚಿವಾಲಯ ಹೊತ್ತಿತ್ತು. ಮಹಾಕಾರ್ಯದರ್ಶಿಯು

ಇದರ ಮುಖ್ಯಸ್ಥನಾಗಿದ್ದನು. ಮಹಾಸಭೆ ಮತ್ತು ಮಹಾಮಂಡಲಿ ಕೈಗೊಂಡ ನಿರ್ಣಯಗಳನ್ನು ಸಚಿವಾಲಯ ಜಾರಿಗೊಳಿಸುತ್ತಿತ್ತು. ಲೀಗಿನ ವಿವಿಧ ಅಂಗಗಳ ಕಾರ್ಯಚಟುವಟಿಕೆಗಳನ್ನು ಸಮನ್ವಯಗೊಳಿಸುವುದು, ಒಪ್ಪಂದಗಳ ನೋಂದಣಿ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಿತ್ತು.

ಅಂತರರಾಷ್ಟ್ರೀಯ ಖಾಯಂ ನ್ಯಾಯಾಲಯವು ಪ್ರತ್ಯೇಕ ಅಸ್ತಿತ್ವ ಹೊಂದಿದ್ದಿತು. 1922 ರಲ್ಲಿ ಪ್ರಾರಂಭಗೊಂಡ ಈ ನ್ಯಾಯಾಲಯ ತನ್ನ ಅಧಿಕಾರ ವ್ಯಾಪ್ತಿಗೆ ಬರುವ ರಾಷ್ಟ್ರ-ರಾಷ್ಟ್ರಗಳ ನಡುವಣ ವಿವಾದಗಳನ್ನು ಇದು ಬಗೆಹರಿಸುತ್ತಿತ್ತು. ಒಟ್ಟಿನಲ್ಲಿ ಅದು ಒಂದು ಅಂತರರಾಷ್ಟ್ರೀಯ ನ್ಯಾಯಾಲಯವಾಗಿ ಕಾರ್ಯನಿರ್ವಹಿಸುತ್ತಿತ್ತು.

## 7.5 ಕಠಿಣ ಪದಗಳು

| | | |
|---|---|---|
| ಕಡ್ಡಾಯ | – | ಬಲಾತ್ಕಾರ |
| ಸಲಹೆ | – | ಸೂಚನೆ, ಬುದ್ಧಿವಾದ |
| ಅಧಿಕಾರ ವ್ಯಾಪ್ತಿ | – | ಕಾನೂನಿಗೆ ಒಳಪಟ್ಟ ಪ್ರದೇಶ |
| ಸ್ವಯಂಇಚ್ಛೆ | – | ತನ್ನಷ್ಟಕ್ಕೆ ತಾನೇ ಹೊಂದಿದ ಮುಕ್ತವಾದ ಇಚ್ಛೆ |

## 7.6 ಕೆಲವು ಉಪಯುಕ್ತ ಪುಸ್ತಕಗಳು

| | | |
|---|---|---|
| **ಪ್ರೊ. ಎನ್. ಹಾಲಪ್ಪ** | : | *ಅಂತರರಾಷ್ಟ್ರೀಯ ಸಂಬಂಧಗಳು* |
| **ಡಾ. ಟಿ.ಡಿ. ದೇವೇಗೌಡ** | : | *ಅಂತರರಾಷ್ಟ್ರೀಯ ಸಂಬಂಧಗಳು* |
| **ಸ್ಲೀಚರ್** | : | *ಇಂಟರ್‌ನ್ಯಾಷನಲ್ ರಿಲೇಷನ್ಸ್* |
| **ಎಫ್. ಪೊಲ್ಲಾಕ್** | : | *ದಿ ಲೀಗ್ ಆಫ ನೇಷನ್ಸ್* |
| **ಪಾಮರ್ ಮತ್ತು ಪರ್ಕಿನ್ಸ್** | : | *ಇಂಟರ್‌ನ್ಯಾಷನಲ್ ರಿಲೇಷನ್ಸ್* |

## 7.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

**ನಿಮ್ಮ ಪ್ರಗತಿ ಪರಿಶೀಲನೆ – 1**

1. ನೋಡಿ ವಿಭಾಗ 7.2

**ನಿಮ್ಮ ಪ್ರಗತಿ ಪರಿಶೀಲನೆ – 2**

1. ನೋಡಿ ವಿಭಾಗ 7.3

# ಘಟಕ – 8 : ರಾಷ್ಟ್ರಗಳ ಸಂಘದ ಸಾಧನೆ – ಒಂದು ಮೌಲ್ಯಮಾಪನ

ರಚನೆ


8.0 ಉದ್ದೇಶಗಳು

8.1 ಪೀಠಿಕೆ

8.2 ರಾಷ್ಟ್ರಗಳ ಸಂಘದ ಸಾಧನೆಗಳು

8.2.1 ರಾಜಕೀಯ ಸಾಧನೆಗಳು

8.2.2 ಆರ್ಥಿಕ ಸಾಧನೆಗಳು

8.2.3 ಸಾಮಾಜಿಕ ಸಾಧನೆಗಳು

8.3 ರಾಷ್ಟ್ರಸಂಘದ ವಿಫಲತೆ – ಒಂದು ಮೌಲ್ಯಮಾಪನ

8.4 ಸಾರಾಂಶ

8.5 ಕಠಿಣ ಪದಗಳು

8.6 ಕೆಲವು ಉಪಯುಕ್ತ ಪುಸ್ತಕಗಳು

8.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 8.0 ಉದ್ದೇಶಗಳು

ಈ ಘಟಕದ ಉದ್ದೇಶವೆಂದರೆ, ರಾಷ್ಟ್ರಗಳ ಸಂಘದ (ಲೀಗ್ ಆಫ್ ನೇಷನ್ಸ್) ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿನ ಸಾಧನೆಗಳನ್ನು ವಿವರಿಸುವುದಲ್ಲದೆ ಅದರ ವಿಫಲತೆಗೆ ಕಾರಣಗಳನ್ನು ಪರಿಶೀಲಿಸುವುದೇ ಆಗಿದೆ. ಈ ಘಟಕದ ಅಧ್ಯಯನದ ನಂತರ ನೀವು ಈ ಕೆಳಗಿನವುಗಳನ್ನು ಉತ್ತರಿಸಬಹುದು :

- ರಾಜಕೀಯ ಕ್ಷೇತ್ರದಲ್ಲಿ ಲೀಗ್ ಆಫ್ ನೇಷನ್ಸ್‌ನ ಸಾಧನೆಗಳನ್ನು ವಿವರಿಸಿ.
- ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲಿನ ಲೀಗ್ ಆಫ್ ನೇಷನ್ಸ್‌ನ ಸಾಧನೆಗಳನ್ನು ಚರ್ಚಿಸಿ.
- ರಾಷ್ಟ್ರಗಳ ಸಂಘದ ವಿಫಲತೆಗೆ ಕಾರಣಗಳನ್ನು ಪರಿಶೀಲಿಸಿ.
- ಲೀಗ್ ಆಫ್ ನೇಷನ್ಸ್‌ನ ಕಾರ್ಯಗಳ ಮೌಲ್ಯಮಾಪನ ಮಾಡಿರಿ.

## 8.1 ಪೀಠಿಕೆ

ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು, ಅಂತರರಾಷ್ಟ್ರೀಯ ಸಹಕಾರವನ್ನು ಪ್ರೋತ್ಸಾಹಿಸುವುದು, ಅಂತರರಾಷ್ಟ್ರೀಯ ಕಾನೂನಿನ್ವಯ ಸದಸ್ಯ ರಾಷ್ಟ್ರಗಳು ನಡೆದುಕೊಳ್ಳುವಂತೆ ಪ್ರೋತ್ಸಾಹಿಸುವುದು, ಹಾಗೂ ರಾಷ್ಟ್ರಗಳ ನಡುವೆ ನ್ಯಾಯಯುತ ಹಾಗೂ ಗೌರವಪೂರ್ಣ ಸಂಬಂಧಗಳನ್ನು ಅಸ್ತಿತ್ವಕ್ಕೆ ತರುವುದು – ಇವೇ ಮುಂತಾದವುಗಳು 1920ರ ಜನವರಿ 10ರಂದು ಅಸ್ತಿತ್ವಕ್ಕೆ ಬಂದ ಲೀಗ್ ಆಫ್ ನೇಷನ್ಸ್‌ನ ಗುರಿಗಳಾಗಿವೆ. ಈ ಗುರಿಗಳನ್ನು ಸಾಧಿಸಲು, ರಾಷ್ಟ್ರಗಳ ಶಸ್ತ್ರಾಸ್ತ್ರಗಳ ಕಡಿತ, ಸದಸ್ಯ ರಾಷ್ಟ್ರಗಳ ಭೂಸಮಗ್ರತೆ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕೆ ಪರಸ್ಪರ ಮನ್ನಣೆ, ಹಾಗೂ ಅಂತರರಾಷ್ಟ್ರೀಯ ವಿವಾದಗಳನ್ನು ಶಾಂತಿಯುತ ಮಾರ್ಗಗಳ ಮೂಲಕ ಬಗೆಹರಿಸುವ ಬಗ್ಗೆ ರಾಷ್ಟ್ರ ಸಂಘ ಹಲವಾರು ಯೋಜನೆಗಳನ್ನು ಸಿದ್ಧಪಡಿಸಿತು.

ಲೀಗ್ ಆಫ್ ನೇಷನ್ಸ್ ಅನೇಕ ಉತ್ತಮ ಕೆಲಸ ಮಾಡಿತ್ತಾದರೂ ಹಲವಾರು ಪ್ರಕರಣಗಳಲ್ಲಿ ಯುದ್ಧ ಹಾಗೂ ಅನ್ಯಾಯವನ್ನು ತಡೆಗಟ್ಟುವಲ್ಲಿ ಅದು ವಿಫಲವಾಯಿತು. ಆದರೂ ಅದರ ಸ್ಥಾಪನೆಯು ಸರಿ ದಿಕ್ಕಿನಲ್ಲಿ ಆದ ಒಂದು ಉತ್ತಮ ಚಳುವಳಿ ಎಂದರೆ ಅತಿಶಯೋಕ್ತಿ ಆಗಲಾರದು. ನಾಗರಿಕ ಪ್ರಪಂಚವು ಯುದ್ಧ ನಿವಾರಣೆಗಾಗಿ ಹಾಗೂ ಶಾಂತಿ ಸ್ಥಾಪನೆಗೆ ನಡೆಸಿದ ಹೋರಾಟವು ಮಾನವನ ಇತಿಹಾಸದಲ್ಲಿ ರಾಷ್ಟ್ರ ಸಂಘದ ಅಸ್ತಿತ್ವದ ಆ ಎರಡು ದಶಕಗಳು ಒಂದು ಅದ್ವಿತೀಯ ಕಾಲವೆಂದು ಪರಿಗಣಿಸಲಾಗಿದೆ. ಲೀಗ್ ಆಫ್ ನೇಷನ್ಸ್‌ನ ವಿಫಲತೆಗೆ ಶಕ್ತ ರಾಷ್ಟ್ರಗಳ ಶಕ್ತಿ ರಾಜಕಾರಣವೇ (Power Politics) ಒಂದು ಪ್ರಮುಖ ಕಾರಣವಾಗಿದ್ದಿತು.

ಈ ಪೀಠಿಕೆಯೊಂದಿಗೆ ಮುಂದಿನ ಭಾಗಗಳಲ್ಲಿ ರಾಷ್ಟ್ರ ಸಂಘದ ಸಾಧನೆಗಳು ಹಾಗೂ ಅದರ ವಿಫಲತೆಗೆ ಕಾರಣಗಳನ್ನು ಪರಿಶೀಲಿಸೋಣ.

## 8.2 ರಾಷ್ಟ್ರಗಳ ಸಂಘದ ಸಾಧನೆಗಳು / ಪಾತ್ರ

ಸುಮಾರು ಎರಡು ದಶಕಗಳ ತನ್ನ ಅಸ್ತಿತ್ವದಲ್ಲಿ ರಾಷ್ಟ್ರ ಸಂಘವು ಅನೇಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿದೆ. ಕೆಲವು ಕ್ಷೇತ್ರಗಳಲ್ಲಿ ಅದು ಯಶಸ್ವಿಯಾದರೆ, ಇನ್ನು ಕೆಲವು ಕ್ಷೇತ್ರಗಳಲ್ಲಿ ಅದು ವಿಫಲವಾಗಿದೆ. ಯಾವ ತತ್ವಗಳಿಗಾಗಿ ಅದನ್ನು ಸ್ಥಾಪಿಸಲಾಗಿತ್ತೋ ಆ ತತ್ವಗಳನ್ನು ಎತ್ತಿಹಿಡಿಯುವಲ್ಲಿ ರಾಷ್ಟ್ರ ಸಂಘವು ವಿಫಲವಾಗಿದೆ ಎಂಬುದೇನೋ ನಿಜ, ಆದರೆ ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಅದರ ಮಹತ್ಸಾಧನೆಯನ್ನು ನಾವು ಮರೆಯುವಂತಿಲ್ಲ. ರಾಷ್ಟ್ರಗಳ ಮಧ್ಯೆ ಸಹಕಾರವನ್ನು ವೃದ್ಧಿಸುವಲ್ಲಿ ಲೀಗ್ ಯಶಸ್ವಿಯನ್ನು ಕಂಡಿದೆ : ಅಲ್ಲದೆ ಆರ್ಥಿಕ ರಂಗದಲ್ಲಿ, ಆರೋಗ್ಯ, ಸಂಪರ್ಕ, ಸಾರಿಗೆ,

ಕಾರ್ಮಿಕರ ಸಮಸ್ಯೆಗಳು, ಅಲ್ಪಸಂಖ್ಯಾತರ ರಕ್ಷಣೆ ಮತ್ತು ಬೌದ್ಧಿಕ ಸಹಕಾರ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಲೀಗಿನ ಸಾಧನೆ ಗಣನೀಯವಾಗಿದೆ. ಲೀಗಿನ ಜೀವಿತಾವಧಿಯಲ್ಲಿ ಸಾಧನೆಗಳನ್ನು ಈ ಕೆಳಗಿನಂತೆ ಚರ್ಚಿಸಬಹುದು.

### 8.2.1 ಲೀಗಿನ ರಾಜಕೀಯ ಸಾಧನೆಗಳು

ವಿಶ್ವದಲ್ಲಿ ಅಂತರರಾಷ್ಟ್ರೀಯ ಸಹಕಾರವನ್ನು ಹೆಚ್ಚಿಸಿ ಆ ಮೂಲಕ ವಿಶ್ವಶಾಂತಿಯನ್ನು ಮತ್ತು ಭದ್ರತೆಯನ್ನು ಸ್ಥಾಪಿಸವ ಉದ್ದೇಶದಿಂದಲೇ ರಾಷ್ಟ್ರಗಳ ಸಂಘವು ಜನ್ಮ ತಾಳಿತು. ಅದು ಅಸ್ತಿತ್ವದಲ್ಲಿದ್ದ ಅವಧಿಯಲ್ಲಿ ವಿವಿಧ ರಾಷ್ಟ್ರಗಳ ಸುಮಾರು 40 ರಾಜಕೀಯ ವಿವಾದಗಳನ್ನು ವಿಚಾರಣೆ ನಡೆಸಿದೆ. ಇವುಗಳಲ್ಲಿ ಬಹಳಷ್ಟು ವಿವಾದಗಳನ್ನು ಮಹಾಮಂಡಲಿಯೂ, ಕೆಲವನ್ನು ಮಹಾಸಭೆಯೂ ಮತ್ತೆ ಕೆಲವನ್ನು ಅಂತರರಾಷ್ಟ್ರೀಯ ಖಾಯಂ ನ್ಯಾಯಾಲಯವು ಬಗೆಹರಿಸಿದೆ. ಕೆಲವು ವಿವಾದಗಳು ಸಾಮಾನ್ಯ ಸೌಮ್ಯ ಸ್ವರೂಪದವುಗಳಾಗಿದ್ದರೆ, ಮತ್ತೆ ಕೆಲವು ಗಂಭೀರವಾಗಿದ್ದು ಅವುಗಳಿಂದ ವಿಶ್ವಶಾಂತಿಯನ್ನು ಕದಡುವ ಸಂಭವವಿತ್ತು. ಸಣ್ಣಪುಟ್ಟ ರಾಷ್ಟ್ರಗಳು ಲೀಗ್‌ನ ಆದೇಶಗಳನ್ನು ಒಪ್ಪಿ ಅವುಗಳಿಗೆ ತಲೆ ಬಾಗುತ್ತಿದ್ದವು. ಆದರೆ ಬೃಹತ್ ರಾಷ್ಟ್ರಗಳು ಲೀಗ್‌ನ ಆದೇಶವನ್ನು ಧಿಕ್ಕರಿಸುತ್ತಿದ್ದವು. ರಾಷ್ಟ್ರಗಳ ಸಂಘದ ರಾಜಕೀಯ ಸಾಧನೆಯನ್ನು ಈ ಕೆಳಗಿನ ಮೂರು ವಿಷಯಗಳನ್ನಾಧರಿಸಿ ಚರ್ಚಿಸಬಹುದು.

1. ಅಂತರರಾಷ್ಟ್ರೀಯ ವಿವಾದಗಳ ಶಾಂತಿಯುತ ಪರಿಹಾರ.
2. ಸಾಮೂಹಿಕ ಭದ್ರತೆಗೆ ಪ್ರೋತ್ಸಾಹ, ಮತ್ತು
3. ನಿಶಸ್ತ್ರೀಕರಣಕ್ಕೆ ಪ್ರೋತ್ಸಾಹ

ಅಂತರರಾಷ್ಟ್ರೀಯ ವಿವಾದಗಳನ್ನು ಶಾಂತಿಯುತ ಮಾರ್ಗಗಳ ಮೂಲಕ ಬಗೆಹರಿಸುವ ಸಲುವಾಗಿ ಲೀಗ್ ವಿವಾದಕ್ಕೊಳಪಟ್ಟ ರಾಷ್ಟ್ರಗಳು ನೇರವಾಗಿ ಸಂಧಾನ ನಡೆಸುವಂತೆ ಪ್ರೋತ್ಸಾಹಿಸುತ್ತಿತ್ತು. ಅದಕ್ಕೆ ಸಂಬಂಧಿಸಿದಂತೆ ಇತರ ಸಾಧನಗಳನ್ನು ಬಳಸಿಕೊಳ್ಳುವಂತೆಯೂ ಮಾಡಿತು. ರಾಜತಾಂತ್ರಿಕ ಸಂಧಾನ, ರಾಜಿ ಒಪ್ಪಂದ, ನ್ಯಾಯ ಪರಿಹಾರ ಮುಂತಾದ ವಿಧಾನಗಳ ಮೂಲಕ ಲೀಗ್ ಆಫ್ ನೇಷನ್ಸ್ ಅನೇಕ ವಿವಾದಗಳನ್ನು ಬಗೆಹರಿಸುವುದರಲ್ಲಿ ಯಶಸ್ವಿಯಾಗಿದೆ. ಅಂತರರಾಷ್ಟ್ರೀಯ ನ್ಯಾಯಾಲಯದ ತೀರ್ಪುಗಳನ್ನು ಒಪ್ಪುವಂತೆ ಲೀಗ್ ರಾಷ್ಟ್ರಗಳಿಗೆ ಪ್ರೋತ್ಸಾಹಿಸಿದೆ. ಲೀಗ್ ಆಫ್ ನೇಷನ್ಸ್ ಅಸ್ತಿತ್ವದಲ್ಲಿದ್ದ ಅವಧಿಯಲ್ಲಿ ಈ ಕೆಳಗಿನ ಹಲವಾರು ವಿವಾದಗಳನ್ನು ಬಗೆಹರಿಸಿದೆ. ಸ್ವೀಡನ್ ಮತ್ತು ಫಿನ್‌ಲೆಂಡ್‌ಗಳ ನಡುವಿನ ಅಸ್‌ಲೆಂಡ್ ದ್ವೀಪಗಳ ವಿವಾದ; ಯೂಫೆನ್ ಮತ್ತು ಮಾಲ್ಮೆಡಿ ವಿವಾದ; ಟರ್ಕಿ ಮತ್ತು ಇರಾಕ್ ಮಧ್ಯೆ ಎದಿದ್ದ ಮಾಸುಲ್‌ಗಡಿ ವಿವಾದ; ಟರ್ಕಿ ಮತ್ತು ಇರಾಕ್ ಮಧ್ಯೆ ಎದಿದ್ದ ಮಾಸುಲ್‌ಗಡಿ ವಿವಾದ; ಕರ್ಪೂ ದ್ವೀಪಕ್ಕೆ ಸಂಬಂಧಿಸಿದ ಗ್ರೀಕ್ ಮತ್ತು ಇಟಲಿ ನಡುವಿನ ವಿವಾದ; ಗ್ರೀಸ್ ಮತ್ತು ಬಲ್ಗೇರಿಯಾಗಳ ನಡುವಿನ ವಿವಾದ; ಗ್ರಾನ್-ಚಾಕೊಗೆ ಸಂಬಂಧಿಸಿದಂತೆ ಬೊಲಿವಿಯಾ ಮತ್ತು ಪೆರುಗ್ವೆಗಳ ನಡುವಿನ ವಿವಾದ ಇವೇ ಮುಂತಾದ ವಿವಾದಗಳನ್ನು ಲೀಗ್ ಬಹು ಯಶಸ್ವಿಯಾಗಿ ಬಗೆಹರಿಸಿ ಯುದ್ಧವಾಗದಂತೆ ತಡೆದಿದೆ.

1920 ರಿಂದ 1930ರವರೆಗಿನ ಸಾಮೂಹಿಕ ಭದ್ರತೆಯನ್ನು ಪ್ರೋತ್ಸಾಹಿಸುವಲ್ಲಿ ಲೀಗ್ ಮಾಡಿದ ಪ್ರಯತ್ನಗಳು ಆಶಾದಾಯಕವಾಗಿದ್ದವು. ಆ ಪ್ರಯತ್ನಗಳಲ್ಲಿ ಮುಖ್ಯವಾದವುಗಳೆಂದರೆ :

1. ಪರಸ್ಪರ ಸಹಕಾರದ ಕರಡು ಒಪ್ಪಂದ (1923)
2. ಜಿನೀವಾ ಆಚಾರ ಸಂಹಿತೆ (Geneva Protocol) (1924)
3. ಲೊಕಾರ್ನೋ ಒಪ್ಪಂದಗಳು (1925)
4. ಕೆಲಾಗ್-ಬ್ರಿಯಾಂಡ್ ಒಪ್ಪಂದ ಅಥವಾ ಪ್ಯಾರಿಸ್ ಒಪ್ಪಂದ (1928)
5. ಸಾಮಾನ್ಯ ಒಪ್ಪಂದ (1928)

ಮೊದಲನೆಯ ಹಾಗೂ ಎರಡನೆಯ ಒಪ್ಪಂದಗಳು ಬ್ರಿಟಿಷರು ಬೆಂಬಲಿಸಿದ ಕಾರಣ ಅವುಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಲಿಲ್ಲ. ಉಳಿದವುಗಳನ್ನು ಕಾರ್ಯರೂಪಕ್ಕೆ ತರಲಾಯಿತು, ಗಡಿ ರಕ್ಷಣೆ, ನ್ಯಾಯ ಪರಿಹಾರ ವಿಧಾನದ ಪಾಲನೆ, ಬಿಕ್ಕಟ್ಟಿನ ಸನ್ನಿವೇಶದಲ್ಲಿ ಪರಸ್ಪರ ಸಹಾಯದ ಬಗ್ಗೆ ಲೊಕಾರ್ನೋ ಮತ್ತು ಸಾಮಾನ್ಯ ಒಪ್ಪಂದಗಳಲ್ಲಿ ನಿಯಮಗಳಿದ್ದವು. ಕೆಲಾಗ್-ಬ್ರಿಯಾಂಡ್ ಒಪ್ಪಂದದಲ್ಲಿ ಅಂತರರಾಷ್ಟ್ರೀಯ ವಿವಾದಗಳನ್ನು ಯುದ್ಧದ ಮೂಲಕ ಪರಿಹರಿಸಬಾರದೆಂದು ಹೇಳಲಾಗಿತ್ತು. ಇದು ಯುದ್ಧ ಪರಿತ್ಯಾಗಕ್ಕೆ ಹೆಚ್ಚು ಒತ್ತು ನೀಡಿತ್ತು. ಈ ಎಲ್ಲಾ ಒಪ್ಪಂದಗಳನ್ನು 1923–1928 ರ ಅವಧಿಯಲ್ಲಿ ಮಾಡಿಕೊಳ್ಳಲಾಗಿತ್ತು. ಈ ಅವಧಿಯು ರಾಷ್ಟ್ರ ಸಂಘದ ಇತಿಹಾಸದಲ್ಲಿ ಅತ್ಯಂತ ಉಪಯುಕ್ತವಾದ ಸಾಧನೆಯ ಅವಧಿ ಎಂದು ಪರಿಗಣಿಸಲಾಗಿತ್ತು.

ನಿಶಸ್ತ್ರೀಕರಣಕ್ಕೆ ಸಂಬಂಧಿಸಿದಂತೆ ಲೀಗ್ ನಡೆಸಿದ ಪ್ರಯತ್ನಗಳು ಪರಿಣಾಮಕಾರಿಯಾಗಿರಲಿಲ್ಲ. ನಿಶಸ್ತ್ರೀಕರಣವು ಲೀಗ್‌ನ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದ್ದರೂ ಅದು ಈ ಉದ್ದೇಶ ಸಾಧನೆಯಲ್ಲಿ ವಿಫಲಗೊಂಡಿತು. ಪ್ರಾರಂಭದಲ್ಲಿ ರಾಷ್ಟ್ರ ಸಂಘವು ಒಂದು ಶಾಶ್ವತ ಸಲಹಾ ಸಮಿತಿಯನ್ನು ರಚಿಸಿತು. ಈ ಸಮಿತಿಯಲ್ಲಿ ಸೈನಿಕ ಅಧಿಕಾರಿಗಳೇ ಇದ್ದರು. ಅಂಥವರು ನಿಶ್ಶಸ್ತ್ರೀಕರಣದ ಬಗ್ಗೆ ಪ್ರಯತ್ನಿಸುವುದು ಅಸಂಭವವಾಗಿತ್ತು. ಆದುದರಿಂದ ಈ ಸಮಿತಿಯು ಯಾವ ರೀತಿಯಿಂದಲೂ ಉಪಯುಕ್ತವಾಗಿರಲಿಲ್ಲ. ಆನಂತರ 1920ರಲ್ಲಿ ನಿಶ್ಶಸ್ತ್ರೀಕರಣ ಆಯೋಗವನ್ನೂ ಮತ್ತು 1925 ರಲ್ಲಿ ನಿಶ್ಶಸ್ತ್ರೀಕರಣ ಸಿದ್ಧತಾ ಆಯೋಗವನ್ನೂ ರಚಿಸಲಾಯಿತು. 1932 ರಲ್ಲಿ ನಿಶ್ಶಸ್ತ್ರೀಕರಣ ಸಮ್ಮೇಳನವು ಜಿನೀವಾದಲ್ಲಿ ನಡೆಯಿತು. ಆ ಸಮ್ಮೇಳನವು ಯಶಸ್ವಿ ಆಗಲಿಲ್ಲ. ನಿಶ್ಶಸ್ತ್ರೀಕರಣದ ವಿಷಯದಲ್ಲಿ ರಾಷ್ಟ್ರ ಸಂಘವು ಏನನ್ನೂ ಸಾಧಿಸಲು ಶಕ್ತವಾಗಲಿಲ್ಲ.

ರಾಷ್ಟ್ರ ಸಂಘದ ಪ್ರಣಾಳಿಕೆಯಲ್ಲಿ ನಿಯೋಜಿತ ಪದ್ಧತಿ ಅಥವಾ ಮ್ಯಾಂಡೇಟ್ ಪದ್ಧತಿಗೆ ಅವಕಾಶ ಮಾಡಲಾಗಿತ್ತು. ಪ್ರಥಮ ಜಾಗತಿಕ ಯುದ್ಧದ ನಂತರ ಮಿತ್ರ ರಾಷ್ಟ್ರಗಳು ಪರಾಭವಗೊಂಡ ರಾಷ್ಟ್ರಗಳಾದ ಜರ್ಮನಿ ಮತ್ತು ಟರ್ಕಿಗಳಿಂದ ಗೆದ್ದ ಪ್ರದೇಶವನ್ನು ಆಕ್ರಮಿಸಿಕೊಳ್ಳುವ ಬದಲು ಆ ಪ್ರದೇಶಗಳ ಆಡಳಿತ ನಿರ್ವಹಣೆಗಾಗಿ ಮ್ಯಾಂಡೇಟ್ ಪದ್ಧತಿಯನ್ನು ಜಾರಿಗೆ ತಂದವು. ಆ ಗೆದ್ದ ಪ್ರದೇಶವನ್ನು ಮ್ಯಾಂಡೇಟ್ ಪ್ರದೇಶಗಳೆಂದು ಘೋಷಿಸಿ ಅವುಗಳ ಆಡಳಿತವನ್ನು ಲೀಗ್‌ಗೆ ವಹಿಸಿಕೊಡಲಾಯಿತು. ಈ ಪ್ರದೇಶಗಳಿಗೆ ಸ್ವಾತಂತ್ರ್ಯ ಕೊಡುವ ಮುನ್ನ ಲೀಗ್ ಸಂಸ್ಥೆಯು ಅವುಗಳ ಆಡಳಿತವನ್ನು ತಾನೇ ನಡೆಸಿ ನಂತರ ಅವುಗಳಿಗೆ ಸ್ವಾತಂತ್ರ್ಯ ನೀಡಲು ಏರ್ಪಾಡು ಮಾಡಿತು.

ಮ್ಯಾಂಡೇಟ್ ಪ್ರದೇಶಗಳು ಸಾಕಷ್ಟು ಅಭಿವೃದ್ಧಿ ಹೊಂದಿದ ಕೂಡಲೇ ಅವುಗಳಿಗೆ ಪೂರ್ಣ ಸ್ವಾತಂತ್ರ್ಯವನ್ನು ನೀಡುವ ಉದ್ದೇಶವನ್ನು ಲೀಗ್ ಆಫ್ ನೇಷನ್ಸ್ ಹೊಂದಿತ್ತು. ಲೀಗ್ ಸಂಸ್ಥೆಯು ಆಗಾಗ್ಗೆ ತನ್ನ ಪ್ರತಿನಿಧಿಗಳನ್ನು ಮ್ಯಾಂಡೇಟ್ ಪ್ರದೇಶಗಳಿಗೆ ಕಳುಹಿಸಿ ಅವುಗಳ ಪ್ರಗತಿಯನ್ನು ಪರಿಶೀಲಿಸುತ್ತಿತ್ತು. ಹೀಗೆ ಮ್ಯಾಂಡೇಟ್ ಪ್ರದೇಶಗಳ ಆಡಳಿತ ಮತ್ತು ಮೇಲ್ವಿಚಾರಣೆಯು ಲೀಗ್ ಆಫ್ ನೇಷನ್ಸ್‌ಗೆ ಸೇರಿತ್ತು.

**ನಿಮ್ಮ ಪ್ರಗತಿ ಪರಿಶೀಲನೆ – 1**

**ಸೂಚನೆ :** 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ರಾಜಕೀಯ ಕ್ಷೇತ್ರದಲ್ಲಿ ಲೀಗ್ ಆಫ್ ನೇಷನ್ಸ್ ಮಾಡಿದ ಸಾಧನೆಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ.**

-----------------------------------------------------------------

-----------------------------------------------------------------

-----------------------------------------------------------------

-----------------------------------------------------------------

### 8.2.2 ಲೀಗಿನ ಆರ್ಥಿಕ ಸಾಧನೆಗಳು

ಆರ್ಥಿಕ, ಸಾಮಾಜಿಕ ಮತ್ತು ಬೌದ್ಧಿಕ ಕ್ಷೇತ್ರಗಳಲ್ಲಿ ರಾಷ್ಟ್ರ ಸಂಘವು ವ್ಯಾಪಕ ಹಾಗೂ ಪರಿಣಾಮಕಾರಿಯಾದ ಪ್ರಗತಿಯನ್ನು ಸಾಧಿಸಿದೆ ಎಂದು ಹೇಳಬಹುದು. ಲೀಗ್ ರಾಜಕೀಯ ಉದ್ದೇಶ ಸಾಧನೆಯಲ್ಲಿ ಯಶಸ್ವಿಯಾಗದಿದ್ದರೂ ರಾಜಕೀಯೇತರ ಉದ್ದೇಶ ಸಾಧನೆಯಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದೆ.

ಆರ್ಥಿಕ ರಂಗದಲ್ಲಿ ರಾಷ್ಟ್ರ ಸಂಘದ ಸಾಧನೆಗಳು ಈ ಕೆಳಗಿನಂತಿವೆ :

(1) ಪ್ರಥಮ ಜಾಗತಿಕ ಯುದ್ಧದ ನಂತರ ಯುರೋಪಿನ ಅನೇಕ ರಷ್ಟಗಳು ಆರ್ಥಿಕವಾಗಿ ದಿವಾಳಿಯಾದವು. ಲೀಗ್ ಈ ರಾಷ್ಟ್ರಗಳ ಪುನರ್ರಚನೆಯ ಕಾರ್ಯದಲ್ಲಿ ಸಹಾಯ ಮಾಡಿತು. ಆಷ್ಟ್ರಿಯಾ, ಹಂಗೇರಿ ಮತ್ತು ಬಲ್ಗೇರಿಯಾ ದೇಶಗಳು ಲೀಗಿನಿಂದ ಉತ್ತಮ ಆರ್ಥಿಕ ಸಹಾಯಪಡೆದವು. ಇದರಿಂದ ಅವು ತಮ್ಮ ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸಿಕೊಂಡವು. ಯುರೋಪಿನ ಇನ್ನಿತರ ಅಶಕ್ತ ರಾಷ್ಟ್ರಗಳಿಗೂ ಲೀಗ್ ಧನ ಸಹಾಯವನ್ನು ನೀಡಿತು. ಲೀಗ್ ರಚಿಸಿದ ಆರ್ಥಿಕ ಸಮಿತಿಯು ಲೀಗ್ ಕೊಟ್ಟ ಎಲ್ಲಾ ಸಾಲಗಳ ಮೇಲ್ವಿಚಾರಣೆ ಮತ್ತು ಆಡಳಿತವನ್ನು ನಿರ್ವಹಿಸಿತು. ಲೀಗ್ ನೀಡಿದ ಆರ್ಥಿಕ ಸಹಾಯದಿಂದ ಯುರೋಪಿನ ರಾಷ್ಟ್ರಗಳು ಚೇತರಿಸಿಕೊಂಡವು.

(2) ಪ್ರಪಂಚದ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ರಾಷ್ಟ್ರ ಸಂಘವು 1927ರಲ್ಲಿ ಜಾಗತಿಕ ಆರ್ಥಿಕ ಸಮ್ಮೇಳನವನ್ನು ಕರೆಯಿತು ಮತ್ತು ಇದೇ ರೀತಿಯ ಜಾಗತಿಕ ಹಣಕಾಸಿನ ಮತ್ತು ಆರ್ಥಿಕ ಸಮ್ಮೇಳನವನ್ನು 1930ರಲ್ಲಿ ಕರೆಯಿತು. ಈ ಸಮ್ಮೇಳನಗಳು ಪ್ರಪಂಚದ ರಾಷ್ಟ್ರಗಳ ಆರ್ಥಿಕ ಸಮಸ್ಯೆಗಳನ್ನು ಚರ್ಚಿಸಿ ಅವುಗಳಿಗೆ ಸೂಕ್ತ ಪರಿಹಾರಗಳನ್ನು ಸೂಚಿಸಿದವು. ಲೀಗಿನ ಆರ್ಥಿಕ ಹಾಗೂ ಹಣಕಾಸಿನ ಸಂಸ್ಥೆಯು ಸಮ್ಮೇಳನಗಳ ಮೂಲಕ ಆರ್ಥಿಕ ನೆರವನ್ನು ನೀಡುವುದರ ಮೂಲಕ ಹಲವಾರು ಆರ್ಥಿಕ ಹಾಗೂ ಹಣಕಾಸು ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಯಶಸ್ವಿಯಾಯಿತು.

(3) ಸಾರಿಗೆ ಸಂಪರ್ಕ ಕ್ಷೇತ್ರದಲ್ಲಿ ಲೀಗ್ ಅಮೂಲ್ಯವಾದ ಕೆಲಸವನ್ನು ಮಾಡಿತು. ಸುಂಕ, ರಫ್ತು ವ್ಯಾಪಾರ, ನಕಲಿ ನಾಣ್ಯಗಳನ್ನು ತಡೆಯುವಿಕೆ ಇವೇ ಮುಂತಾದವುಗಳ ಬಗ್ಗೆ ಲೀಗ್ ಒಳ್ಳೆಯ ಸಂಪ್ರದಾಯಗಳನ್ನು ಹಾಕಿಕೊಟ್ಟಿತು. ಜನಗಳ ಮತ್ತು ಸಾಮಾಗ್ರಿಗಳ ಸಾಗಾಣಿಕೆಯ ರೀತಿ ನೀತಿಗಳಲ್ಲಿ ಮಹತ್ತರವಾದ ಸುಧಾರಣೆಗಳನ್ನು ಲೀಗ್ ಜಾರಿಗೆ ತಂದಿದೆ. ಲೀಗ್ ಒಂದು ಸುಧಾರಿತವಾದ ಪಾಸ್‌ಪೋರ್ಟ್ ಹೊರಡಿಸಿ, ಅದರ ಮಾದರಿಯನ್ನು ಎಲ್ಲಾ ರಾಷ್ಟ್ರಗಳೂ ಅನುಸರಿಸಬೇಕೆಂದು ಕೇಳಿಕೊಂಡಿತು. ಹೀಗೆ, ಸಾರಿಗೆ ಸಂಪರ್ಕಕ್ಕೆ ಸಂಬಂಧಿಸಿದ ಹಲವಾರು ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಲೀಗ್ ಬಹುಮಟ್ಟಿಗೆ ಯಶಸ್ವಿಯಾಯಿತು.

(4) ರಾಷ್ಟ್ರ ಸಂಘವು ಅಂತರರಾಷ್ಟ್ರೀಯ ನದಿಗಳಲ್ಲಿ ಸಾಗಾಟ, ಸಮುದ್ರದಲ್ಲಿ ಸಿಗ್ನಲ್‌ಗಳನ್ನು ಕೊಡುವುದು, ತೀರ ಪ್ರದೇಶಗಳಲ್ಲಿ ಲೈಟ್ ಹೌಸ್‌ಗಳನ್ನು ಸ್ಥಾಪಿಸುವುದು ಮತ್ತು ರಸ್ತೆ–ಸಾರಿಗೆ–ಇವುಗಳ ಬಗ್ಗೆ ಸಂಪ್ರದಾಯಗಳನ್ನು ಮತ್ತು ರೂಢಿಗಳನ್ನು ಹಾಕಿಕೊಟ್ಟು, ಅವುಗಳನ್ನು ಎಲ್ಲಾ ರಾಷ್ಟ್ರಗಳೂ ಅನುಕರಿಸುವಂತೆ ಮಾಡಿತು. ರಾಷ್ಟ್ರ ಸಂಘವು ಪೋಲೆಂಡ್ ಮತ್ತು ಚೀನಾಗಳಿಗೆ ಹಡಗು, ಸಾರಿಗೆ, ಜಲ ಮಾರ್ಗ ಮತ್ತು ರಸ್ತೆ ಸಾರಿಗೆಗಳ ಮೇಲೆ ತಾಂತ್ರಿಕ ಸಹಾಯ ಹಾಗೂ ಸಲಹೆಯನ್ನು ನೀಡಿತು.

(5) 1920ರಲ್ಲಿ ಲೀಗ್ ಅಂತರರಾಷ್ಟ್ರೀಯ "ಸಮಪರ್ಕ ಮತ್ತು ಸಾರಿಗೆ ಸಂಸ್ಥೆ"ಯನ್ನು ಸ್ಥಾಪಿಸಿತು. ಇದು ಎಲ್ಲಾ ರಾಷ್ಟ್ರಗಳಲ್ಲಿ ಇದ್ದ ನದಿಗಳ ಆಯೋಗ, ಕೂಲಿಕಾರ ಸಂಘ, ರೈಲ್ವೆ ಮತ್ತು ವಿಮಾನ ಪ್ರಯಾಣ ಇವೇ ಮೊದಲಾದವುಗಳು ಪರಸ್ಪರ ಹೊಂದಿಕೊಂಡು ಕಾರ್ಯನಿರ್ವಹಿಸುವಂತೆ ಪ್ರಯತ್ನಿಸಿತು.

(6) ಪ್ರಪಂಚದ ಕೂಲಿಕಾರರ ಸ್ಥಿತಿಗತಿಗಳನ್ನು ಸುಧಾರಿಸಲು ರಾಷ್ಟ್ರ ಸಂಘ ಜಾಗತಿಕ ಕೂಲಿಕಾರರ ಸಂಘವನ್ನು ಸ್ಥಾಪಿಸಿತು. ಈ ಸಂಘವು ಬಹಳ ಅಮೂಲ್ಯವಾದ ಕೆಲಸಗಳನ್ನು ಮಾಡಿದೆ.

### 8.2.3 ಲೀಗಿನ ಸಾಮಾಜಿಕ ಸಾಧನೆಗಳು

ಸಾಮಾಜಿಕ ಕ್ಷೇತ್ರದಲ್ಲಿ ರಾಷ್ಟ ಸಂಘದ ಸಾಧನೆಗಳು ಪ್ರಶಂಸನೀಯವಾಗಿವೆ. 1923ರಲ್ಲಿ ಪ್ರಪಂಚದಲ್ಲಿ ಗುಲಾಮಗಿರಿಯನ್ನು ನಿರ್ಮೂಲನ ಮಾಡುವ ಉದ್ದೇಶದಿಂದ ಲೀಗ್ ಜಿನೀವಾದಲ್ಲಿ **"ಗುಲಾಮಗಿರಿ ಸಮ್ಮೇಳನ"**ವನ್ನು (ಸ್ಲೇವರಿ ಕನ್‌ವೆನ್‌ಸನ್") ಎಂಬ ಅಧಿವೇಶನವನ್ನು ಕರೆಯಿತು. ಈ ಸಮ್ಮೇಳನವು ವಿಶ್ವದಲ್ಲಿ ಗುಲಾಮಗಿರಿಯನ್ನು ಅಳಿಸಿ ಹಾಕುವ ಉಪಾಯಗಳನ್ನು ಹಾಗೂ ವಿಧಾನಗಳನ್ನು ಚರ್ಚಿಸಿತು. ಈ ಸಮ್ಮೇಳನದ ಶಿಫಾರಸ್ಸುಗಳನ್ನು ಕಾರ್ಯಾಚರಣೆಗೆ ತರಲು ಲೀಗ್ 1932ರಲ್ಲಿ ಒಂದು ಶಾಶ್ವತ **'ಗುಲಾಮಗಿರಿ ಆಯೋಗ'**ವನ್ನು ನೇಮಿಸಿತು.

ಆರೋಗ್ಯ ಮತ್ತು ನಿರಾಶ್ರಿತರಿಗೆ ಸಂಬಂಧಿಸಿದಂತೆ ರಾಷ್ಟ ಸಂಘದ ಸಾಧನೆಯು ಗಮನಾರ್ಹವಾಗಿದೆ. 1923ರಲ್ಲಿ ಲೀಗ್, **"ಜಾಗತಿಕ ಆರೋಗ್ಯ ಸಂಸ್ಥೆ"**ಯನ್ನು ಸ್ಥಾಪಿಸಿತು. ಈ ಸಂಸ್ಥೆಯು ಪ್ರಪಂಚದ ಎಲ್ಲ ರಾಷ್ಟಗಳಲ್ಲಿ ಸಿಡುಬು, ಪ್ಲೇಗು, ಮಲ್ಲೇರಿಯಾ, ಕಾಲರಾ ಇವೇ ಮೊದಲಾದ ರೋಗಗಳನ್ನು ನಿವಾರಿಸಲು ಸಹಾಯ ಮಾಡಿದೆ. ಈ ಸಂಸ್ಥೆಯು ಅನೇಕ ವೈದ್ಯಕೀಯ ಸಮ್ಮೇಳನಗಳನ್ನು ಕರೆಯಿತು ಮತ್ತು ವೈದ್ಯಕೀಯ ವಿಜ್ಞಾನದಲ್ಲಿ ಸಂಶೋಧನೆ ಮಾಡಲು ಸಹಾಯ ಮಾಡಿತು. ವಿವಿಧ ರಾಷ್ಟಗಳಲ್ಲಿದ್ದ ರೋಗಗಳು ಮತ್ತು ಅವುಗಳಿಂದಾಗುವ ಸಾವು ನೋವುಗಳ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸಿ ಈ ಸಂಸ್ಥೆಯು ತನ್ನ ಸಹಾಯ ಸಹಕಾರವನ್ನು ಎಲ್ಲ ರಾಷ್ಟಗಳಿಗೂ ನೀಡುತ್ತಿತ್ತು. ಎಲ್ಲ ರಾಷ್ಟಗಳಲ್ಲಿ ಜನರ ಆರೋಗ್ಯವನ್ನು ಸುಧಾರಿಸಲು ಈ ಸಂಸ್ಥೆಯು ಬಹುವಾಗಿ ಶ್ರಮಿಸಿತು.

ಮೊದಲನೆಯ ಜಾಗತಿಕ ಯುದ್ಧದ ನಂತರ ಲೀಗ್ ಲಕ್ಷಾಂತರ ಜನ ನಿರಾಶಿತರ ಮತ್ತು ಯುದ್ಧ ಕೈದಿಗಳ ಪುನರ್ ವಸತಿಯ ಸಮಸ್ಯೆಯನ್ನು ಎದುರಿಸಬೇಕಾಯಿತು. ಸದಸ್ಯ ರಾಷ್ಟಗಳ ದೇಣಿಗೆಯ ಸಹಾಯದಿಂದ ರಾಷ್ಟ ಸಂಘವು ಈ ಸಮಸ್ಯೆಯನ್ನು ಯಶಸ್ವಿಯಾಗಿ ಬಗೆಹರಿಸಿತು.

ರಾಷ್ಟ ಸಂಘವು ರಾಷ್ಟ-ರಾಷ್ಟಗಳ ಮಧ್ಯೆ ಬೌದ್ಧಿಕ ಸಹಕಾರವನ್ನು ಸಂವರ್ಧಿಸಲು ಅನೇಕ ಪ್ರಯತ್ನಗಳನ್ನು ಕೈಗೊಂಡಿತು. 1922ರಲ್ಲಿ ಬುದ್ಧಿ ಜೀವಿಗಳಿಗೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಸಮಿತಿಯನ್ನು (International Committee on International Co-operation) ಮತ್ತು 1926ರಲ್ಲಿ ಬುದ್ಧಿಜೀವಿಗಳ ಸಹಕಾರದ ಅಂತರರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸಿತು. ಇದರ ಉದ್ದೇಶ ಕಲೆ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ಜ್ಞಾನವನ್ನು ವಿಶ್ವದ ಜನತೆಯಲ್ಲಿ ಹರಡುವುದು. ರಾಷ್ಟಗಳ ಮಧ್ಯೆ ಬೌದ್ಧಿಕಸಹಕಾರವನ್ನು ವೃದ್ಧಿಸಲು ರಾಷ್ಟ ಸಂಘವು ಸಮ್ಮೇಳನಗಳನ್ನು, ಉಪನ್ಯಾಸಗಳನ್ನು, ಪುಸ್ತಕ, ಪ್ರಕಟಣೆ, ಬಾನುಲಿ ಕಾರ್ಯಕ್ರಮ ಇವೇ ಮುಂತಾದವುಗಳನ್ನು ಏರ್ಪಡಿಸುತ್ತಿತ್ತು.

ಇದಲ್ಲದೆ, ಮಕ್ಕಳ ಕಲ್ಯಾಣ, ಅಪಾಯಕರ ಮಾದಕ ದ್ರವ್ಯಗಳ ನಿಯಂತ್ರಣ, ಸೆರೆಮನೆಯ ಸುಧಾರಣೆ, ಸ್ತ್ರೀಯರ ಮಾರಾಟವನ್ನು ನಿಷೇಧಿಸುವುದು, ಅನೈತಿಕ ಸಾಹಿತ್ಯವನ್ನು ಹತ್ತಿಕ್ಕುವುದು ಇವೇ ಮೊದಲಾದ ಕ್ಷೇತ್ರಗಳಲಿ ರಾಷ್ಟ ಸಂಘ ಬಹಳ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದೆ.

ಹೀಗೆ ರಾಷ್ಟ ಸಂಘವು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮಾನವ ಕಲ್ಯಾಣಕ್ಕಾಗಿ ಕೊನೆಯವರೆಗೂ ನಿರಂತರ ಪ್ರಯತ್ನವನ್ನು ನಡೆಸಿದೆ. ಆದ್ದರಿಂದಲೇ **ಕಾರ್ಡೆಲ್ ಹಲ್** ಅವರು, "ಲೀಗ್ ಆಫ್ ನೇಷನ್ಸ್ ಸಂಸ್ಥೆಯು ಪ್ರಪಂಚದಲ್ಲಿ ಇತರ ಯಾವುದೇ ಸಂಸ್ಥೆಗಿಂತ ಹೆಚ್ಚಾಗಿ ಮಾನವೀಯ ಮತ್ತು ವೈಜ್ಞಾನಿಕ ಕಾರ್ಯಗಳನ್ನು ನಿರ್ವಹಿಸಿದೆ" ಎಂದು ಹೇಳಿದ್ದಾರೆ.

**ನಿಮ್ಮ ಪ್ರಗತಿ ಪರಿಶೀಲನೆ – 2**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

1. ಆರ್ಥಿಕ ಕ್ಷೇತ್ರದಲ್ಲಿ ರಾಷ್ಟ್ರ ಸಂಘದ ಸಾಧನೆಗಳನ್ನು ವಿವರಿಸಿ.

-----------------------------------------------------------------

-----------------------------------------------------------------

-----------------------------------------------------------------

-----------------------------------------------------------------

2. ಸಾಮಾಜಿಕ ಹಾಗೂ ಮಾನವೀಯ ಕ್ಷೇತ್ರಗಳಲ್ಲಿನ ರಾಷ್ಟ್ರ ಸಂಘದ ಸಾಧನೆಗಳನ್ನು ಚರ್ಚಿಸಿ.

-----------------------------------------------------------------

-----------------------------------------------------------------

-----------------------------------------------------------------

-----------------------------------------------------------------

## 8.3 ರಾಷ್ಟ್ರ ಸಂಘದ ವಿಫಲತೆ - ಒಂದು ಮೌಲ್ಯಮಾಪನ

ರಾಷ್ಟ್ರ ಸಂಘವು ರಾಷ್ಟ್ರಗಳ ನಡುವಣ ಅನೇಕ ವಿವಾದಗಳನ್ನು ಬಗೆಹರಿಸಿ ಆರ್ಥಿಕ, ಸಾಮಾಜಿಕ ಮತ್ತು ಮಾನವೀಯ ಕ್ಷೇತ್ರಗಳಲ್ಲಿ ಅನಿರೀಕ್ಷಿತವಾದ ಯಶಸ್ಸನ್ನು ಸಾಧಿಸಿದರೂ, ವಿಶ್ವಶಾಂತಿ ರಕ್ಷಣೆ ಮತ್ತು ಅಂತರರಾಷ್ಟ್ರೀಯ ಅರಾಜಕತೆಯನ್ನು ತಪ್ಪಿಸುವ ಪ್ರಯತ್ನದಲ್ಲಿ ವಿಫಲವಾಯಿತು. ಅದು ಅಕ್ರಮಣಕಾರರ ವಿರುದ್ಧ ಕ್ರಮ ಕೈಗೊಳ್ಳಲು ಅಸಮರ್ಥವಾಯಿತು. ಇದು ಸಣ್ಣ ಪುಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಯಶಸ್ವಿಯಾದರೂ ತನ್ನ ಮುಖ್ಯ ಗುರಿ ಸಾಧನೆಯಲ್ಲಿ ವಿಫಲವಾಯಿತು. ಆದ್ದರಿಂದ ರಾಷ್ಟ್ರ ಸಂಘವನ್ನು (ಲೀಗ್ ಆಫ್ ನೇಷನ್ಸ್) ಖಂಡಿಸಿ ಅದನ್ನು "ಜಿನೀವಾ ಗಾಂಪರ ಗುಂಪು", "ಕಲ್ಪನೆಗಳ ರಾಷ್ಟ್ರ ಸಂಘ" ಮುಂತಾದ ಹೆಸರುಗಳಿಂದ ಅವಹೇಳನ ಮಾಡಲಾಗಿದೆ, ರಾಷ್ಟ್ರ ಸಂಘದ ವಿಫಲತೆಗೆ ಹಲವಾರು ಕಾರಣಗಳಿವೆ. ಅವು ಈ ಕೆಳಗಿನಂತೆ ಇವೆ :

1. ರಾಷ್ಟ್ರ ಸಂಘದ ಪ್ರಣಾಳಿಕೆಯು ವರ್ಸೇಲ್ಸ್ ಒಪ್ಪಂದದ ಒಂದು ಅವಿಭಾಜ್ಯ ಅಂಗವಾಗಿದ್ದು, ಆ ಒಪ್ಪಂದವನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯನ್ನೂ ರಾಷ್ಟ್ರ ಸಂಗದ ಮೇಲೆ ವಿಧಿಸಲಾಗಿತ್ತು. ಆದುದರಿಂದ ಜಾಗತಿಕ ಶಾಂತಿಯನ್ನು ಸ್ಥಾಪಿಸುವುದಕ್ಕಿಂತ ಹೆಚ್ಚಾಗಿ ಅದು ಒಪ್ಪಂದವನ್ನು ಕಾರ್ಯಗತಗೊಳಿಸುವುದಕ್ಕೆ ಹೆಚ್ಚು ಗಮನ ಕೊಡಬೇಕಾಗಿತ್ತು. ರಾಷ್ಟ್ರ ಸಂಘವನ್ನು ವರ್ಸೇಲ್ಸ್ ಒಪ್ಪಂದದ ಅವಿಭಾಜ್ಯ ಅಂಗವನ್ನಾಗಿ ಮಾಡದೆ ಪ್ರತ್ಯೇಕವಾಗಿದಿದ್ದರೆ ಉತ್ತಮವಾಗಿರುತ್ತಿತ್ತು. ಏಕೆಂದರೆ ವರ್ಸೇಲ್ಸ್ ಒಪ್ಪಂದವನ್ನು ಒಂದು 'ಸೇಡಿನ ಒಪ್ಪಂದ' (Treaty of Revenge) ಮತ್ತು ಅತ್ಯಂತ ಅವಹೇಳನಕಾರಿ ಒಪ್ಪಂದವೆಂದು ಅನೇಕ ರಾಷ್ಟ್ರಗಳು ಪರಿಗಣಿಸಿದ್ದವು. ರಾಷ್ಟ್ರ ಸಂಘದ ಪ್ರಣಾಳಿಕೆಯು ನಿರ್ಮಾಪಕರಾದ ಸೆನೆಟ್ ಮಾನ್ಯ ಮಾಡದೆ ಪ್ರಣಾಳಿಕೆಯನ್ನು ಒಪ್ಪಲು ನಿರಾಕರಿಸಿತು. ಆದುದರಿಂದ ಅಮೆರಿಕವು ಲೀಗಿನ ಸದಸ್ಯ ರಾಷ್ಟ್ರವಾಗದೆ ಹೊರಗುಳಿಯಿತು. ಅಂತಹ ಒಂದು ಪ್ರಬಲ ರಾಷ್ಟ್ರ ಹೊರಗುಳಿದಿದ್ದರಿಂದ ರಾಷ್ಟ್ರ ಸಂಘ ದುರ್ಬಲವಾಯಿತು. ಆದುದರಿಂದ ರಾಷ್ಟ್ರ ಸಂಘದ ಪ್ರಣಾಳಿಕೆಯು ವರ್ಸೇಲ್ಸ್ ಒಪ್ಪಂದದೊಡನೆಯೇ ಅವನತಿ ಹೊಂದಿತು. ಏಕೆಂದರೆ ಅದೊಂದು "ಅಪಖ್ಯಾತಿ ತಾಯಿಯ ಅಪಕೀರ್ತಿಯ ಮಗಳಂತಿತ್ತು" (a defamed daughter of a disreputed mother). ರಾಷ್ಟ್ರ ಸಂಘವು ಎಂದಿಗೂ ಕಳಂಕಿತ ತಾಯಿಯ ಗೌರವಾನ್ವಿತ ಮಗಳಾಗಿ ಜನಿಸಲಿಲ್ಲ.

2. ರಾಷ್ಟ್ರ ಸಂಘದ ಪ್ರಣಾಳಿಕೆಯೇ ದೋಷಪೂರ್ಣವಾಗಿದ್ದಿತು. ಅದು ಯುದ್ಧವನ್ನು ಕಾನೂನು ಬಾಹಿರವೆಂದು ಘೋಷಿಸಿರಲಿಲ್ಲ. ವಿವಾದ ಒಂದಕ್ಕೆ ಸಂಬಂಧಿಸಿದಂತೆ ಲೀಗ್ ತೀರ್ಮಾನ ತೆಗೆದುಕೊಂಡ ನಂತರ 3 ತಿಂಗಳ ಮೊದಲೇ ಯುದ್ಧವನ್ನು ಬಹಿಷ್ಕರಿಸಲಾಗಿತ್ತು ಅಷ್ಟೇ. ಅಂದರೆ ಮೂರು ತಿಂಗಳ ನಂತರ ಸದಸ್ಯ ರಾಷ್ಟ್ರಗಳು ಯುದ್ಧದ ಮಾರ್ಗವನ್ನು ಅನುಸರಿಸಬಹುದೆಂದು ರಾಷ್ಟ್ರ ಸಂಘದ ಪ್ರಣಾಳಿಕೆಯೇ ಒಪ್ಪಿಕೊಂಡಂತಾಗಿತ್ತು. ಆದುದರಿಂದ ರಾಷ್ಟ್ರ ಸಂಘವು ಯುದ್ಧವನ್ನು ತಡೆಗಟ್ಟುವ ಸಾಧನವಾಗಿದ್ದಿಲ್ಲವೆಂಬುದು ಇದರಿಂದ ತಿಳಿಯಬಹುದು.

3. ರಾಷ್ಟ್ರಸಂಘವು ಒಂದು ಜಾಗತಿಕ ಸಂಸ್ಥೆಯಾಗಿ ಬೆಳೆಯದೆ, ಅದೊಂದು ಐರೋಪ್ಯ ಸಂಸ್ಥೆಯಾಗಿಯೇ ಉಳಿದುಕೊಂಡಿತು. ಅದರ ಸದಸ್ಯತ್ವಕ್ಕೆ ಸಂಬಂಧಿಸಿದಂತೆ ಸರ್ವವ್ಯಾಪಕತೆ ಇರಲಿಲ್ಲ. ಅದರ ಬಹುತೇಕ ಸದಸ್ಯ ರಾಷ್ಟ್ರಗಳು ಯರೋಪ್ಯ ರಾಷ್ಟ್ರಗಳಾಗಿದ್ದವು. ಆದುದರಿಂದ ಲೀಗ್ ಆಫ್ ನೇಷನ್ಸ್ ಜಾಗತಿಕ ಸಂಸ್ಥೆಯಾಗಿ ಬೆಳೆಯದೆ ಕೇವಲ ಐರೋಪ್ಯ ಸಂಸ್ಥೆಯಾಗಿ ಮುಂದುವರಿಯಿತು. ಯುದ್ಧಾ ನಂತರದ ಕಾಲದಲ್ಲಿ ಅಮೆರಿಕ, ಜಪಾನ್ ಮತ್ತು ರಷ್ಯಾ ಈ ದೇಶಗಳು ವಿಶೇಷ ಪ್ರಾಬಲ್ಯವನ್ನು ಪಡೆದಿದ್ದರೂ, ಅವುಗಳು ಪ್ರಾರಂಭದಲ್ಲಿ ರಾಷ್ಟ್ರ ಸಂಘದ ಸ್ಥಾಪನೆಯಲ್ಲಿ ಅಮೆರಿಕ ಅಧ್ಯಕ್ಷರಾಗಿದ್ದ ವುಡ್ರೊ ವಿಲ್ಸನ್‌ರು ಪ್ರಮುಖ ಪಾತ್ರವಹಿಸಿದರೂ, ಅಮೆರಿಕ 1925ರವರೆಗೂ ಅದರ ಸದಸ್ಯ ರಾಷ್ಟ್ರವಾಗಿರಲಿಲ್ಲ. ರಷ್ಯಾವು 1925ರಲ್ಲಿ ಮಾತ್ರ ಅದರ ಸದಸ್ಯ ರಾಷ್ಟ್ರವಾಯಿತು. ಜಪಾನ್ 1932 ರಲ್ಲಿ ರಾಷ್ಟ್ರ ಸಂಘವನ್ನು ತ್ಯಜಿಸಿ ಹೊರ ಬಂದಿತು. ಈ ಪ್ರಬಲ ರಾಷ್ಟ್ರಗಳು ದೀರ್ಘಕಾಲ ರಾಷ್ಟ್ರ ಸಂಘದಿಂದ ಹೊರಗುಳಿದಿದ್ದು ಅದು ದುರ್ಬಲವಾಗಲು ಕಾರಣವಾಯಿತು.

4. ಜರ್ಮನಿ, ಜಪಾನ್ ಮತ್ತು ಇಟಲಿಗಳಲ್ಲಿ ಸರ್ವಾಧಿಕಾರಿ ಸರ್ಕಾರಗಳು ಉದಯಿಸಿ ವರ್ಸೇಲ್ಸ್ ಒಪ್ಪಂದದ ವಿಧಿಗಳನ್ನು ಧಿಕ್ಕರಿಸಿ ಮಿಲಿಟರಿ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ತೊಡಗಿದಾಗ ರಾಷ್ಟ್ರ ಸಂಘ ಅವುಗಳ ವಿರುದ್ಧ ಯಾವ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗಲಿಲ್ಲ. ಇದರಿಂದ ಲೀಗ್ ಮತ್ತಷ್ಟು ದುರ್ಬಲವಾಯಿತು. ಈ ರಾಷ್ಟ್ರಗಳು ತಮಗೆ ಹಿತವಾಗುವವರೆಗೆ ಮಾತ್ರ ರಾಷ್ಟ್ರ ಸಂಘದಲ್ಲಿದ್ದವು. ನಂತರ ಅವುಗಳಲ್ಲಿ ಭೂದಾಹ ಬೆಳೆದು ಲೀಗಿನ ಆದೇಶಗಳ ವಿರುದ್ಧ ಇತರ ದೇಶಗಳ ಮೇಲೆ ಆಕ್ರಮಣವನ್ನು ಪ್ರಾರಂಭಿಸಿದವು. 1936ರಲ್ಲಿ ಜರ್ಮನಿಯು ರೈನ್‌ಲ್ಯಾಂಡ್ ಪ್ರದೇಶವನ್ನೂ, 1938ರಲ್ಲಿ ಆಸ್ಟ್ರಿಯಾವನ್ನೂ, 1939ರಲ್ಲಿ ಜೆಕೊಸ್ಲೋವಾಕಿಯಾವನ್ನು ಆಕ್ರಮಿಸಿತು. ಆದರೆ ರಾಷ್ಟ್ರ ಸಂಘವು ಜರ್ಮನಿಯ ವಿರುದ್ಧ ಯಾವ ಕಠಿಣ ಕ್ರಮ ಕೈಗೊಳ್ಳದೆ ನಿಸ್ಸತ್ವವಾಗಿತ್ತು. ಜಪಾನ್ ಮಂಚೂರಿಯಾದ ಮೇಲೆ ದಾಳಿ ಮಾಡಿತು. ರಾಷ್ಟ್ರ ಸಂಘವು ಅದನ್ನು ತಡೆಯಲಾಗಲಿಲ್ಲ. ರಾಷ್ಟ್ರ ಸಂಘದ ಪ್ರಣಾಳಿಕೆಯನ್ನು ಉಲ್ಲಂಘಿಸಿದೆ ಎಂದು ಟೀಕಿಸಲಾಯಿತಷ್ಟೇ, ಆಗ ಜಪಾನ್ ರಾಷ್ಟ್ರ ಸಂಘವನ್ನು ತ್ಯಜಿಸಿತು. 1935ರಲ್ಲಿ ಇಟಲಿಯು ಇಥಿಯೋಪಿಯಾದ ಮೇಲೆ ಆಕ್ರಮಣ ಮಾಡಿತು. ಲೀಗ್ ಇಟಲಿಯ ಮೇಲೆ ಆರ್ಥಿಕ ಮತ್ತು ರಾಜತಾಂತ್ರಿಕ ದಿಗ್ಬಂದವನ್ನು ಹಾಕಿತು. ಆದರೆ ಸದಸ್ಯ ರಾಷ್ಟ್ರಗಳು ಸಹಕರಿಸಲಿಲ್ಲ. ಇಟಲಿಯು ರಾಷ್ಟ್ರ ಸಂಘವನ್ನು ತ್ಯಜಿಸಿತು. ಅಲ್ಲಿಗೆ ರಾಷ್ಟ್ರ ಸಂಘದ ಬಲಹೀನತೆ ಸ್ಪಷ್ಟವಾಯಿತು.

5. ರಾಷ್ಟ್ರ ಸಂಘಕ್ಕೆ ದಂಡನಾಶಕ್ತಿ ಇರಲಿಲ್ಲ. ಅದು ಸಲಹೆ ನೀಡುವ ಅಧಿಕಾರ ಪಡೆದಿದ್ದಿತೇ ವಿನಃ ಪ್ರಣಾಳಿಕೆಯನ್ನು ಉಲ್ಲಂಘಿಸಿ ಆಕ್ರಮಣಕಾರಿ ರಾಷ್ಟ್ರವನ್ನು ಮಿಲಿಟರಿ ಕಾರ್ಯಾಚರಣೆಯ ಮೂಲಕ ದಂಡಿಸುವ ಶಕ್ತಿ ಪಡೆದಿರಲಿಲ್ಲ. ಪರಿಣಾಮವಾಗಿ ಪ್ರತಿಯೊಂದು ರಾಷ್ಟ್ರವೂ ತನಗೆ ಸರಿ ಎನಿಸಿದ ರೀತಿಯಲ್ಲಿ ವರ್ತಿಸಲು ಅವಕಾಶವಿತ್ತು. ಅದೊಂದು ನಿಷ್ಪಕ್ಷಪಾತವಾದ ಸಂಸ್ಥೆಯಾಗಿರಲಿಲ್ಲ. ಇದರಿಂದ ಲೀಗ್ ವಿಫಲವಾಯಿತು.

6. ಅಂದಿನ ಪ್ರಬಲ ರಾಷ್ಟ್ರಗಳು ಆಕ್ರಮಣಕಾರಿ ರಾಷ್ಟ್ರದ ವಿರುದ್ಧ ರಾಷ್ಟ್ರ ಸಂಘದ ಪರವಾಗಿ ಯುದ್ಧ ಹೂಡಲು ಸಿದ್ಧವಿರಲಿಲ್ಲ. ಅವುಗಳು ತಮ್ಮ ಮಿಲಿಟರಿ ಶಕ್ತಿಯನ್ನು ರಾಷ್ಟ್ರ ಸಂಘದ ಪರವಾಗಿ ಹಾಗೂ ಸಾಮೂಹಿಕ ರಕ್ಷಣೆಗಾಗಿ ಬಳಸಲು ಮುಂದೆ ಬಂದಿದ್ದರೆ ಲೀಗ್ ವಿಫಲಗೊಳ್ಳುತ್ತಿರಲಿಲ್ಲ. ಪ್ರಬಲ ರಾಷ್ಟ್ರಗಳ ಅಸಹಕಾರವು ಲೀಗ್ ವಿಫಲಗೊಳ್ಳಲು ಕಾರಣವಾಯಿತು.

7. ರಾಷ್ಟ್ರ ಸಂಘದ ಪ್ರಮುಖ ನಿರ್ಣಯಗಳು ಸರ್ವಾನುಮತದಿಂದ ಅಂಗೀಕರಿಸಬೇಕೆಂಬ ನಿಯಮವಿದ್ದ ಕಾರಣ ಶೀಘ್ರವಾಗಿ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಿರಲಿಲ್ಲ. ಅದೊಂದು ಅಸಾಧಾರಣ ವಿಧಿಯಾಗಿತ್ತು. ವಾಸ್ತವಾಂಶವನ್ನು ಅರ್ಥಮಾಡಿಕೊಂಡಿರಲಿಲ್ಲ.

8. ರಾಷ್ಟ್ರ ಸಂಘವನ್ನು ಸ್ಥಾಪಿಸಿದ ರಾಷ್ಟ್ರಗಳೇ ಅದರ ಧ್ಯೇಯೋದ್ದೇಶಗಳಲ್ಲಿ ನಂಬಿಕೆ, ವಿಶ್ವಾಸ ಹಾಗೂ ಸದ್ಭಾವನೆವಿರಲಿಲ್ಲ. ಅದರ ಸದಸ್ಯ ರಾಷ್ಟ್ರಗಳು ಒಂದು ಸಾಮಾನ್ಯ ಉದ್ದೇಶ ಸಾಧನೆಗಾಗಿ ಒಳಗೊಂಡಿರಲಿಲ್ಲ. ಮೇಲಾಗಿ ಅವುಗಳು ಆಗಿಂದಾಗೆ ರಾಷ್ಟ್ರ ಸಂಘದ ತಮ್ಮ ಸದಸ್ಯತ್ವವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದವು. ಇದೂ ಸಹ ಅದರ ದುರ್ಬಲತೆಗೆ ಕಾರಣವಾಯಿತು.

9. ಬ್ರಿಟನ್ ಮತ್ತು ಫ್ರಾನ್ಸ್‌ಗಳ ನೀತಿಯೂ ಲೀಗಿನ ವಿಫಲತೆಗೆ ಕಾರಣವಾಯಿತು. ಜಪಾನ್, ಇಟಲಿ ಮತ್ತು ಜರ್ಮನಿ ದೇಶಗಳು ಆಕ್ರಮಣವೆಸಗಿದಾಗ ಬ್ರಿಟನ್ ಅನುಸರಿಸಿದಂತಹ ದುರಾಕ್ರಮಣಕಾರಿಯನ್ನು ಶಮನಗೊಳಿಸುವ ನೀತಿಯು (Policy of Appeasement) ರಾಷ್ಟ್ರ ಸಂಘದ ವೈಫಲ್ಯಕ್ಕೆ ಒಂದು ಮುಖ್ಯ ಕಾರಣ. ಬ್ರಿಟನ್ ಶಕ್ತ ರಾಷ್ಟ್ರವಾಗಿದ್ದುದರಿಂದ ರಾಷ್ಟ್ರ ಸಂಘದ ಮಾನರಕ್ಷಣೆ ಮಾಡಬೇಕಾಗಿದ್ದಿತು. ಆದರೆ ಅದು ಜಾಗತಿಕ ಬಿಕ್ಕಟ್ಟುಗಳನ್ನು ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಕೋನದಿಂದ ನೋಡಿತು. ರಾಷ್ಟ್ರ ಸಂಘವನ್ನು ಹಳ್ಳಕ್ಕೆ ತಳ್ಳಲಾಯಿತು. ಪ್ರಬಲ ರಾಷ್ಟ್ರಗಳ ವಿಭಿನ್ನ ರಾಷ್ಟ್ರೀಯ ಹಿತಾಸಕ್ತಿಗಳು ರಾಷ್ಟ್ರ ಸಂಘದ ನ್ಯಾಯಿಕ ತತ್ವಕ್ಕಿಂತಲೂ ಮಿಗಿಲಾಗಿದ್ದು ಲೀಗಿನ ಸ್ಥಾನಮಾನಕ್ಕೆ ಧಕ್ಕೆ ತಂದೊಡಿದ್ದವು. ಹೀಗೆ ಬೃಹತ್ ರಾಷ್ಟ್ರಗಳ ಕಪಟತನ ಮತ್ತು ಅವು ಅನುಸರಿಸಿದ ತೃಪ್ತಿಪಡಿಸುವ ನೀತಿಯು ಲೀಗಿನ ವಿಫಲತೆಗೆ ಕಾರಣವಾಯಿತು.

10. ರಾಷ್ಟ್ರ ಸಂಘದ ವಿವಿಧ ಸದಸ್ಯ ರಾಷ್ಟ್ರಗಳು ತಮ್ಮದೇ ಆದ ಬೇರೆ ಬೇರೆ ಉದ್ದೇಶಗಳಿಗಾಗಿ ಸೇರಿದ್ದವು. ಬ್ರಿಟನ್ ಯುರೋಪಿನಲ್ಲಿ ಶಕ್ತಿ ಸಮತೋಲನವನ್ನು ಕಾಪಾಡಲು ರಾಷ್ಟ್ರ ಸಂಘವನ್ನು ಸೇರಿದ್ದರೆ, ಫ್ರಾನ್ಸ್ ತನ್ನ ಶತ್ರುವಾದ ಜರ್ಮನಿಯನ್ನು ದುರ್ಬಲಗೊಳಿಸಲು ಲೀಗ್‌ನ್ನು ಸೇರಿದ್ದಿತು. ಹಾಗೆಯೇ ಜರ್ಮನಿಯು, ತನಗೆ ಅವಹೇಳನಕಾರಿಯಾದ ವರ್ಸೇಲ್ಸ್ ಒಪ್ಪಂದದ ಷರತ್ತುಗಳನ್ನು ಕಿತ್ತೆಸೆಯಲು ಲೀಗ್‌ನ್ನು ಸೇರಿತ್ತು. ಹೀಗೆ, ವಿವಿಧ ಸದಸ್ಯ ರಾಷ್ಟ್ರಗಳು ರಾಷ್ಟ್ರ ಸಂಘವನ್ನು ತಮ್ಮ ತಮ್ಮ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳಲು ಒಂದು ಸಾಧನವನ್ನಾಗಿ ಉಪಯೋಗಿಸಿಕೊಂಡವೇ ವಿನಃ ಅಂತರರಾಷ್ಟ್ರೀಯ ಸಹಕಾರದ ಒಂದು ವೇದಿಕೆಯನ್ನಾಗಿ ಬಳಸಿಕೊಳ್ಳಲಿಲ್ಲ. ಬ್ರಿಟನ್ ಮತ್ತು ಫ್ರಾನ್ಸ್ ಲೀಗಿನ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲು ಯಾವ ಸಹಾಯವನ್ನೂ ಮಾಡಲಿಲ್ಲ ಇದು ರಾಷ್ಟ್ರ ಸಂಘದ ವಿಫಲತೆಗೆ ಮತ್ತೊಂದು ಕಾರಣವಾಗಿತ್ತು. **ಪಾಟರ್** ಅವರು ಹೇಳಿರುವಂತೆ **"**ರಾಷ್ಟ್ರಗಳ ಸಂಘ ವಿಫಲವಾಗಲಿಲ್ಲ, ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳು ಅದನ್ನು ವಿಫಲಗೊಳಿಸಿವೆ**"**.

11. ರಾಷ್ಟ್ರ ಸಂಘವನ್ನು ಸೇರಿದ್ದ ರಾಷ್ಟ್ರಗಳು ಲೀಗಿನ ಯಶಸ್ಸಿಗೆ ಶ್ರಮಿಸಲಿಲ್ಲ. ಸದಸ್ಯ ರಾಷ್ಟ್ರಗಳಲ್ಲಿ ಪರಸ್ಪರ ಸಹಕಾರವಿರಲಿಲ್ಲ. ಉತ್ತಮ ಆಡಳಿತ ವ್ಯವಸ್ಥೆಯನ್ನು ಲೀಗ್ ಹೊಂದಿದ್ದರೂ ಜಾಗತಿಕ ಶಾಂತಿಯನ್ನು ಸ್ಥಾಪಿಸುವ ತನ್ನ ಗುರಿಯನ್ನು ಇದರಿಂದ ಈಡೇರಿಸಿಕೊಳ್ಳಲಾಗಲಿಲ್ಲ.

12. ವರ್ಸೇಲ್ಸ್ ಒಪ್ಪಂದದ ನಂತರ ಯುರೋಪಿನಲ್ಲಿ ಮಿತ್ರ ರಾಷ್ಟ್ರಗಳು ಅತ್ಯಂತ ಹೆಚ್ಚಿನ ಅಧಿಕಾರವನ್ನು ಪಡೆದವು. ಇವು ಪ್ರಮುಖ ಅಂತರರಾಷ್ಟ್ರೀಯ ವಿಷಯಗಳನ್ನು ಲೀಗಿನ ಹೊರಗೇ ಚರ್ಚಿಸತೊಡಗಿದವು. ಲೀಗನ್ನು ಈ ರಾಷ್ಟ್ರಗಳು ಗಣನೆಗೆ ತೆಗೆದುಕೊಳ್ಳಲಿಲ್ಲ. ರಾಷ್ಟ್ರ ಸಂಘದ ಸದಸ್ಯರಾಗದೇ ಇದ್ದ ರಾಷ್ಟ್ರಗಳು ಸಹ ಸ್ವಾಭಾವಿಕವಾಗಿ ತಮ್ಮ ಸಮಸ್ಯೆಗಳನ್ನು ಲೀಗಿನ ಹೊರಗೆ ಚರ್ಚಿಸುತ್ತಿದ್ದವು. ಈ ಕಾರಣಗಳಿಂದ ಲೀಗಿನ ಪ್ರಭಾವ ಕುಂದತೊಡಗಿತು.

13. **ಪಾಟರ್**ರವರು ರಾಷ್ಟ್ರ ಸಂಘದ ಅವನತಿಗೆ ಈ ಕೆಳಗಿನ ಕಾರಣಗಳನ್ನು ನೀಡಿದ್ದಾರೆ. **"**ಲೀಗ್ ಆಫ್ ನೇಷನ್ಸ್**"** ಅವನತಿ ಹೊಂದಲು ಜರ್ಮನಿ, ಜಪಾನ್, ಇಟಲಿಗಳ ಜನರು ತಮ್ಮ ಸರ್ಕಾರಗಳ ಆಕ್ರಮಣಕಾರಿ